ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 10 ಬುಧವಾರ 2023

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 44 | ಸಂಚಿಕೆ: 24 | ಪುಟಗಳು: 12

ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

₹4

ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಬಂಧನ


ಇಮ್ರಾನ್ ಖಾನ್

ಇಸ್ಲಾಮಾಬಾದ್: ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರನ್ನು ಇಂದು(ಮಂಗಳವಾರ) ಇಸ್ಲಾಮಾಬಾದ್ ನ್ಯಾಯಾಂಗ ಸಂಕೀರ್ಣದಲ್ಲಿ ರೇಂಜರ್ಸ್ ಅಧಿಕಾರಿಗಳು ಬಂಧಿಸಿದ್ದಾರೆ. ಸ್ಥಳೀಯ ಮಾಧ್ಯಮ ವರದಿಗಳ ಪ್ರಕಾರ ಅಲ್ ಖಾದಿರ್ ಟ್ರಸ್ಟ್ ಭ್ರಷ್ಟಾಚಾರ ಪ್ರಕರಣದಲ್ಲಿ ಖಾನ್ ಅವರನ್ನು ಬಂಧಿಸಲಾಗಿದೆ. ಪಾಕಿಸ್ತಾನ್ ತೆಹ್ರೀಕ್-ಎ-ಇನ್ಸಾಫ್ ಈ ಬಂಧನವನ್ನು ಅಪಹರಣ ಎಂದು ಕರೆದಿದೆ. ಖಾನ್ ಬಂಧನದ ಉದ್ದೇಶದ ಬಗ್ಗೆ ನ್ಯಾಯಾಲಯಕ್ಕೂ ತಿಳಿದಿರಲಿಲ್ಲ.

ಐಎಚ್‌ಸಿ ಮುಖ್ಯ ನ್ಯಾಯಮೂರ್ತಿ ಅಮೀರ್ ಫಾರೂಕ್, ಖಾನ್ ಬಂಧನದ ಹಿಂದಿನ ಕಾರಣದ ಬಗ್ಗೆ ತನಗೂ ತಿಳಿದಿಲ್ಲ ಎಂದು ಹೇಳಿದ್ದಾರೆ. ಬಂಧನದ ಹಿಂದೆ ಯಾರಿದ್ದಾರೆ ಮತ್ತು ಯಾವ ಪ್ರಕರಣದಲ್ಲಿ ಇಮ್ರಾನ್ ಅವರನ್ನು ಬಂಧಿಸಲಾಗಿದೆ ಎಂದು ತಕ್ಷಣವೇ ತಿಳಿಸುವಂತೆ ನ್ಯಾಯಮೂರ್ತಿ ಫಾರೂಕ್ ಉನ್ನತ ಪೊಲೀಸ್ ಅಧಿಕಾರಿಗಳಿಗೆ ಸೂಚಿಸಿದ್ದಾರೆ ಎಂದು ಎಕ್ಸ್‌ಪ್ರೆಸ್ ಟ್ರಿಬ್ಯೂನ್ ವರದಿ ಮಾಡಿದೆ.

ಅಲ್-ಖಾದಿರ್ ಟ್ರಸ್ಟ್ ಕೇಸ್: ಸ್ಥಳೀಯ ಮಾಧ್ಯಮ ವರದಿಗಳ ಪ್ರಕಾರ ಇಮ್ರಾನ್ ಖಾನ್‌ರನ್ನು ಅಲ್-ಖಾದಿರ್ ಟ್ರಸ್ಟ್ ಭ್ರಷ್ಟಾಚಾರ ಪ್ರಕರಣದಲ್ಲಿ ಬಂಧಿಸಲಾಗಿದೆ. ಖಾನ್ ಅವರು ತಮ್ಮ ಅಧಿಕಾರಾವಧಿಯಲ್ಲಿ ಪಂಜಾಬ್‌ನ ಝೀಲಂನಲ್ಲಿ ಗುಣಮಟ್ಟದ ಶಿಕ್ಷಣವನ್ನು ಒದಗಿಸಲು ಯುನಿವರ್ಸಿಟಿಯೊಂದನ್ನು ಸ್ಥಾಪಿಸುವ ಭರವಸೆ ನೀಡಿದ್ದರು. ಅವರ ಪತ್ನಿ ಬುಶ್ರಾ ಬೀಬಿ ಮತ್ತು ಆಪ್ತ ಸಹಾಯಕರಾದ ಜುಲ್ಫಿಕರ್ ಬುಖಾರಿ ಮತ್ತು ಬಾಬರ್ ಈ ಯೋಜನೆಯಲ್ಲಿ ಭಾಗಿಯಾಗಿದ್ದರು.

ತನ್ನ ಭರವಸೆಯನ್ನು ಪೂರೈಸುವ ಸಲುವಾಗಿ, ಖಾನ್ ಅಲ್-ಖಾದಿರ್ ಯೂನಿವರ್ಸಿಟಿ ಪ್ರಾಜೆಕ್ಟ್ ಟ್ರಸ್ಟ್ ಅನ್ನು ಸ್ಥಾಪಿಸಿದರು. ಆಗಿನ ಪಿಟಿಐ ಸರ್ಕಾರ ಮತ್ತು ಆಸ್ತಿ ಉದ್ಯಮಿ ನಡುವೆ ಒಪ್ಪಂದ ಮಾಡಿದ್ದು, ಇದು ದೇಶದ ಖಜಾನೆಗೆ 190 ಮಿಲಿಯನ್ ಪೌಂಡ್‌ಗಳ ನಷ್ಟವನ್ನು ಉಂಟು ಮಾಡಿದೆ ಎಂದು ವರದಿಯಾಗಿದೆ.

ಅಲ್ ಖಾದಿರ್ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಲು ಸೊಹಾವಾದ ಮೌಜಾ ಬಕ್ರಾಲಾದಲ್ಲಿ 458 ಎಕರೆಗೂ ಹೆಚ್ಚು ಭೂಮಿ ರೂಪದಲ್ಲಿ ಅನಗತ್ಯ ಲಾಭವನ್ನು ಪಡೆದ ಆರೋಪವೂ ಅವರ ಮೇಲಿದೆ.

ಕಳೆದ ವರ್ಷ ಏಪ್ರಿಲ್‌ನಲ್ಲಿ ಅವಿಶ್ವಾಸ ಮತದ ಮೂಲಕ ಅವರನ್ನು ಪದಚ್ಯುತಗೊಳಿಸಿದ ನಂತರ ಖಾನ್ ಅವರು ಹಲವಾರು ಪ್ರಕರಣಗಳನ್ನು ಎದುರಿಸುತ್ತಿದ್ದಾರೆ. ಈ ಎಲ್ಲಾ ಪ್ರಕರಣಗಳನ್ನು ಆಡಳಿತಾರೂಢ ಮೈತ್ರಿಕೂಟದ ರಾಜಕೀಯ ಸೇಡು ಎಂದು ತಿರಸ್ಕರಿಸಿದ್ದಾರೆ. ಪ್ರಸ್ತುತ, ಖಾನ್ ಭಯೋತ್ಪಾದನೆ, ಧರ್ಮನಿಂದನೆ, ಕೊಲೆ, ಹಿಂಸೆ ಮತ್ತು ಹಿಂಸಾಚಾರಕ್ಕೆ ಪ್ರಚೋದನೆಗೆ ಸಂಬಂಧಿಸಿದಂತೆ 140ಕ್ಕೂ ಹೆಚ್ಚು ಪ್ರಕರಣಗಳನ್ನು ಎದುರಿಸುತ್ತಿದ್ದಾರೆ.

ಪಾಕ್‌ನಲ್ಲಿ ಹಿಂಸಾಚಾರ; ಸೇನಾ ಪ್ರಧಾನ ಕಚೇರಿ ಧ್ವಂಸ: ಕಂಡಲ್ಲಿ ಗುಂಡು ಆದೇಶ





ಇಸ್ಲಾಮಾಬಾದ್: ಇಮ್ರಾನ್ ಖಾನ್ ಅವರನ್ನು ಬಂಧಿಸಿದ ನಂತರ ಅವರ ಪಕ್ಷ ಪಾಕಿಸ್ತಾನ್ ತೆಹ್ರೀಕ್-ಎ-ಇನ್ಸಾಫ್ ಇಸ್ಲಾ ಮಾಬಾದ್‌ನಲ್ಲಿ ಪ್ರತಿಭಟನೆ ಮತ್ತು ಗದ್ದಲ ಸೃಷ್ಟಿಸಿದೆ. ಪಾಕ್ ಪೊಲೀಸರು ನಿಷೇಧಾಜ್ಞೆ ಜಾರಿಗೊಳಿಸಿದ್ದಾರೆ. ಪ್ರತಿಭಟನಾಕಾರರು ಲಾಹೋರ್‌ನಲ್ಲಿರುವ ಸೇನಾ ಕಮಾಂಡರ್‌ಗಳ ನಿವಾಸ ಮತ್ತು ರಾವಲ್ಪಿಂಡಿಯಲ್ಲಿರುವ ಸೇನಾ ಪ್ರಧಾನ ಕಚೇರಿಯ ಆವರಣವನ್ನು ಪ್ರವೇಶಿಸಿದ್ದು, ಅಲ್ಲಿ ಪರಿಸ್ಥಿತಿ ಕೈಮೀರಿ ಹೋಗುತ್ತಿದೆ. ಪಾಕಿಸ್ತಾನ ಸೇನೆಯ ರಾವಲ್ಪಿಂಡಿ ಪ್ರಧಾನ ಕಚೇರಿಯನ್ನು ಧ್ವಂಸಗೊಳಿಸಲಾಗಿದೆ. ಕಾರ್ಪ್ಸ್ ಕಮಾಂಡರ್ ಮನೆಗೆ ಖಾನ್ ಬೆಂಬಲಿಗರು ಬೆಂಕಿ ಹಚ್ಚಿದ್ದಾರೆ. ಈ ಹಿನ್ನೆಲೆಯಲ್ಲಿ ದೇಶದಲ್ಲಿ ಸೆಕ್ಷನ್ 144 ಜಾರಿಗೊಳಿಸಲಾಗಿದೆ. ಅಲ್ಲದೆ ಪಾಕ್ ಸೇನೆಯು ಪ್ರತಿಭಟನಾಕಾರರಿಗೆ ಕಂಡಲ್ಲಿ ಗುಂಡಿಕ್ಕುವ ಆದೇಶ ನೀಡಿದೆ. ಖಾನ್ ಬೆಂಬಲಿಗರು ಲಾಹೋರ್ ಕ್ಯಾಂಟ್‌ನಲ್ಲಿರುವ ಕಾರ್ಪ್ಸ್ ಕಮಾಂಡರ್ ಮನೆ ಮೇಲೆ ದಾಳಿ ನಡೆಸಿದರು. ಸರ್ಗೋಧಾ, ಪೇಶಾವರ, ಲಾಹೋರ್ ಮತ್ತು ಮರ್ದಾನ್‌ನಲ್ಲಿರುವ ಕಾರ್ಪ್ಸ್ ಕಮಾಂಡರ್ ಹೆಡ್‌ಕ್ವಾರ್ಟರ್ಸ್ ಮೇಲೆ ಪ್ರಮುಖ ದಾಳಿಗಳು ನಡೆದಿವೆ.

ಎಸ್‌ಎಸ್‌ಎಲ್‌ಸಿ: ಕೊಡಗು ಮಾಡೆಲ್ ಸ್ಕೂಲ್, ಬಿವಿಬಿಗೆ ಶೇ.100 ಫಲಿತಾಂಶ


ಮೊಹಮ್ಮದ್ ಎಸ್. ಶಿರಾಜುದ್ದೀನ್

ಮೈಸೂರು, ಮೇ 9-ಶ್ರೀ ಕಾವೇರಿ ಕೊಡವ ಅಸೋಸಿಯೇಷನ್, ಮೈಸೂರಿನ ವಿದ್ಯಾಶಂಕರ ಬಡಾವಣೆಯಲ್ಲಿ ನಿರ್ವಹಣೆ ಮಾಡುತ್ತಿರುವ ಕೊಡಗು ಮಾಡೆಲ್ ಸ್ಕೂಲ್‌ಗೆ ಪ್ರಸಕ್ತ 2022-23ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.100ರಷ್ಟು ಫಲಿತಾಂಶ ಬಂದಿದೆ.

ಮೊಹಮ್ಮದ್ ಎಸ್. ಶಿರಾಜುದ್ದೀನ್ 625 ಅಂಕಗಳಿಗೆ 598 (ಶೇ.95.68) ಅಂಕ ಗಳಿಸುವ ಮೂಲಕ ಶಾಲೆಗೆ ಟಾಪರ್ ಆಗಿ ಹೊರಹೊಮ್ಮಿದ್ದಾರೆ. ಎಂ.ಪಿ.ನಿವೇದಾ-594 (ಶೇ.95.04); ಭವಿಷ್ ಕೆ.ಗೌಡ-538 (ಶೇ.86.08); ಪಿ.ಪ್ರೇಮ್‌ಸಾಗರ್-533 (ಶೇ.85.28); ಎಸ್.ಲೋಹಿತ್‌ರಾಜೇ ಅರಸ್-530 (ಶೇ.84.8); ಹೆಚ್.ಯು.ತೇಜಸ್‌ಗೌಡ-525 (ಶೇ.84); ಆರ್.ಪ್ರೀತಿಕಾ-519 (ಶೇ.83.04); ಎನ್.ಸಂಜನಾ-508 (ಶೇ.81.28); ಎಸ್.ಪ್ರೀತಮ್‌ರಾಜ್-507 (ಶೇ.81.12); ಆರ್.ಬಿಂದು-501 (ಶೇ.80.16); ಎನ್.ಎಸ್.ನಂದೀಶ್-493 (ಶೇ.78.88); ಎಂ.ಯು.ಅನಿರುದ್-488 (ಶೇ.78.08); ಡಿ.ಆದಿತ್ಯಾ-478 (76.48); ಹೆಚ್.ಕಿರಣ್-462 (ಶೇ.73.92); ಎಸ್.ಪುರುಷೋತ್ತಮ್-447 (ಶೇ.71.52); ಡಿ.ಎಂ.ನಿತೀಶ್‌ಗೌಡ-438 (ಶೇ.70.08); ಎಂ.ತೇಜಸ್-396 (ಶೇ.63.36); ಎಂ.ಹರ್ಷವರ್ಧನ್-375 (ಶೇ.60); ಪಿ.ಯದು ನಂದನ್-362 (ಶೇ.57.92) ಅಂಕ ಗಳಿಸಿ ತೇರ್ಗಡೆಯಾಗಿದ್ದಾರೆ.

ಬಿವಿಬಿ ಶಾಲೆಗೆ ಶೇ.100 ಫಲಿತಾಂಶ

ಮೈಸೂರಿನ ವಿಜಯನಗರದಲ್ಲಿರುವ ಭಾರತೀಯ ವಿದ್ಯಾಭವನ (ಬಿವಿಬಿ) ಶಾಲೆಯೂ ಶೇ.100ರಷ್ಟು ಫಲಿತಾಂಶ ಗಳಿಸುವ ಮೂಲಕ ಉತ್ತಮ ಸಾಧನೆ ಮಾಡಿದೆ. ಪರೀಕ್ಷೆಗೆ ಹಾಜರಾಗಿದ್ದ 161 ವಿದ್ಯಾರ್ಥಿಗಳ ಪೈಕಿ 124 ವಿದ್ಯಾರ್ಥಿಗಳು ಉನ್ನತ ಶ್ರೇಣಿಯಲ್ಲಿ ಮತ್ತು ಉಳಿದ 37 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾಗಿದ್ದಾರೆ.

ರಂಗರಾವ್ ವಿಶೇಷಚೇತನರ ಶಾಲೆಗೆ ಶೇ.100 ಫಲಿತಾಂಶ



ಮೈಸೂರು, ಮೇ 9- ಎನ್‌ಆರ್ ಗ್ರೂಪ್‌ನ ಎನ್‌ಆರ್ ಫೌಂಡೇಷನ್‌ನ ರಂಗರಾವ್ ಸ್ಮಾರಕ ವಿಕಲಚೇತನರ ಶಾಲೆಯು (ಆರ್‌ಎಂಎಸ್‌ಡಿ) 2022-23ರ ಸಾಲಿನಲ್ಲಿ ಕರ್ನಾಟಕ ಎಸ್‌ಎಸ್‌ಎಲ್‌ಸಿಯ ಫಲಿತಾಂಶಗಳಲ್ಲಿ ಶೇ.100ರಷ್ಟು ಸಾಧನೆ ಮಾಡಿರುವುದಲ್ಲದೆ, ಎರಡು ಡಿಸ್ಟಿಂಕ್ಷನ್‌ಗಳನ್ನು ಪಡೆದುಕೊಂಡಿದ್ದಾರೆ.

ಅನಿತಾ ಶೇ.94 ಅಂಕಗಳೊಂದಿಗೆ ಅಗ್ರಸ್ಥಾನ ಪಡೆದಿದ್ದು, ಪದ್ಮಾ ಶೇ.90 ಅಂಕಗಳೊಂದಿಗೆ ನಂತರದ ಸ್ಥಾನ ಪಡೆದಿದ್ದಾರೆ. ಶಾಲೆಯಿಂದ ಒಟ್ಟು 14 ವಿದ್ಯಾರ್ಥಿಗಳು ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಹಾಜರಾಗಿದ್ದರು. ಅದರಲ್ಲಿ 2 ವಿದ್ಯಾರ್ಥಿಗಳು ಎ+ ಅಂಕ ಪಡೆದರೆ ಇಬ್ಬರು ವಿದ್ಯಾರ್ಥಿಗಳು ಎ, 2 ವಿದ್ಯಾರ್ಥಿ ಬಿ+, 7 ಬಿ, 1 ಸಿ ಅಂಕಗಳನ್ನು ಗಳಿಸಿದ್ದಾರೆ.

ಎನ್‌ಆರ್ ಗ್ರೂಪ್‌ನ ಛೇರ್ಮನ್ ಆರ್.ಗುರು ಅವರು ಆರ್‌ಎಂಎಸ್‌ಡಿಯ ವಿದ್ಯಾರ್ಥಿಗಳ ಸಾಧನೆ ಬಗ್ಗೆ ಮಾತನಾಡಿ, ವಿದ್ಯಾರ್ಥಿಗಳು ಸಾಧಿಸಿರುವ ಅಂಕಗಳು ಗಮನ ಸೆಳೆಯುವಂತಹವುಗಳಾಗಿವೆ. ಇದು ಅವರ ಕಠಿಣ ಪರಿಶ್ರಮ ಜೊತೆಗೆ ಶಿಕ್ಷಕರು ಮತ್ತು ಸಿಬ್ಬಂದಿಯ ಪರಿಶ್ರಮದ ಫಲವಾಗಿದೆ. ಈ ಫಲಿತಾಂಶ ವಿಕಲಚೇತನರ ಸಬಲೀಕರಿಸುವ ನಮ್ಮ ಮೂಲ ಉದ್ದೇಶವನ್ನು ಸಾಧಿಸಲು ನೆರವಾಗುತ್ತವೆ. ಅಲ್ಲದೆ, ಅವರಿಗೆ ಸ್ವತಂತ್ರ ಮತ್ತು ಗೌರವಯುತವಾಗಿ ಜೀವನ ನಡೆಸಲು ಸಹಾಯವಾಗುತ್ತದೆ ಎಂದರು.

ಚುನಾವಣೆಗೆ ಬಸ್ ಮೀಸಲು: ಸಂಚಾರ ವ್ಯತ್ಯಯ, ಜನರು ಹೈರಾಣ





ಮೈಸೂರು, ಮೇ 9(ಸಿಎನ್)-ಚುನಾವಣಾ ಕಾರ್ಯಗಳಿಗೆ ನಗರ ಸಾರಿಗೆ ಬಸ್‌ಗಳನ್ನು ಬಳಸಲಾಗುತ್ತಿದ್ದು, ನಗರ ಬಸ್ ನಿಲ್ದಾಣದಲ್ಲಿ ತಮ್ಮ ಊರುಗಳಿಗೆ ತೆರಳಲು ಸಾರಿಗೆ ವ್ಯವಸ್ಥೆ ಇಲ್ಲದೇ ಪ್ರಯಾಣಿಕರು ಪರದಾಡುತ್ತಿದ್ದಾರೆ.

ಮೈಸೂರು ನಗರ ಸಾರಿಗೆ ಬಸ್ ನಿಲ್ದಾಣದಲ್ಲಿ ಬಸ್‌ಗಳಿಲ್ಲದೇ ಕೂಲಿ ಕಾರ್ಮಿಕರು, ಮನೆಗೆಲಸದವರು, ಕಾಲೇಜ್, ಶಾಲಾ ವಿದ್ಯಾರ್ಥಿಗಳು ಹಾಗೂ ವಯೋವೃದ್ಧರು ಬಸ್ ಇಲ್ಲದೇ ಬಿರು ಬಿಸಿಲಿನಲ್ಲಿ ಹೈರಾಣರಾದರು. ಗ್ರಾಮೀಣ ಭಾಗಗಳತ್ತ ಹೆಚ್ಚುವರಿ ಬಸ್‌ಗಳು ಇಲ್ಲದೇ ಅವರ ಊರುಗಳಿಗೆ ವಾಪಸಾಗಲು ಸುಮಾರು 3 ಗಂಟೆಗಳವರೆಗೆ ಕಾಯುವ ಸ್ಥಿತಿ ಇತ್ತು.

> **511 ಬಸ್‌ಗಳು ಚುನಾವಣಾ ಕರ್ತವ್ಯಕ್ಕೆ**
>
> ನಮ್ಮ ವಿಭಾಗದಲ್ಲಿ 1060 ಬಸ್‌ಗಳ ಪೈಕಿ ಚುನಾವಣಾ ಕೆಲಸಗಳಿಗೆ 398, ಪೊಲೀಸ್ ಇಲಾಖೆಗೆ 113 ಬಸ್‌ಗಳನ್ನು ನಿಯೋಜಿಸಲಾಗಿದೆ. ಹಾಗಾಗಿ ಉಳಿದ 511 ಬಸ್‌ಗಳ ಮೂಲಕವೇ ಪ್ರಯಾಣಿಕರ ಸಂಚಾರಕ್ಕೆ ಮೀಸಲಿಟ್ಟಿದ್ದೇವೆ. ಈ ಮೊದಲೇ ಪ್ರಕಟಣೆ ಹೊರಡಿಸಿದ್ದರೂ ಪ್ರಯಾಣಿಕರು ಆಗಮಿಸುತ್ತಿದ್ದಾರೆ.
>
> -ಹೇಮಂತ್‌ಕುಮಾರ್, ಕೆಎಸ್‌ಆರ್‌ಟಿಸಿ ವಿಭಾಗೀಯ ಸಂಚಲನಾಧಿಕಾರಿ

ಒಂದೇ ಮಾರ್ಗಗಳಲ್ಲಿ ಹೆಚ್ಚು ಬಸ್‌ಗಳನ್ನು ನಿಯೋಜಿಸಿದ್ದಾರೆ ಎಂದು ಸಾರಿಗೆ ಅಧಿಕಾರಿಗಳ ವಿರುದ್ಧ ಪ್ರಯಾಣಿಕರು ಕುಪಿತಗೊಂಡರು. ಗ್ರಾಮೀಣ ಭಾಗಗಳಿಗೆ ಒಂದು ಬಸ್ ಸಂಚರಿಸಿ ಅದೇ ಬಸ್ ವಾಪಸ್ ಬರುವ ತನಕ ನಾವು ಕಾಯುತ್ತಾ ಕುಳಿತುಕೊಳ್ಳಬೇಕು ಎಂದು ಸಾರಿಗೆ ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಕೆಎಸ್‌ಆರ್‌ಟಿಸಿ ಬಸ್‌ಗಳ ಕೊರತೆ: ಇನ್ನೂ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲೂ ಇದೇ ಪರಿಸ್ಥಿತಿ ಎದುರಾಗಿ, ಜಿಲ್ಲೆಗಳತ್ತ ತೆರಳುವ ಪ್ರಯಾಣಿಕರ ಸಂಖ್ಯೆ ಹೆಚ್ಚಾಗಿ, ಬಸ್‌ಗಳ ಸಂಖ್ಯೆ ಕಡಿಮೆಯಾಗಿದೆ. ಮತದಾನ ಮಾಡಲು ಊರುಗಳಿಗೆ ತೆರಳಲು ಮುಂದಾಗಿರುವ ಜನರು, ಬಸ್ ಕಡಿಮೆ ಇರುವುದರಿಂದ ಬಸ್ ಬಂದೊಡನೆ ಮುಗಿಬಿದ್ದು ಹತ್ತುವ ದೃಶ್ಯಗಳು ಸಹ ಕಂಡುಬಂದವು.

ಆಟೋ, ಖಾಸಗಿ ವಾಹನಗಳ ದರ ದುಪ್ಪಟ್ಟು: ಪ್ರಯಾಣಿಕರು ಬಸ್‌ಗಳ ಕೊರತೆ ಎದುರಿಸುತ್ತಿದ್ದರೆ ಇದರ ಲಾಭ ಪಡೆದ ಆಟೋ, ಖಾಸಗಿ ವಾಹನಗಳು ನಿಗದಿತ ದರಕ್ಕಿಂತ ಹೆಚ್ಚು ಹಣ ವಸೂಲಿ ಮಾಡುತ್ತಿದ್ದಾರೆ ಎಂದು ಜನರು ಆರೋಪಿಸಿದರು.

ವಿದ್ಯಾರ್ಥಿಗಳಿಗೆ ತೊಂದರೆಯಾಗಿದೆ: ಕಾಲೇಜು ವಿದ್ಯಾರ್ಥಿ ಪ್ರವೀಣ್ ಮಾತನಾಡಿ, 1 ಬಸ್ ಮಿಸ್ ಆದರೆ ಸುಮಾರು 3 ತಾಸು ಕಾಯಬೇಕು. ಕಾಲೇಜ್ ಬಿಟ್ಟು ತುಂಬಾ ಹೊತ್ತು ಕಳೆದಿದೆ, ಕಾದು ಕಾದು ಸುಸ್ತಾಗಿದೆ. ಇಲ್ಲಿ ಯಾರನ್ನ ಕೇಳಿದರೂ ಬಸ್ ಬರುವ ಸಮಯ ಹೇಳುತ್ತಿಲ್ಲ. ವಿದ್ಯಾರ್ಥಿಗಳಿಗೆ ಈ ರೀತಿ ತೊಂದರೆ ಎದುರಾಗುತ್ತಿರುವುದು ಕಷ್ಟವಾಗಿದೆ ಎಂದರು.

ಡಿಪೋಗಳಿಂದಲೇ ಬಸ್ ಬಂದಿಲ್ಲ: ಡಿಪೋಗಳಿಂದ ಬಸ್ ಬಂದಿಲ್ಲ ನಾವು ಏನು ಮಾಡೋದು ಹೇಳಿ? ಕೆಲ ಬಸ್‌ಗಳನ್ನು ಚುನಾವಣಾ ಕೆಲಸಗಳಿಗೆ ನಿಯೋಜಿಸಿರುವುದರಿಂದ ಬಸ್‌ಗಳ ಸಂಖ್ಯೆ ಕಡಿತವಾಗಿದೆ ಎಂದು ಪ್ಲಾಟ್‌ಫಾರಂ ಟಿಸಿ ಹೇಳಿದರು.

> **ಜನರಿಗೆ ತೊಂದರೆ ಕೊಡೋ ಎಲೆಕ್ಷನ್ ಬೇಡವೇ ಬೇಡ**
>
> ಜನಸಾಮಾನ್ಯರಿಗೆ ಈ ರೀತಿ ತೊಂದರೆ ಕೊಡುವ ಚುನಾವಣೆ ಬೇಡವೇ ಬೇಡ ಸರ್. ಸುಮಾರು 2-3 ಗಂಟೆಯಿಂದ ಕಾಯುತ್ತಿದ್ದೇವೆ. ಟಿಸಿ ಅವರನ್ನು ಕೇಳಿದರೆ ಬರುತ್ತದೆ ಅನ್ನುತ್ತಾರೆ ಆದರೆ ಬಸ್ ಬಂದಿಲ್ಲ. ಚುನಾವಣೆಗೋಸ್ಕರ ಜನರಿಗೆ ತೊಂದರೆ ಕೊಡೋದು ಎಷ್ಟರ ಮಟ್ಟಿಗೆ ಸರಿ. -ಪಾರ್ವತಮ್ಮ

ಸಿದ್ದರಾಮಯ್ಯ ಪರ ಯತೀಂದ್ರ ಮನೆ ಮನೆಗೆ ತೆರಳಿ ಪ್ರಚಾರ



ಮೈಸೂರು,ಮೇ 9(ಎಂಟಿವೈ)- ಮಾಜಿ ಸಿಎಂ ಸಿದ್ದರಾಮಯ್ಯ 40 ವರ್ಷಗಳ ರಾಜಕೀಯ ಜೀವನದಲ್ಲಿ ಬುದ್ಧ, ಬಸವಣ್ಣ ಮತ್ತು ಡಾ.ಅಂಬೇಡ್ಕರ್ ಅವರ ತತ್ವ ಸಿದ್ಧಾಂತಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಸಂವಿಧಾನದ ಆಶಯಕ್ಕೆ ಅನುಗುಣವಾಗಿ ಎಲ್ಲಾ ವರ್ಗದ ಜನ ಹಿತ ಕಾಯುವ ಕೆಲಸ ಮಾಡಿದ್ದಾರೆ ಎಂದು ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಅಭಿಪ್ರಾಯಪಟ್ಟಿದ್ದಾರೆ.

ಮತದಾನದ ಮುನ್ನ ದಿನವಾದ ಮಂಗಳವಾರ ನಾಲ್ವರು ಬೆಂಬಲಿಗರೊಂದಿಗೆ ವರುಣಾ ಕ್ಷೇತ್ರದ ಬಸವನಪುರ ಗ್ರಾಮದಲ್ಲಿ ಮನೆ ಮನೆಗೆ ತೆರಳಿ ಕಾಂಗ್ರೆಸ್ ಅಭ್ಯರ್ಥಿ ಸಿದ್ದರಾಮಯ್ಯ ಪರವಾಗಿ ಮತ ಯಾಚಿಸಿ ಮಾತನಾಡಿದ ಅವರು, ಸಿದ್ದರಾಮಯ್ಯ ನೇತೃತ್ವದ ಸರ್ಕಾರದಲ್ಲಿ ಸಾಮಾಜಿಕ ನ್ಯಾಯ ಒದಗಿಸುವ ಕಾರ್ಯಕ್ರಮ ರೂಪಿಸಿದ್ದಾರೆ. ಬಸವ ತತ್ವದಲ್ಲಿ ಅಪಾರವಾದ ಗೌರವ ಇಟ್ಟುಕೊಂಡು, ಡಾ.ಅಂಬೇಡ್ಕರ್ ಅನುಯಾಯಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ವರುಣ ಕ್ಷೇತ್ರದ ಎಲ್ಲಾ ವರ್ಗದ ಜನರು ಅವರಿಗೆ ಆಶೀರ್ವದಿಸಿ ವಿಪಕ್ಷನಾಯಕ, ಮುಖ್ಯಮಂತ್ರಿಯನ್ನಾಗಿ ಮಾಡಿದ್ದಾರೆ. ಇದು ಅವರ ಕೊನೇ ಚುನಾವಣೆ. ಅವರನ್ನು ಹೆಚ್ಚು ಮತಗಳ ಅಂತರದಿಂದ ಆಯ್ಕೆ ಮಾಡಬೇಕೆಂದು ಮನವಿ ಮಾಡಿದರು. ಗುರುಪಾದ ಸ್ವಾಮಿ, ಕೆಂಪಣ್ಣ ಇನ್ನಿತರರು ಇದ್ದರು.

ಲೂಟಿ ಮಾಡಿದವರಿಗೆ ಮತ್ತೆ ಲೂಟಿ ಮಾಡಲು ಅವಕಾಶ ನೀಡಬಾರದು

ಬಿಎಸ್‌ಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಕೆ.ಸಿ.ಪುಟ್ಟಸಿದ್ದಶೆಟ್ಟಿ ಮನವಿ



ಮೈಸೂರು,ಮೇ 9(ಪಿಎಂ)- ಪ್ರಜಾಪ್ರಭುತ್ವದಲ್ಲಿ ಮತದಾನ ಶ್ರೇಷ್ಠದಾನ. ಪ್ರತಿಯೊಬ್ಬರು ಕಡ್ಡಾಯವಾಗಿ ಮತದಾನ ಮಾಡಬೇಕು. ಆದರೆ ಲೂಟಿ ಮಾಡಿದವರಿಗೆ ಮತ್ತೆ ಲೂಟಿ ಮಾಡಲು ಅವಕಾಶ ನೀಡಬಾರದು ಎಂದು ಬಿಎಸ್‌ಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಕೆ.ಸಿ.ಪುಟ್ಟಸಿದ್ದಶೆಟ್ಟಿ ಮತದಾರರಲ್ಲಿ ಮನವಿ ಮಾಡಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ರಾಷ್ಟ್ರಪತಿಯಂತಹ ಉನ್ನತ ಸ್ಥಾನದಲ್ಲಿರುವವರಾಗಲೀ, ಸಾಮಾನ್ಯರಾಗಲೀ ಇಬ್ಬರಿಗೂ ಸಮಾನ ಹಕ್ಕು ಮತದಾನ. ಇಂತಹ ಸಂವಿಧಾನಾತ್ಮಕ ಹಕ್ಕನ್ನು ಚಲಾಯಿಸಿ ಸೂಕ್ತ ಅಭ್ಯಥಿಗಳನ್ನು ಚುನಾಯಿಸಬೇಕು ಎಂದರು.

ಬಹುತೇಕ ಎಲ್ಲಾ ಪಕ್ಷಗಳಲ್ಲಿ ಕ್ರಿಮಿನಲ್ ಹಿನ್ನೆಲೆಯುಳ್ಳವರು ಕೆಲವರು ಇದ್ದು, ಇಂತಹವರ ಬಗ್ಗೆ ಜಾಗೃತರಾಗಿರಬೇಕು. ಯಾವುದೇ ಆಮಿಷಗಳಿಗೆ ಒಳಗಾಗದೇ ಸೂಕ್ತ ಅಭ್ಯರ್ಥಿಗಳನ್ನು ಆಯ್ಕೆ ಮಾಡಬೇಕು. ಈಗಾಗಲೇ ಶಾಸಕರಾಗಿ ಪುನರ್ ಆಯ್ಕೆ ಬಯಸಿ ಕಣದಲ್ಲಿರುವ ಅಭ್ಯರ್ಥಿಗಳ ಈ ಹಿಂದಿನ ಕಾರ್ಯವೈಖರಿ ಅವಲೋಕಿಸಿ ಮತದಾನ ಮಾಡಬೇಕು ಎಂದರು.

ಸಾಮಾಜಿಕ ನ್ಯಾಯಕ್ಕೆ ಬದ್ಧವಾಗಿರುವ ಪಕ್ಷ ಗುರುತಿಸಿ ಬೆಂಬಲಿಸಬೇಕು. ಈವರೆಗೆ ತಳ ಸಮುದಾಯಗಳನ್ನು ಮುಖ್ಯವಾಹಿನಿಗೆ ತರುವ ಕೆಲಸ ಸಮರ್ಪಕವಾಗಿ ಆಗಿಲ್ಲ. ಈ ಚುನಾವಣೆಯಲ್ಲಿ ಹಿಂದುಳಿದ ಸಮುದಾಯಗಳ ಶ್ರೇಯೋಭಿವೃದ್ಧಿಗೆ ಶ್ರಮಿಸುವವರಿಗೆ ಶಕ್ತಿ ತುಂಬುವ ಕೆಲಸವಾಗಬೇಕು ಎಂದರು. ಬಿಎಸ್‌ಪಿ ಮುಖಂಡರಾದ ಪುಟ್ಟಸ್ವಾಮಿ, ಶ್ರೀನಿವಾಸಪ್ರಸಾದ್, ಜಯಶಂಕರ್ ಶ್ಯಾಮ್, ಶಿವ ಕುಮಾರ್, ಶ್ರೀನಿವಾಸಚಾರ್ ಗೋಷ್ಠಿಯಲ್ಲಿದ್ದರು.

ಮಧ್ಯಪ್ರದೇಶದಲ್ಲಿ ಸೇತುವೆಯಿಂದ ಬಸ್ ಬಿದ್ದು 22 ಮಂದಿ ಸಾವು

ಖರ್ಗೋನ್/ಭೋಪಾಲ್ (ಮಧ್ಯಪ್ರದೇಶ): ಖರ್ಗೋನ್ ಜಿಲ್ಲೆಯ ಡೊಂಗರಗಾಂವ್ ಗ್ರಾಮದ ಬಳಿ ಖಾಸಗಿ ಬಸ್‌ವೊಂದು ಸೇತುವೆಯಿಂದ ಬಿದ್ದ ಪರಿಣಾಮ 22 ಮಂದಿ ಮೃತಪಟ್ಟು, 20 ಜನರು ಗಾಯಗೊಂಡಿದ್ದಾರೆ. ಬೋರದ್ ನದಿ ಸೇತುವೆ ತಡೆಗೋಡೆಗೆ ಬಸ್ ಡಿಕ್ಕಿ ಹೊಡೆದಿದೆ. ಡಿಕ್ಕಿ ರಭಸಕ್ಕೆ ಸೇತುವೆಯ ತಡೆಗೋಡೆ ಧ್ವಂಸಗೊಂಡು, ಬಸ್ ಬಿದ್ದಿದೆ. ಗಾಯಗೊಂಡವರನ್ನು ಖರ್ಗೋನ್ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಗೃಹ ಸಚಿವ ನರೋತ್ತಮ ಮಿಶ್ರಾ ತಿಳಿಸಿದ್ದಾರೆ.



ಎಸ್‌ಎಸ್‌ಎಲ್‌ಸಿಯಲ್ಲಿ ಗ್ರೀಷ್ಮ ಸಾಧನೆ



ಮೈಸೂರು, ಮೇ 9-ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಕುವೆಂಪುನಗರದ ಕೆಪಿಎಸ್ ಶಾಲೆಯ ವಿದ್ಯಾರ್ಥಿನಿ ಹೆಚ್.ಪಿ.ಗ್ರೀಷ್ಮ ಪ್ರಸಾದ್ 512 ಅಂಕ ಪಡೆದು ಉತ್ತಮ ಸಾಧನೆ ಮಾಡಿದ್ದಾರೆ. ಚಿಕ್ಕ ವಯಸ್ಸಿನಲ್ಲೇ ತಂದೆ ಬಾಲು ಹೇಮೇಂದ್ರಪ್ರಸಾದ್, ತಾಯಿ ರಾಜೇಶ್ವರಿ ಅವರನ್ನು ಕಳೆದುಕೊಂಡಿರುವ ಗ್ರೀಷ್ಮ, ಅಜ್ಜಿ ಮನೆಯಲ್ಲಿದ್ದು, ವ್ಯಾಸಂಗ ಮಾಡಿ ಈ ಸಾಧನೆ ಮಾಡುವ ಮೂಲಕ ಮಾದರಿಯಾಗಿದ್ದಾರೆ.

ವಿಧಾನಸಭಾ ಚುನಾವಣಾ ಅಕ್ರಮ

ಮೈಸೂರು ಜಿಲ್ಲೆಯಲ್ಲಿ 3 ಕೋಟಿ ನಗದು ಸೇರಿ 12.21 ಕೋಟಿ ರೂ. ಮೌಲ್ಯದ ವಸ್ತು ವಶ

ಮೈಸೂರು, ಮೇ 9(ಆರ್‌ಕೆ)-ವಿಧಾನಸಭಾ ಚುನಾವಣಾ ನೀತಿ ಸಂಹಿತೆ ಜಾರಿಗೆ ಬಂದ ನಂತರ ಈವರೆಗೆ ಮೈಸೂರು ಜಿಲ್ಲೆಯಲ್ಲಿ 3,02,32,024 ರೂ. ನಗದು ಸೇರಿದಂತೆ ಒಟ್ಟು 12,21,22,713 ರೂ. ಮೌಲ್ಯದ ಇನ್ನಿತರ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ ಡಾ. ಕೆ.ವಿ.ರಾಜೇಂದ್ರ ತಿಳಿಸಿದ್ದಾರೆ.

ಮೈಸೂರಿನ ಎಲ್ಲಾ 11 ಕ್ಷೇತ್ರಗಳಲ್ಲಿ ಅಕ್ರಮವಾಗಿ ಸಾಗಿಸುತ್ತಿದ್ದ 3,02,32,024 ರೂ. ನಗದು, 8,84,14,282 ರೂ. ಬೆಲೆಯ ಮದ್ಯ, 7,54,940 ರೂ. ಮೌಲ್ಯದ ಡ್ರಗ್ಸ್, 21,51,967 ಮೌಲ್ಯದ ಆಭರಣ ಸೇರಿದಂತೆ 12,21,22,713 ಕೋಟಿ ರೂ. ಮೌಲ್ಯದ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಅವರು ತಿಳಿಸಿದರು.

ನಿಧನ

ಎ.ಟಿ. ಮೊಹಮ್ಮದ್



ಮೈಸೂರು, ಮೇ 9- ಕೇರಳ ಮುಸ್ಲಿಂ ಜಮಾತ್ ಉಪಾಧ್ಯಕ್ಷ ಎ.ಟಿ. ಮೊಹಮ್ಮದ್ (60) ಕೇರಳದ ಕಣ್ಣೂರು ಜಿಲ್ಲೆಯಲ್ಲಿ ಮಂಗಳವಾರ ಬೆಳಗ್ಗೆ ನಿಧನರಾದರು. ಮೊಹಮ್ಮದ್ ಅವರು ಮೈಸೂರಿನ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಅಲ್ಪಸಂಖ್ಯಾತರ ಘಟಕದ ಜಿಲ್ಲಾ ಕಾರ್ಯದರ್ಶಿಯಾಗಿ, ಮೈಸೂರಿನ ಕೇರಳ ಮುಸ್ಲಿಂ ಜಮಾತ್‌ನ ಉಪಾಧ್ಯಕ್ಷರಾಗಿ ಮತ್ತು ನಗರದ ಅಕ್ಬರ್ ರಸ್ತೆಯಲ್ಲಿರುವ ತನ್ವೀರುಲ್ ಇಸ್ಲಾಂ ಮದರಸಾ ಮತ್ತು ಹೈಯರ್ ಸೆಕೆಂಡರಿ ಸ್ಕೂಲ್‌ನ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು. ಮೃತರು ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಕಣ್ಣೂರು ಜಿಲ್ಲೆಯಲ್ಲಿ ಮಧ್ಯಾಹ್ನ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಡಿ.ರಂಗಯ್ಯ



ನಂಜನಗೂಡಿನ ನಿವಾಸಿ ಡಿ.ರಂಗಯ್ಯ (90) ಅವರು ಮಂಗಳವಾರ ನಿಧನರಾದರು. ಮೃತರು ಇಬ್ಬರು ಪುತ್ರರು, ಮೂವರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ನಂಜನಗೂಡಿನಲ್ಲಿರುವ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು ಎಂದು ಅವರ ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

10.5.2023 ಬುಧವಾರ, ಮಳೆ ನಕ್ಷತ್ರ: ಭರಣಿ, 28.04.2023ರಿಂದ 10.05.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ,
ಕೃಷ್ಣ ಪಕ್ಷ, ತಿಥಿ: ಪಂಚಮಿ, ನಕ್ಷತ್ರ: ಪೂಷಾ, ರಾಹುಕಾಲ: ಮಧ್ಯಾಹ್ನ 12ರಿಂದ 1.30ರವರೆಗೆ

- **ಶ್ರೀ ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾ ಸಂಸ್ಥಾನ, ದಕ್ಷಿಣಾಮ್ನಾಯ ಶ್ರೀ ಶಾರದಾ ಪೀಠ ಶೃಂಗೇರಿ :** 43ನೇ ವರ್ಷದ ಮೂರ್ತಿ ಪ್ರತಿಷ್ಠಾ ಮಹೋತ್ಸವ, ಶ್ರೀ ಶಾರದಾಪರಮೇಶ್ವರಿಯವರಿಗೆ ಪಂಚಸೂಕ್ತಾಭಿಷೇಕ ಮತ್ತು ಹರಿದ್ರಾದರ್ಶನ, ಬೆಳಗ್ಗೆ 7 ರಿಂದ ಪರ್ಯಂತ, ಬೆಳಗ್ಗೆ 8ಕ್ಕೆ ಶ್ರೀ ಲಲಿತಾ ಹೋಮ ಪ್ರಾರಂಭ, ಶ್ರೀ ಶಾರದಾ ಪರಮೇಶ್ವರಿಯವರಿಗೆ ವಿಶೇಷ ಅಲಂಕಾರಗಳು, ಬೆಳಗ್ಗೆ 9.30ಕ್ಕೆ ಹರಿದ್ರಾದರ್ಶನ, ಮಹಾಪೂಜೆ ನಂತರ ಮಹಾಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಮಧ್ಯಾಹ್ನ 12ಕ್ಕೆ ಶ್ರೀ ಲಲಿತಾ ಹೋಮದ ಪೂರ್ಣಾಹುತಿ, ಸಂಜೆ 6.30ಕ್ಕೆ ಕೆ.ಆರ್. ಪದ್ಮನಾಭನ್ ಅವರಿಂದ ವೀಣಾವಾದನ, ರಾತ್ರಿ 8ಕ್ಕೆ ಶಾರದಾ ಪ್ರಾಕಾರೋತ್ಸವ, ರಾತ್ರಿ 9ಕ್ಕೆ ಮಹಾಮಂಗಳಾರತಿ, ಅಷ್ಟಾವಧಾನ ಸೇವೆ, ಪ್ರಸಾದ ವಿನಿಯೋಗ, ಸ್ಥಳ: ಶೃಂಗೇರಿ ಶ್ರೀ ಶಂಕರಮಠ, ಫೋರ್ಟ್ ಮೊಹಲ್ಲಾ.
- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಮಹಿಳೆಯರಲ್ಲಿ ಋತುಬಂಧದ ಸಮಸ್ಯೆಗಳು ಕುರಿತು ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 10 ರಿಂದ.
- **ಸುರಭಿ ಗಾನಕಲಾಮಂದಿರ ಚಾರಿಟೆಬಲ್ ಟ್ರಸ್ಟ್ :** ಸಂಗೀತಾಮೃತ ವರ್ಷಿಣಿ ರಾಗಾಧಾರಿತ-ಮನೋಧರ್ಮ ಸಂಗೀತ ಶಿಬಿರ, ಸ್ಥಳ: ಸುರಭಿ ಗಾನಕಲಾಮಂದಿರ, ಗೋಕುಲಂ 3ನೇ ಹಂತ, ಸಂಜೆ 4.30ಕ್ಕೆ.
- **ನೆಲೆ ಹಿನ್ನೆಲೆ ಹಾಗೂ ಜನಮನ ಸಾಂಸ್ಕೃತಿಕ ಸಂಘಟನೆ ಮತ್ತು ಡಿ.ಸಂಜೀವಯ್ಯ ಸ್ಮಾರಕ ಶಿಕ್ಷಣ ಸಂಸ್ಥೆ:** ಸರ್ವಜನಾಂಗದ ಶಾಂತಿಯ ತೋಟದಲ್ಲಿ ರಂಗ ಭೀಷ್ಮ ಬಿ.ವಿ.ಕಾರಂತರಂಗ, ಮಕ್ಕಳ ಲೋಕ ಬೇಸಿಗೆ ಶಿಬಿರ, ಉಪಸ್ಥಿತರು: ಪ್ರದೇಶಾಭಿವೃದ್ಧಿ ಮಂಡಳಿ ಯೋಜನಾ ಇಲಾಖೆ ನಿರ್ದೇಶಕ ಡಾ.ಚಂದ್ರಶೇಖರಯ್ಯ, ವಾಣಿಜ್ಯ ತೆರಿಗೆ ಇಲಾಖೆ ಉಪಆಯುಕ್ತ ಮಂಜುನಾಥ್ ಸೋಸಲೆ, ಡಿ.ಸಂಜೀವಯ್ಯ ಸ್ಮಾರಕ ಶಿಕ್ಷಣ ಸಂಸ್ಥೆ ನಿರ್ದೇಶಕ ಕೆ.ಎನ್.ಶಿವಲಿಂಗಯ್ಯ, ಸ್ಥಳ: ಕಿರು ರಂಗಮಂದಿರ, ಕಲಾಮಂದಿರದ ಆವರಣ, ಸಂಜೆ 5.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಶ್ರದ್ಧೆಯ ಶಿಲ್ಪ-ಮೈಸೂರು ಸುತ್ತಲಿನ ದೇಗುಲಗಳ ಪರಿಚಯ, ಪ್ರಸ್ತುತಿ- ಡಾ.ಟಿ.ಎಸ್.ಗೋಪಾಲ್, 6.40 ಪದ ಸಂಸ್ಕೃತಿ, 7.15 ಕಾದಂಬರಿ ವಿಹಾರ-ದೂರ ಸರಿದರು ಕಾದಂಬರಿಯ ಪ್ರಸ್ತುತಿ-ಉಮೇಶ್. ಎಸ್.ಎಸ್., 8.30 ಕಾಫಿ ತಿಂಡಿ-ಖ್ಯಾತ ಹಿನ್ನೆಲೆ ಗಾಯಕ ವಿಜಯ ಪ್ರಕಾಶ್ ಅವರೊಂದಿಗಿನ ಸಂದರ್ಶನದ ಆಯ್ದ ಭಾಗಗಳು ಸಂದರ್ಶಕರು-ಎಸ್.ಲಕ್ಷ್ಮೀನಾರಾಯಣ, 10.00 ಮೌನದಾಚೆಯ ಬೆಳಕು -ಸದಾಶಿವ ಬ್ರಹ್ಮೇಂದ್ರರ ಜೀವನ ಹಾಗೂ ರಚನೆಗಳನ್ನಾಧರಿಸಿದ ವಿಶೇಷ ಕಾರ್ಯಕ್ರಮ ಸರಣಿ. ನಿರ್ದೇಶನ ಹಾಗೂ ನಿರೂಪಣಾ ಸಾಹಿತ್ಯ-ಎಸ್.ಶಂಕರ್, ನಿರ್ಮಾಣ-ಗೀತಾ ರಮಾನಂದ್, 11.00 ಮಿಶ್ರ ಮಾಧುರ್ಯ **ಮಧ್ಯಾಹ್ನ:** 12.30 ದೇವರನಾಮ-ಪಿ.ಎಸ್.ರಂಜನಿ, 1.00 ರಂಗಗೀತೆಗಳು-ಜಿ.ಆರ್.ರಾಮಚಂದ್ರ, 1.20 ಭಾವಗೀತೆಗಳು-ಮಂಜುಳಾ ಗುರುರಾಜ್, 3.00 ಆರ್.ಮೋಹನ್-ಕ್ಲಾರಿಯೋನೆಟ್ ವಾದನ, 4.00 ಕಥಾ ಕಾಲಕ್ಷೇಪ "ಶ್ರೀ ಸತ್ಯನಾರಾಯಣ ವ್ರತ", ಪ್ರಸ್ತುತಿ-ವಿದ್ವಾನ್ ಭದ್ರಗಿರಿ ಅಚ್ಯುತ ದಾಸರು, 5.05 ಮಿಶ್ರ ಮಾಧುರ್ಯ, 6.55 ಕೃಷಿರಂಗ-ಕಿಸಾನ್‌ವಾಣಿ-ಹಣ್ಣಿನ ಮರಗಳ ಕೃಷಿ, ಉತ್ಪನ್ನಗಳ ಮೌಲ್ಯ ವರ್ಧನೆ ಹಾಗೂ ಮಾರಾಟದಲ್ಲಿನ ಅನುಭವ ಕುರಿತು ಕೆ.ಬಿ.ಪ್ರಭೋದ್ ಅವರೊಂದಿಗೆ ಸಂದರ್ಶನ, 9.15 ಯಕ್ಷಗಾನದ ಹಾಡುಗಳು-ಪ್ರದೀಪ್‌ಕುಮಾರ್ ಗಟ್ಟಿ ಮತ್ತು ತಂಡದವರು, 9.30 ಕೆ.ಸುಧಾ-ಹಾಡುಗಾರಿಕೆ, 10.30 ಗಮಕ ವ್ಯಾಖ್ಯಾನ, ವಾಚನ-ಸುಮಾ ವಿಜಯ್, ವ್ಯಾಖ್ಯಾನ-ಶ್ರೀನಿವಾಸ್ ಫಣಿ

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 10 ಬುಧವಾರ 2023

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 44 | ಸಂಚಿಕೆ: 24 | ಪುಟಗಳು: 12

ಸುದ್ದಿ ಮತ್ತು ಫೋಟೋಗೆ: news@mysurumithra.com   ಜಾಹೀರಾತು: ad@mysurumithra.com

ನಕ್ಕರೆ ಅದೇ ಸ್ವರ್ಗ

ತಂದೆ : (ಮನೆಯಲ್ಲಿ ಒಂಟಿ ಕಾಲಿನಲ್ಲಿ ನಿಂತಿದ್ದ ಮಗನನ್ನು ನೋಡಿ) ಯಾಕೋ ಪಾಪು ಹಾಗೆ ನಿಂತಿದ್ದೀಯಾ?

ಮಗ : ನೀವೇ ಹೇಳಿದಿರಲ್ಲಪ್ಪ, ಸ್ಕೂಲಿನಲ್ಲಿ ಮಾಡಿದ್ದನ್ನು ಮನೆಯಲ್ಲೂ ಮಾಡು ಅಂತ!

ಮೈಸೂರು ಮಿತ್ರ

ಬುಧವಾರ, 10 ಮೇ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ನೀವು ಎಲ್ಲೆಲ್ಲಿ ಎಷ್ಟರ ಮಟ್ಟಿಗೆ ಅರಿವಿಲ್ಲದೆ ಇರುವಿರೋ ಅಲ್ಲಿ ಆ ಮಟ್ಟದ ಯಾತನೆಗೊಳಪಡುತ್ತೀರಿ –ಜಗ್ಗಿ ವಾಸುದೇವ್.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ದೋಷ ಮಾಡಿದವನಿಗೆ ದೂಷಣೆ ತಪ್ಪದು

ನಿಮ್ಮ ಪತ್ರಗಳು

'ಮಕ್ಮಲ್ ಟೋಪಿ' ಹಾಕುವ ಪ್ರಣಾಳಿಕೆಗಳು

ಮಾನ್ಯರೆ,

ಪ್ರಸಕ್ತ ವಿಧಾನಸಭಾ ಚುನಾವಣೆಯ ಹಿನ್ನೆಲೆಯಲ್ಲಿ, ರಾಜ್ಯದ ಪ್ರಮುಖ ಮೂರು ಪಕ್ಷಗಳು (ಕಾಂಗ್ರೆಸ್, ಬಿಜೆಪಿ ಮತ್ತು ಜೆಡಿಎಸ್) ತಮ್ಮ ತಮ್ಮ ಪಕ್ಷಗಳ "ಪ್ರಣಾಳಿಕೆ"ಗಳನ್ನು ಬಿಡುಗಡೆ ಮಾಡಿವೆ.

ಆದರೆ ಯಾವುದೇ ಪಕ್ಷದ ಪ್ರಣಾಳಿಕೆಯಲ್ಲೂ ನಾವು ಅಧಿಕಾರಕ್ಕೆ ಬಂದರೆ ಭ್ರಷ್ಟಾಚಾರ ಮುಕ್ತ ಆಡಳಿತ ನೀಡುವುದಾಗಿ ಹಾಗೂ ಲೋಕಾಯುಕ್ತಕ್ಕೆ ಹೆಚ್ಚಿನ ಅಧಿಕಾರ ನೀಡುವುದಾಗಿ ಪ್ರಸ್ತಾಪವನ್ನೇ ಮಾಡಿಲ್ಲ.

ಇನ್ನು ಸರ್ಕಾರದ ಅಧಿಕಾರದ ವ್ಯಾಪ್ತಿಗೆ ಬಾರದ ಭಜರಂಗದಳ ಮತ್ತು ಪಿಎಫ್ಐಯನ್ನು ನಿಷೇಧಿಸುವ ಅಧಿಕಾರ ರಾಜ್ಯ ಸರ್ಕಾರದ ವ್ಯಾಪ್ತಿಗೆ ಬರುವುದೇ ಇಲ್ಲ. ಇದು ಕೇಂದ್ರ ಸರ್ಕಾರದ ತೀರ್ಮಾನ. ಮೀಸಲಾತಿಯನ್ನು ಶೇ.75ಕ್ಕೆ ಹೆಚ್ಚಳ ಮಾಡುವುದಾಗಿ ಭರವಸೆ ನೀಡಿದೆ. ಇದು ಉಚ್ಚ ನ್ಯಾಯಾಲಯದಲ್ಲಿ ತೀರ್ಮಾನವಾಗಬೇಕು.

ರಾಜ್ಯ ಸರ್ಕಾರದ ಬಜೆಟ್ ಇರುವುದೇ ವಾರ್ಷಿಕ 3 ಲಕ್ಷ ಕೋಟಿ ರೂಪಾಯಿ. ಆದರೆ ರಾಷ್ಟ್ರೀಯ ಪಕ್ಷವೊಂದು ಪ್ರಣಾಳಿಕೆಯಲ್ಲಿ ಪ್ರಕಟಿಸಿರುವಂತೆ ಎಲ್ಲಾ ರೀತಿಯ ಉಚಿತಗಳನ್ನೂ ನೀಡಿದ್ದೇ ಆದರೆ ಬಜೆಟ್ ಅರ್ಧದಷ್ಟು ಹಣ ಬೇಕಾಗಬಹುದು. ಉಳಿದ ಹಣದಲ್ಲಿ ಸರ್ಕಾರಿ ನೌಕರರ ಪಿಂಚಣಿ ಮತ್ತು ಸಂಬಳಕ್ಕೆ ಹೋಗುತ್ತದೆ. ಸರ್ಕಾರದ ಯಾವುದೇ ರೀತಿಯ ಅಭಿವೃದ್ಧಿ ಕಾರ್ಯಕ್ಕೂ ಸಾಲ ಮಾಡಿಯೇ ಸರ್ಕಾರ ನಡೆಸಬೇಕಾಗುತ್ತದೆ. ಇದರಿಂದಾಗಿ ಇತ್ತೀಚಿನ ದಿನಗಳಲ್ಲಿ ಪ್ರಣಾಳಿಕೆಗಳು ಅರ್ಥ ಕಳೆದುಕೊಳ್ಳುತ್ತಿವೆ. ಇವು ಮತದಾರರಿಗೆ "ಮಂಕು ಬೂದಿ" ಎರಚುವ ಕೆಲಸವಷ್ಟೆ ಇವುಗಳನ್ನು ಜಾರಿಗೆ ತರಲು ಸಂಪನ್ಮೂಲ ಹೇಗೆ ಕ್ರೋಢೀಕರಣ ಮಾಡಬಹುದು ಎಂಬುದನ್ನು ಆಯಾಯ ಕ್ಷೇತ್ರದ ತಜ್ಞರ ಸಲಹೆ ಪಡೆದು ಪ್ರಣಾಳಿಕೆಗಳನ್ನು ಬಿಡುಗಡೆ ಮಾಡಿದರೇ ಮಾತ್ರ ಮತದಾರರು ನಂಬುತ್ತಾರೆ ಹೊರತು, ಇಲ್ಲದಿದ್ದರೆ ಪ್ರಣಾಳಿಕೆಗಳು ಜನರಿಗೆ ಹಾಕುವ "ಮಕ್ಮಲ್ ಟೋಪಿ".

–ಬೂಕನಕೆರೆ ವಿಜೇಂದ್ರ, ಮೈಸೂರು

ಕುಸ್ತಿಪಟುಗಳ ಮೇಲಿನ ಲೈಂಗಿಕ ಆರೋಪಿಗಳ ವಿರುದ್ಧ ಕ್ರಮಕ್ಕೆ ಆಗ್ರಹ

ಮಾನ್ಯರೆ,

ಕಳೆದ ಕೆಲವು ದಿನಗಳಿಂದ ದಿಲ್ಲಿಯ ಜಂತರ್ ಮಂತರ್‌ನಲ್ಲಿ ಮಹಿಳಾ ಕುಸ್ತಿಪಟುಗಳು, ಭಾರತೀಯ ಕುಸ್ತಿ ಒಕ್ಕೂಟದ ಅಧ್ಯಕ್ಷ ಬ್ರಿಜ್ ಭೂಷಣ್ ಸಿಂಗ್ ಅವರಿಂದ ಮಹಿಳಾ ಕುಸ್ತಿಪಟುಗಳ ಮೇಲಿನ ಲೈಂಗಿಕ ಆರೋಪದ ವಿರುದ್ಧ ಮಾಡುತ್ತಿರುವ ಪ್ರತಿಭಟನೆ. ಜೊತೆಗೆ ಪೊಲೀಸರು ಹಲ್ಲೆ ನಡೆಸಿದರೆಂದು ಆರೋಪಿಸಿ, ಕುಸ್ತಿಪಟುಗಳು ಕಣ್ಣೀರಿಡುತ್ತಾ ತಮಗೆ ಬಂದಿರುವ ಪದಕಗಳನ್ನು ವಾಪಸ್ ಮಾಡುತ್ತೇವೆಂದು ಕೇಂದ್ರ ಸರಕಾರಕ್ಕೆ ಬೆದರಿಕೆ ಹಾಕಿದ್ದಾರೆ. ಅವರ ಈ ಕ್ರಮಕ್ಕೆ ತಮಿಳುನಾಡಿನ ಮತ್ತು ಪಶ್ಚಿಮಬಂಗಾಳದ ಮುಖ್ಯಮಂತ್ರಿಗಳಲ್ಲದೆ ಇನ್ನೂ ಹಲವಾರು ಸಂಘಟನೆಗಳು ಮತ್ತು ಕ್ರೀಡಾಪಟುಗಳು ತಮ್ಮ ಬೆಂಬಲ ವ್ಯಕ್ತಪಡಿಸಿದ್ದಾರೆ. ಈ ವಿಚಾರವನ್ನು ಪ್ರಧಾನ ಮಂತ್ರಿಗಳು ಮತ್ತು ಅಮಿತ್ ಷಾ ಅವರ ಗಮನಕ್ಕೆ ತಂದಿದ್ದರೂ, ಅವರುಗಳು ಯಾವುದೇ ರೀತಿಯಲ್ಲಿ ಪ್ರತಿಕ್ರಿಯೆ ನೀಡಿಲ್ಲ ಎಂದು ಸರ್ಕಾರದ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿರುವ ಕುಸ್ತಿಪಟುಗಳು ತಕ್ಷಣವೇ ಬ್ರಿಜ್ ಭೂಷಣ್ ಅವರನ್ನು ಬಂಧಿಸಬೇಕೆಂದು ಆಗ್ರಹಿಸುತ್ತಿದ್ದಾರೆ. ಆದುದರಿಂದ ಕೇಂದ್ರ ಸರ್ಕಾರ ಈ ಬಗ್ಗೆ ತನಿಖೆಯನ್ನು ಮಾಡಿ ತಪ್ಪಿತಸ್ಥರ ವಿರುದ್ಧ ಕ್ರಮ ತೆಗೆದು ಕೊಳ್ಳದೆ ಜಾಣ ಕಿವುಡುತನ ಪ್ರದರ್ಶಿಸುತ್ತಿದೆ. ದಿಲ್ಲಿಯಲ್ಲಿ ನಡೆಯುತ್ತಿರುವ ಪ್ರತಿಭಟನೆ ದೇಶಾದ್ಯಂತ ವ್ಯಾಪಿಸಬಹುದು. ಕೇಂದ್ರ ಸರ್ಕಾರ ಈಗಲಾದರೂ ಎಚ್ಚೆತ್ತುಕೊಂಡು ಯಾವುದಾದರೊಂದು ಕ್ರಮ ತೆಗೆದುಕೊಳ್ಳುವ ಅನಿವಾರ್ಯತೆ ಇದೆ.

–ಬ್ಯಾಂಕ್ ಶಿವಕುಮಾರ್, ಜೆ.ಪಿ.ನಗರ, ಮೈಸೂರು.



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು

ಸಂಸ್ಕೃತಿ ಚಿಂತನಾ

ಹೊಗಳಿಕೆಗೆ ಬಾಯಿ ಬಿಡುವುದೇಕೆ?

ಹೆಚ್ಚು ಜನರು ತಾವು ಮಾಡಿದ ಕೆಲಸಗಳನ್ನು, ಬೇರೆಯವರು, ಅದರಲ್ಲೂ ದೊಡ್ಡ ಮನುಷ್ಯರು ಹೊಗಳಬೇಕೆಂದು ಬಯಸುತ್ತಾರೆ. ನಾಲ್ಕು ಜನರ ಬಾಯಿಂದ ಹೊಗಳಿಸಿಕೊಳ್ಳಬೇಕು ಎಂಬ ಆಸೆಯಿಂದ ಸತ್ಕಾರ್ಯಗಳನ್ನು ಮಾಡುವವರೇ ಹೆಚ್ಚು. ಯಾವುದಾದರೂ ಕೆಲಸವನ್ನೋ ಸಮಾರಂಭವನ್ನೋ ನಡೆಸುವಾಗ ಪತ್ರಿಕಾಗೋಷ್ಠಿಯನ್ನು ಕರೆದು ಪ್ರಚಾರ ಮಾಡಿಸುವುದು, ಸಮಾರಂಭದ ವೇದಿಕೆಯಲ್ಲಿ ತಾವು ಕಾಣಿಸಿಕೊಂಡಿರುವ ಫೋಟೋ ಪತ್ರಿಕೆಯಲ್ಲಿ ಮುದ್ರಿತವಾಗುವಂತೆ ಮಾಡುವುದು – ಇವೆಲ್ಲ ಹೊಗಳಿಕೆಗಾಗಿ ಹಲವರು ಮಾಡುವ ಪ್ರಯತ್ನಗಳು. ಹೆಸರು ಮಾಡಬೇಕು, ಹೆಸರಾಂತ ಸಾಹಿತಿಗಳು ಎನ್ನಿಸಿಕೊಳ್ಳಬೇಕು ಎಂಬ ಚಾಪಲ್ಯ ಬಹಳ ಜನರಿಗಿರುತ್ತದೆ. ವಾಲ್ಮೀಕಿ–ಕಾಳಿದಾಸರಂತೆ, ಪಂಪ–ರನ್ನ–ಜನ್ನರಂತೆ ನನ್ನ ಹೆಸರು ಜನರ ನಾಲಿಗೆಯ ಮೇಲೆ ಶಾಶ್ವತವಾಗಿ ನಲಿದಾಡುತ್ತಾ ಇರಬೇಕು ಎನ್ನುವ ಮಹತ್ವಾಕಾಂಕ್ಷೆ ಎಷ್ಟೋ ಜನರಿಗಿರುತ್ತದೆ. ಇದು ಸರಿಯಲ್ಲ, ಕೀರ್ತಿಯ ಅಪೇಕ್ಷೆಯೇ ತಪ್ಪು ಎನ್ನುವುದು ದಾರ್ಶನಿಕರ ಅಭಿಪ್ರಾಯ. ಡಿವಿಜಿ ಹೇಳಿದ್ದಾರೆ–

ಹೆಸರು ಹೆಸರೆಂದು ನೀಂ
ಬಸವಳಿವುದೇಕಯ್ಯ?
ಕಸದೊಳಗೆ ಕಸವಾಗಿ ಹೋಹನಲೆ ನೀನು?
ಮುಸುಕಲೀ ಮರೆವೆನ್ನನೆನ್ನುತೆ ಬೇಡು
ಮಿಸುಕದಿರು ಮಣ್ಣಿನಲಿ ಮಂಕುತಿಮ್ಮ॥

ಹೆಸರು, ಕೀರ್ತಿ, ಯಶಸ್ಸು ಎಂದು ಹಂಬಲಿಸುವುದು ಬೇಡ. ಎಷ್ಟು ದೊಡ್ಡ ಚಕ್ರವರ್ತಿಯಾದರೂ, ಎಷ್ಟೇ ಧನಿಕನಾದರೂ, ಎಂತಹ ಕವಿಶ್ರೇಷ್ಠನಾದರೂ ಕಸದೊಳಗೆ ಕಸವಾಗಿ ಹೋಗುವುದು ಇದ್ದೇ ಇದೆ. ಅದನ್ನು ತಪ್ಪಿಸಿಕೊಳ್ಳುವುದು ಅಸಾಧ್ಯ. ಆದುದರಿಂದ ನಾವು ಬೇಡಬೇಕಾಗಿರುವುದು ಮರೆವು ನನ್ನನ್ನು ಮುಸುಕಲಿ, ಜಗತ್ತು ನನ್ನನ್ನು ಮರೆಯಲಿ ಎನ್ನುವುದೇ. ಸತ್ತು ಮಣ್ಣಲ್ಲಿ ಮಣ್ಣಾಗಿ ಹೋದ ಮೇಲೆಯೂ ನನ್ನ ಹೆಸರು, ನನ್ನ ಕೀರ್ತಿ ಎಂದು ಮಿಸುಕುವುದು ಬೇಡ–ಎನ್ನುವುದು ಗುಂಡಪ್ಪನವರು ಮಾಡಿರುವ ಉಪದೇಶ.

ಅನೇಕರು ನಾನು ಮಾಡಿದ ಉಪಕಾರಗಳಿಗೆ ಜನರಲ್ಲಿ ಕೃತಜ್ಞತೆ ಸ್ವಲ್ಪವೂ ಇಲ್ಲ, ಅವರಿಗಾಗಿ ನಾನೆಷ್ಟು ತ್ಯಾಗ ಮಾಡಿದೆ, ಯಾರೂ ಒಂದು ಒಳ್ಳೆಯ ಮಾತನ್ನೂ ಆಡಲಿಲ್ಲ ಎಂದು ಅಲವತ್ತುಕೊಳ್ಳುತ್ತಾರೆ. ನಾವು ಮಾಡಿದ್ದು ನಮ್ಮ ಕರ್ತವ್ಯ, ಅದಕ್ಕಾಗಿ ಪ್ರಶಂಸೆಯನ್ನು ನಿರೀಕ್ಷಿಸಬಾರದು ಎಂಬ ಅರಿವು ಅವರಿಗಿರುವುದಿಲ್ಲ. ಮಕ್ಕಳಿಗಾಗಿ ತಂದೆ, ತಾಯಿ ಏನೇನೋ ತ್ಯಾಗ ಮಾಡುವುದು ಸಹಜ. ಅದಕ್ಕಾಗಿ ಮಕ್ಕಳು ಕೃತಜ್ಞತೆಯನ್ನು ಹೊಂದಿ ನಡೆದರೆ ಸಂತೋಷ. ಆದರೆ ಅವರು ಸದಾ ತಮಗೆ ಕೃತಜ್ಞರಾಗಿರಬೇಕೆಂದು ತಂದೆ, ತಾಯಿ ನಿರೀಕ್ಷಿಸುವುದು ತಪ್ಪು. ಹಕ್ಕಿಗಳನ್ನೂ, ಪ್ರಾಣಿಗಳನ್ನೂ ನೋಡಿ ಮಾನವರು ಪಾಠವನ್ನು ಕಲಿಯಬೇಕು. ತಾಯಿ ಹಕ್ಕಿ, ತಾಯಿಯಾದ ಪ್ರಾಣಿ ತನ್ನ ಮೊಟ್ಟೆಗಳ, ತನ್ನ ಮರಿಗಳ ರಕ್ಷಣೆಗಾಗಿ, ಪೋಷಣೆಗಾಗಿ ತಮ್ಮ ಸರ್ವಸ್ವವನ್ನೂ ತ್ಯಾಗ ಮಾಡುತ್ತವೆ. ತಮ್ಮ ಪ್ರಾಣವನ್ನೂ ಒತ್ತೆ ಇಟ್ಟು ಹೋರಾಡುತ್ತವೆ. ಆ ಮರಿಗಳು ರೆಕ್ಕೆ ಬಂದ ಮೇಲೆ ಎಲ್ಲೋ ಹಾರಿ ಹೋಗಿ ತಮ್ಮ ಜೀವನವನ್ನು ಕಂಡುಕೊಳ್ಳುತ್ತವೆ. ಪ್ರಾಣಿಗಳೂ ಅಷ್ಟೆ. ಅವು ಬಂದು ಮುದಿಯಾದ ತಂದೆ ತಾಯಿಗಳ ಸೇವೆಯನ್ನು ಮಾಡುವುದನ್ನು ನಾವು ಎಂದೂ ಕಂಡಿಲ್ಲ. ಆದುದರಿಂದ ಆ ನಿರೀಕ್ಷೆ ಬೇಡ.

ನಾನು ಮಾಡಿದ ಕೆಲಸಕ್ಕಾಗಿ ಸಮಾಜ ಮನ್ನಣೆಯನ್ನು ಕೊಡಬೇಕು. ನನ್ನ ಕೀರ್ತಿಯನ್ನು ಹಾಡಿ ಹೊಗಳಬೇಕು ಎಂಬ ಆಸೆಯೇ ತಪ್ಪು. ವಿಶ್ವದ ಇತಿಹಾಸದಲ್ಲಿ ಎಂತೆಂತಹ ಕೆಲಸ ಕಾರ್ಯಗಳನ್ನು ಮಾಡಿದವರನ್ನೇ ಜಗದ ಜನ ಮರೆತಿದೆ. ಅವರ ಸಾಧನೆಯನ್ನು ಹೋಲಿಸಿ ನೋಡಿದಾಗ ನಮ್ಮ ಕೆಲಸ ಅತ್ಯಂತ ಚಿಕ್ಕದು, ಯಾವ ಗಣನೆಗೂ ಬಾರದುದು ಎಂಬುದು ಸ್ಪಷ್ಟವಾಗುತ್ತದೆ. ಇದನ್ನು ಮನಸ್ಸಿನಲ್ಲಿಟ್ಟುಕೊಂಡು ಡಿವಿಜಿ ಹೇಳುತ್ತಾರೆ –

ಅಕ್ಕಿಯೊಳಗನ್ನವನು ಮೊದಲಾರು
ಕಂಡವರು?
ಅಕ್ಕರದ ಬರಹಕ್ಕೆ ಮೊದಲಿಗನದಾರು?
ಲೆಕ್ಕವಿರಿಸಿಲ್ಲ ಜಗ ತನ್ನಾದಿಬಂಧುಗಳ
ದಕ್ಕುವುದೇ ನಿನಗೆ ಜಸ, ಮಂಕುತಿಮ್ಮ॥

ಇಂದು ಮಾನವ ಕುಲದ ಬಹುಭಾಗ ತಿನ್ನುತ್ತಿರುವ ಅನ್ನ ಅಕ್ಕಿಯಿಂದ ಹುಟ್ಟಿದೆ. ಅಕ್ಕಿ, ಅನ್ನ ಎಂಬವು ಸಾಂಕೇತಿಕ. ಸಹಸ್ರಾರು ಧಾನ್ಯಗಳು, ಅವುಗಳಿಂದ ಮನುಷ್ಯರಿಗೆ ಸಿಕ್ಕುತ್ತಿರುವ ಆಹಾರ ಎಂಬ ಅರ್ಥ ವಿವಕ್ಷಿತ. ಈ ವಿಶಿಷ್ಟ ಗಿಡಗಳಲ್ಲಿ ಬೆಳೆಯುವ ಧಾನ್ಯವನ್ನು ಕುಟ್ಟಿ ಒಳಗಿನ ಕಾಳನ್ನು ಬೇಯಿಸಿದರೆ ಅನ್ನ, ಎಂದರೆ ಆಹಾರವಾಗುತ್ತದೆ ಎಂಬುದನ್ನು ಕಂಡು ಹಿಡಿದ ಮಾನವನ ಆವಿಷ್ಕಾರ ಬಹು ದೊಡ್ಡದು, ಮಾನವ ಕುಲದ ಉಳಿವಿಗೆ, ಸುಖಕ್ಕೆ ಕಾರಣವಾದುದು. ಆದರೆ ಅಂತಹ ಆವಿಷ್ಕಾರವನ್ನು ಮಾಡಿದವರನ್ನೂ ಪ್ರಪಂಚವು ಗುರುತಿಸಿದೆಯೇ? ಇಲ್ಲ. ಹಾಗೆಯೇ ಅಕ್ಷರಗಳು ಧ್ವನಿಗೆ ಸಂಕೇತಗಳಾಗುತ್ತವೆ. ಅದರಿಂದ ಪದ, ವಾಕ್ಯ, ಕಾವ್ಯ ಇತ್ಯಾದಿಗಳಿಗೆಲ್ಲ ಶಾಶ್ವತ ರೂಪವನ್ನು ಕೊಡಬಹುದು ಎಂದು ಕಂಡು ಹಿಡಿದದ್ದು ಮಾನವೇತಿಹಾಸದಲ್ಲಿ ದೊಡ್ಡ ಮೈಲಿಗಲ್ಲು. ಹಾಗೆ ಲಿಪಿಯ ಆವಿಷ್ಕಾರವನ್ನು ಮಾಡಿದ ಮಹಾಮೇಧಾವಿ ಯಾರು? ನಮಗೆ ಗೊತ್ತಿಲ್ಲ. ಅಂತಹ ಮಹಾವಿಜ್ಞಾನಿಗಳ ಲೆಕ್ಕವನ್ನೇ ಇಟ್ಟಿಲ್ಲ ಜಗತ್ತು. ಹೀಗಿರುವಾಗ ಯಾವುದೋ ಕ್ಷುದ್ರ, ಕ್ಷುಲ್ಲಕ ಕಾರ್ಯವೊಂದನ್ನು ಮಾಡಿ ಇದಕ್ಕಾಗಿ ನನ್ನ ಕೀರ್ತಿ ಜಗತ್ತಿನಲ್ಲಿ ಹಾರಾಡಲಿ ಎಂದು ನಿರೀಕ್ಷಿಸಿದರೆ ಯಶಸ್ಸು ದಕ್ಕುವುದೇ? ಇಲ್ಲ, ಇಲ್ಲ. ಒಬ್ಬರೋ ಇಬ್ಬರೋ ಬಾಯಿ ಮಾತಿನಲ್ಲಿ ಹೊಗಳಬಹುದಷ್ಟೆ. ಅದೂ ಅವರ ಅಂತರಂಗದಿಂದ ಬಂದ ನಿಜವಾದ ಪ್ರಶಂಸೆಯೆಂದು ಹೇಳಲಾಗದು. ಎದುರಿಗೆ ಹಾಗೆ ಹೊಗಳಿ ಬೆನ್ನ ಹಿಂದೆ ತೆಗಳುವವರೇ ಹೆಚ್ಚು ಮಂದಿ. ಹೊಗಳಿಕೆಯಿಂದ ಮರುಳು ಮಾಡಿ ಸ್ವಾರ್ಥವನ್ನು ಸಾಧಿಸಿಕೊಳ್ಳುವವರ, ತಮ್ಮ ಬೇಳೆ ಬೇಯಿಸಿಕೊಳ್ಳುವವರ ಸಂಖ್ಯೆ ದೊಡ್ಡದು ಎನ್ನುವುದನ್ನು ಮರೆಯಬಾರದು.

ಎಲ್ಲೋ ಒಂದು ಕಡೆ ನಾನು ಗಣ್ಯ. ನಾನು ಮಹನೀಯ ಎಂದೆನಿಸಿಕೊಳ್ಳಬೇಕೆಂಬ ಬಯಕೆ ಜನರಲ್ಲಿ ಬಲವತ್ತರವಾಗಿದೆ. ಇದಕ್ಕಾಗಿ ಏನೇನೋ ನಾಟಕ. ಯಾರು ಯಾರನ್ನೋ ಓಲೈಸುವ ತವಕ. ಈ ಕೀರ್ತಿ ಶನಿಕಾಟ ಆರಂಭವಾದವನಿಗೆ ನೆಮ್ಮದಿಯಿಲ್ಲ. ತನ್ನ ಪಾಡಿಗೆ ತಾನಿದ್ದು ಅನುಭವಿಸಬಹುದಾದ ಆತ್ಮಸುಖ ಅಂತಹ ಜನರಿಗಿಲ್ಲ. ನಾಲ್ಕು ಜನ ಹೊಗಳಬೇಕು. ನಮ್ಮ ಸಮಾನರಿಲ್ಲ ಎನ್ನಬೇಕು ಎಂಬುದನ್ನೇ ಧ್ಯೇಯವಾಗಿಟ್ಟುಕೊಂಡವರಿಗೆ ಆತ್ಮಾನಂದಕ್ಕೆ ಅವಕಾಶವೆಲ್ಲಿ? ಡಿವಿಜಿ ಎಚ್ಚರಿಸಿದ್ದಾರೆ –

ಮನೆಯೊಳೋ ಮಠದೊಳೋ
ಸಭೆಯೊಳೋ ಸಂತೆಯೊಳೋ
ಕೊನೆಗೆ ಕಾಡೊಳೋ
ಮಸಣದೊಳೊ ಮತ್ತೆಲ್ಲೊ
ಗಣನೆಗೇರಲಿಕೆಂದು ಜನ ತಪಿಸಿ
ತೊಳಲುವುದು
ನೆನೆಯದಾತ್ಮದ ಸುಖವ ಮಂಕುತಿಮ್ಮ॥

ಕೆಲವರಿಗೆ ಮನೆಯಲ್ಲಿ ಹೊಗಳಿಸಿಕೊಂಡರೆ ಸಾಕು. ಇನ್ನು ಕೆಲವರಿಗೆ ಮಠದಲ್ಲಿ ಸ್ವಾಮಿಗಳ ಸನ್ನಿಧಿಯಲ್ಲಿ ಹೊಗಳಿಸಿಕೊಳ್ಳಬೇಕೆಂಬಾಸೆ. ಮತ್ತೆ ಕೆಲವರಿಗೆ ಸಾವಿರಾರು ಜನರು ಸೇರಿರುವ ಸಭೆಯಲ್ಲಿ ಹೊಗಳಿಕೆಗೆ ಪಾತ್ರರಾದರೆ ಧನ್ಯತೆ. (ಇದಕ್ಕಾಗಿ ತಾವೇ ಹಣ ಖರ್ಚು ಮಾಡಿ ಸಭೆಯನ್ನು ಆಯೋಜಿಸುವವರೂ ಇದ್ದಾರೆ). ಸಂತೆಯಲ್ಲಾದರೂ ಸರಿ, ಡೋಲು, ತಮಟೆ ಬಡಿದು ತಮ್ಮ ಸ್ತೋತ್ರವನ್ನು ಹೇಳುವವರನ್ನು ಹುಡುಕುವವರು ಇದ್ದಾರೆ. ಕಾಡಿನಲ್ಲೋ, ಸ್ಮಶಾನದಲ್ಲೋ ಎಲ್ಲಾದರೂ ಸರಿ ಹೊಗಳಿಸಿಕೊಳ್ಳಬೇಕು ಎನ್ನುವವರೂ ಇದ್ದಾರೆ. ಆದುದರಿಂದಲೇ ಕಾಳಿದಾಸ ಹೇಳಿದ್ದು – 'ಸ್ತೋತ್ರಂ ಕಸ್ಯ ನ ತುಷ್ಟಯೇ' ಎಂಬ ಮಾತನ್ನು. ಇದಕ್ಕಾಗಿ ತಪಿಸಿ ತೊಳಲುವವರಿಗೆ ಸುಖವೆಲ್ಲಿಯದು.

The last infirmity of the great is fame ಎಂಬ ಆಂಗ್ಲೋಕ್ತಿಯಿದೆ. ದೊಡ್ಡ ಕಾರ್ಯಗಳನ್ನು ಮಾಡಿದವರ ಕೊನೆಯ ದೌರ್ಬಲ್ಯ ಕೀರ್ತಿ ಎಂದು ಅದರ ಅರ್ಥ. ನನ್ನ ಹೆಸರು ಕೆಡಬಾರದು. ನನ್ನ ಕೀರ್ತಿ ಸದಾ ನಿಷ್ಕಲಂಕವಾಗಿ, ಸುಧಾಧವಳವಾಗಿ ಇರಬೇಕು ಎಂಬುದಕ್ಕಾಗಿ ಅವರು ಪಡಬಾರದ ಕಷ್ಟಗಳನ್ನು ಪಟ್ಟಿರುವುದುಂಟು. ಧರ್ಮಪತ್ನಿ ಸೀತೆಯನ್ನು ರಾಮನು ಬಿಟ್ಟಿದ್ದೇಕೆ? 'ಯಶೋಧನಾನಾಂ ಹಿ ಯಶೋ ಗರೀಯಃ' ಎಂದು ಹೇಳಿದ್ದಾನೆ ಕಾಳಿದಾಸ. ಪತ್ನಿಯ ಪ್ರೀತಿಗಿಂತ ಲೋಕದ ಕೀರ್ತಿ ದೊಡ್ಡದು ಎನಿಸಿತು ರಾಮನಿಗೆ. ಇದು ಸರಿಯೋ ತಪ್ಪೋ ನಮಗೆ ತಿಳಿಯದು.

ಅನ್ನದಾತುರಕಿಂತ ಚಿನ್ನದಾತುರ ತೀಕ್ಷ್ಣ
ಚಿನ್ನದಾತುರಕಿಂತ ಹೆಣ್ಣು ಗಂಡೊಲವು
ಮನ್ನಣೆಯ ದಾಹವದು ಎಲ್ಲಕಿಂ ತೀಕ್ಷ್ಣತಮ
ತಿನ್ನುವುದದಾತ್ಮವನೆ ಮಂಕುತಿಮ್ಮ॥

ಎಂದು ಡಿವಿಜಿ ಕೀರ್ತಿಕಾಮನೆಯನ್ನು ಖಂಡಿಸಿದ್ದಾರೆ. ಕೀರ್ತಿ ಎಂಬುದು ಇದ್ದರೂ ಅದು ಸಾರ್ವತ್ರಿಕವೆಂಬ ಖಾತರಿ ಇಲ್ಲ. ಗಾಂಧಿ, ನೆಹರೂ ಮುಂತಾದ ರಾಷ್ಟ್ರ ನಾಯಕರನ್ನು ಹೊಗಳುವವರಿರುವಂತೆ ಜರಿಯುವವರೂ ಇದ್ದಾರಲ್ಲವೇ? ಇಂದು ಹೊಗಳಿಕೆಗೆ ಭಾಜನರಾಗಿರುವವರು ನಾಲ್ಕು ದಿನ ಕಳೆದ ಮೇಲೆ ತೆಗಳಿಕೆಗೆ ಪಾತ್ರರಾಗುವುದೂ ಉಂಟು. ಆದ್ದರಿಂದ ಹೊಗಳಿಕೆಗೆ ಬಾಯಿ ಬಿಡದಿರುವುದು ಲೇಸು.

ಎಲ್ಲರೂ ಹೊಗಳಿಕೆಯನ್ನು ಇಷ್ಟ ಪಡುತ್ತಾರೆ ಎಂದೇನಿಲ್ಲ. ನಿಜ ಮಹಾತ್ಮರು ಹೊಗಳಿಕೆಯಲ್ಲಿರುವ ಅಪಾಯವನ್ನರಿತು ಅದು ಬೇಡವೇ ಬೇಡ ಎಂದಿದ್ದಾರೆ. ಬಸವಣ್ಣನವರು ಹೇಳಿರುವ ವಚನ ಇಲ್ಲಿ ಗಮನಾರ್ಹ–

ಎನ್ನವರೊಲಿದು
ಹೊನ್ನಶೂಲದಲಿಕ್ಕಿದರೆನ್ನ
ಹೊಗಳಿ ಹೊಗಳಿ, ಎನ್ನ ಹೊಗಳತೆ
ಎನ್ನ ನಿಮ್ಮೈಗೊಂಡಿತ್ತಲ್ಲ,
ಅಯ್ಯೋ ನೊಂದೆನು
ಸೈರಿಸಲಾರೆನು, ಅಯ್ಯೋ
ನಿಮ್ಮ ಮನ್ನಣೆಯೇ
ಮಸೆದಲಗಾಗಿ ತಾಗಿತ್ತಲ್ಲ.
ಅಯ್ಯೋ ನೊಂದೆನು, ಸೈರಿಸಲಾರೆನು
ಕೂಡಲ ಸಂಗಮದೇವ,
ನಿನೆನಗೊಳ್ಳಿತನಾದಡೆ
ಎನ್ನ ಹೊಗಳತೆಗಡ್ಡಬಾರಾ ಧರ್ಮಿ.

ಹೊಗಳಿಕೆ ಇಷ್ಟವಾದರೂ ವ್ಯಕ್ತಿತ್ವವನ್ನು ಕೊಯ್ದು ಹೋಳು ಮಾಡುತ್ತದೆ. ಅದು ಚಿನ್ನದ ಶೂಲದಂತೆ. ಚಿನ್ನ ಎಲ್ಲರಿಗೂ ಬೇಕಾದುದೇ. ಆದರೆ ಚಿನ್ನದ ಶೂಲದ ಮೇಲೆ ಮನುಷ್ಯನನ್ನು ಏರಿಸಿದಾಗ ಅದು ಚುಚ್ಚಿ ಆ ಮನುಷ್ಯನನ್ನು ಕೊಲ್ಲುತ್ತದೆ. ಮನ್ನಣೆ ಮಸೆದ ಅಲಗಿನಂತೆ ಕತ್ತರಿಸಿ ಸಾಯಿಸುತ್ತದೆ. ಅದಕ್ಕೇ ಬಸವಣ್ಣ ಹೇಳಿದ್ದು –ನೊಂದೆನು ಸೈರಿಸಲಾರೆನು ಎಂದು. ಇದೇ ಅಭಿಪ್ರಾಯ ಯಾಜ್ಞವಲ್ಕ್ಯ ಸ್ಮೃತಿಯಲ್ಲೂ ಇದೆ–

'ಸಂಮಾನಾದುದ್ವಿಜೇತ್ ಪ್ರಾಜ್ಞಃ
ಕೃಷ್ಣಸರ್ಪವಿಷಾದಿವ'

ಪ್ರಾಜ್ಞನು ಕರಿನಾಗರಹಾವಿನ ವಿಷದಿಂದ ಹೆದರುವ ಹಾಗೆ ಸಂಮಾನದಿಂದಲೂ ಹೆದರಬೇಕು. ಸಂಮಾನದಲ್ಲಿರುವ ವಿಷ ಎಂದರೆ ಹೊಗಳಿಕೆ–ನಿಷ್ಕಾರಣಪ್ರಶಂಸೆ. ಹೀಗಿರುವಾಗ ನಮ್ಮ ರಾಜರೂ ಶ್ರೀಮಂತರೂ ವೇತನವನ್ನು ಕೊಟ್ಟು ವಂದಿಮಾಗಧರಿಂದ ಹೊಗಳಿಸಿಕೊಳ್ಳುತ್ತಿದ್ದುದು ಎಷ್ಟು ಹಾಸ್ಯಾಸ್ಪದ! ಸತ್ಯಕ್ಕೆ ಬೆಲೆಯನ್ನು ಕೊಡುವ ಯಾವ ವ್ಯಕ್ತಿಯೂ ಸುಳ್ಳು ಪ್ರಶಂಸೆಯನ್ನು ಇಷ್ಟಪಡುವುದಿಲ್ಲ. ತಾವು ಪ್ರಶಂಸೆಗೆ ಅರ್ಹರಲ್ಲವೆಂಬುದನ್ನು ಅರಿತೂ ಹೊಗಳಿಕೆಗೆ ಆಸೆ ಪಡುವವರನ್ನು ಏನೆಂದು ಕರೆಯಬೇಕೋ ತಿಳಿಯದು. ಬೇರೆ ಯಾರೂ ತಮ್ಮನ್ನು ಹೊಗಳುವವರಿಲ್ಲವೆಂದು ತಾವೇ ತಮ್ಮನ್ನು ಹೊಗಳಿಕೊಳ್ಳುವ ಮಹಾನುಭಾವರಿಗೆ ನಮೋ ನಮಃ

ದಸರಾ ಸಾರಥಿಗಳಾಗಿದ್ದ ಧೀರೋದ್ಧಾತ ದ್ರೋಣ, ಬಲರಾಮ

ಹೆಮ್ಮೆಯ ಅಂಬಾರಿ ಆನೆಗಳಾಗಿದ್ದ ದ್ರೋಣ ಮತ್ತು ಬಲರಾಮ ಇಬ್ಬರ ಅಂತ್ಯವೂ ದುರಂತಮಯವಾದದ್ದು ದುಃಖಕರ. 19 ಬಾರಿ ಚಿನ್ನದ ಅಂಬಾರಿ ಹೊತ್ತಿದ್ದ ದ್ರೋಣ ಕರೆಂಟ್ ಹೊಡೆದು ಒದ್ದಾಡಿ ಸತ್ತರೆ, ಬಲರಾಮನದೂ ಮತ್ತೊಂದು ಬಗೆಯ ದುಃಖಮಯ ಅಂತ್ಯ.

ಈಗೆರಡು ತಿಂಗಳ ಹಿಂದೆ ಯಾರೋ ಒಬ್ಬಾತ ಬಲರಾಮ ಹೊಲ ಮೆಯ್ಯಲು ಹೋದ ಎಂಬ ಕಾರಣಕ್ಕೆ ಹುಚ್ಚಾಪಟ್ಟೆ ಗುಂಡಿನ ಮಳೆಗರೆದಿದ್ದ. ತೀವ್ರವಾಗಿ ಗಾಯಗೊಂಡಿದ್ದ ಬಲರಾಮನಿಗೆ ಮುತುವರ್ಜಿಯಿಂದ ಚಿಕಿತ್ಸೆ ಕೊಡಲಾಗಿತ್ತು.

ಬಾಯಿಹುಣ್ಣಿನಿಂದಾಗಿ (ಗುಂಡೇಟಿನದೇ ಪರಿಣಾಮವೋ ತಿಳಿಯದು) ಆತನಿಗೆ ಏನನ್ನೂ ತಿನ್ನಲಾಗುತ್ತಿರಲಿಲ್ಲ. ಉಪವಾಸದಿಂದ ಕೃಶಗೊಂಡಿದ್ದ ಆತ ನರಳಿ ನರಳಿ ಕೊನೆಯುಸಿರೆಳೆದಿದ್ದು ಅತ್ಯಂತ ವ್ಯಸನಕರ. ಈ ಎರಡೂ ಆನೆಗಳು ನಮ್ಮ ರಾಜ್ಯದ ಹೆಮ್ಮೆಯ ಅಂಬಾರಿ ಆನೆಗಳು.

ದ್ರೋಣನ ಬಗ್ಗೆ ಎಷ್ಟು ವರ್ಣಿಸಿದರೂ ಸಾಲದು. ದ್ರೋಣ ಅದೆಷ್ಟು ಮೋಹಕವಾಗಿ ಬ್ಯಾಂಡ್ ನಾದಕ್ಕೆ ತಲೆದೂಗುತ್ತಾ ಬರುತ್ತಿದ್ದಾನೆ. ಅವನ ಲಯಬದ್ಧ ನಡಿಗೆ, ಸೈನ್ಯನಾದದ ಜರ್ಬಿಗೆ ಜಬರ್ದಸ್ತಾಗಿ ಸಾಗುವ ದೀರ್ಘಕಾಯ. ಆ ಅಲಂಕಾರಿಕ ಶುದ್ಧ ಶ್ವೇತ ದಂತಗಳು. ಕಾಡಿನಲ್ಲಿ ಸ್ವತಂತ್ರವಾಗಿ ಸ್ವಚ್ಛಂದವಾಗಿದ್ದ ಗಜರಾಜ. ದಸರಾಗೆ ಬಂದಿದ್ದ ಎಲ್ಲಾ ಆನೆಗಳಿಗಿಂತ ಹೆಚ್ಚು ಪುಷ್ಟವಾಗಿ ಬಲಿಷ್ಠವಾಗಿತ್ತು. ಇವನ ಹಣೆಭಾಗದ ಕುಂಭಸ್ಥಲವೇ ಆಕರ್ಷಕ, ಸುಂದರ. ಅವನ ಹಣೆಯ ಭಾಗವಂತೂ ಕೆತ್ತಿದು ಮಾಡಿಸಿದ ಸೌಂದರ್ಯ. ಸಪ್ರಮಾಣ ಬದ್ಧ ಶ್ರೇಷ್ಠ ಲಕ್ಷಣಗಳನ್ನು ಹೊಂದಿರುವ ಗಜರಾಜ ಇವನೆಂದು ಧಾರಾಳವಾಗಿ ಹೇಳುವಂತಿದ್ದ.

ನಾನು ನೋಡಿರುವ ಆನೆಗಳಲ್ಲೇ ಅತ್ಯಂತ ಶ್ರೇಷ್ಠ ಗುಣಲಕ್ಷಣಗಳಿದ್ದ ಗಜ ಗಾಂಭೀರ್ಯದ ಆನೆ ಎಂದರೆ ದ್ರೋಣ. ದಸರಾ ಚಿನ್ನದ ಅಂಬಾರಿಯನ್ನು ಹತ್ತೊಂಬತ್ತು ವರ್ಷಗಳ, ಅತೀ ದೀರ್ಘಕಾಲ ಹೊತ್ತು ನಡೆದವನು ದ್ರೋಣ. ಅವನ ಎತ್ತರ ಮತ್ತು ಗಾತ್ರಕ್ಕೆ ಸರಿಸಮನಾದ ಆನೆ ಮತ್ತೊಂದಿಲ್ಲ. ಅವನ ಮಟ್ಟಸವಾದ ಬೆನ್ನುಭುಜದ ಭಾಗ ಅದೆಷ್ಟು ವಿಶಾಲವಾಗಿತ್ತೆಂದರೆ, ತಾಯಿ ಚಾಮುಂಡೇಶ್ವರಿಯ ಉತ್ಸವ ಮೂರ್ತಿವುಳ್ಳ ಅಂಬಾರಿ ಒಂದಿಷ್ಟೂ ಬಾಗದಂತೆ, ಜಾರದಂತೆ ಕೂರುತ್ತಿತ್ತು. ಅರಮನೆಯಿಂದ ಸುಮಾರು 6 ಕಿಲೋ ಮೀಟರ್ ದೂರ ಮೆರವಣಿಗೆಯಲ್ಲಿ ನಡೆದು ದ್ರೋಣ ಬನ್ನಿಮಂಟಪ ಮೈದಾನ ಸೇರುತ್ತಿದ್ದ. ಚಾಮುಂಡೇಶ್ವರಿಯ ಚಿನ್ನದ ಅಂಬಾರಿ ಒಂದಿಷ್ಟೂ ಕೊಂಕಿರುತ್ತಿರಲಿಲ್ಲ.





ಸತತ 19 ವರ್ಷಗಳ ಕಾಲ ಅಂಬಾರಿ ಹೊತ್ತಿದ್ದ ದ್ರೋಣ, ಒಂದೇ ಒಂದು ಬಾರಿಯೂ ಕೂಡ ವ್ಯಗ್ರನಾಗಿರಲಿಲ್ಲ. ಭೂಮ್ಯಾಕಾಶ ನಡುಗುವಂತಹ ಇಪ್ಪತ್ತೊಂದು ಕುಶಾಲುತೋಪುಗಳನ್ನು ಹಾರಿಸಿದಾಗ ಕೊಂಚವೂ ಕೆಂದದ ಸ್ಥಿತಪ್ರಜ್ಞ, ಗಡಚಿಕ್ಕುವ ಫಿರಂಗಿ ಸ್ಫೋಟದ ನಡುವೆಯೂ ಅವನ ಗಾಂಭೀರ್ಯದ ಗತ್ತೇ ಗತ್ತು.

ಹೀಗೆ ಚಿನ್ನದ ಅಂಬಾರಿಯಲ್ಲಿ ತಾಯಿ ಶ್ರೀ ಚಾಮುಂಡೇಶ್ವರಿಯನ್ನು ಹೊತ್ತು ಗಜ ಗಾಂಭೀರ್ಯದಲ್ಲಿ ಸಾಗುತ್ತಿದ್ದ ದ್ರೋಣ ಒಮ್ಮೆ ಗಕ್ಕನೆ ನಿಂತುಬಿಟ್ಟಿದ್ದ. ಅದೂ ಬೊಂಬು ಬಜಾರಿನ ಸರ್ಕಲ್ ಇರಬೇಕು. ಕಾರಣವೇ ಇಲ್ಲದೆ ನಿಂತನೇಕೆಂದು ಮಾವುತ ಗಾಬರಿಯಾದ. ಅಂಕುಶದಲ್ಲಿ ಮೃದುವಾಗಿ ಒತ್ತಿ ನೋಡಿದ. ಒಂದಿಷ್ಟೂ ಕೆಂದಲಿಲ್ಲ. ಕೊಂಚ ಬಲವಾಗಿ ಒತ್ತಿದ. ಉಹೂಂ ಅಲ್ಲಾಡಲೊಲ್ಲ. ಚಿನ್ನದ ಅಂಬಾರಿ ಹೊತ್ತಿರುವ ದ್ರೋಣನಿಗೆ ಸಿಕ್ಕಾಪಟ್ಟೆ ಅಂಕುಶ ಒತ್ತುವಂತಿಲ್ಲ. ಎಲ್ಲಾದರೂ ಕೆರಳಿ ಅತ್ತಿತ್ತ ಅಡ್ಡಾಡಿದನೆಂದರೆ ಮುಗಿಯಿತು ಕತೆ.

ಇಡೀ ಮೆರವಣಿಗೆ ಅಸ್ತವ್ಯಸ್ತಗೊಳ್ಳುತ್ತದೆ. ಸುತ್ತಲೂ ನೆರೆದಿರುವ ಸಾವಿರಾರು ಜನ ದಿಕ್ಕಾಪಾಲಾಗಿ ಓಡಿದರೆಂದರೆ ಎಲ್ಲಾ ಮುಗಿದಂತೆಯೇ.

ದಿಕ್ಕು ತೋಚದೆ ಮಾವುತ, ಕೆಳಗಡೆ ಇದ್ದ ಕಾವಾಡಿಗಳಿಗೆ (ಆನೆಯ ಸ್ನಾನ–ಪಾನಾದಿ ಮೇವಿನ ಉಸ್ತುವಾರಿ ಮಾಡುವ ಕಾಸ್ತಾರರು) ಸೂಚನೆ ಇತ್ತ. ಅವರೂ ಬಗ್ಗಿ ನೋಡಿ ಪರಿಶೀಲಿಸಿದರು. ಕಾರಣ ಗೊತ್ತಾಗಲಿಲ್ಲ. ಯಾಕೆ ಏನಾಯ್ತು, ಧೀರೋದಾತ್ತ ದ್ರೋಣ ಹಾಗೆಲ್ಲಾ ಸುಮ್ಮನೇ ನಿಲ್ಲುವವನೂ ಅಲ್ಲ. ಮತ್ತೊಮ್ಮೆ ಪರಿಶೀಲಿಸಿದರು. ದ್ರೋಣ ಬಲ ಮುಂಗಾಲನ್ನು ಅಲ್ಲಾಡಿಸಿದ. ಭಾರಿ ಪ್ರಮಾಣದಲ್ಲಿ ರಕ್ತ ನೆಲದ ಮೇಲೆ ಹರಡಿಕೊಂಡಿತು. ಆನೆ ವೈದ್ಯರು, ಪರೇಡ್ ಕಮಾಂಡರ್ ಮರಿಬಾಸೆಟ್ಟಿ ಎಲ್ಲರೂ ಧಾವಿಸಿ ಬಂದರು.

ಸುಮಾರು 7 ಇಂಚಿನಷ್ಟು ಉದ್ದದ ಕಬ್ಬಿಣದ ಮೊಳೆ ಹೊಕ್ಕಿತ್ತು. ಆದರೂ ದ್ರೋಣ ತಕರಾರು ಮಾಡದೆ ನಡೆದೇ ಬಂದಿದ್ದ. ತಕ್ಷಣವೇ ಮೊಳೆ ಕಿತ್ತು ಚಿಕಿತ್ಸೆ ನೀಡಿದರು.

ಇಷ್ಟಾದರೂ ತನ್ನ ಐಬು ತೋರಿಸಿಕೊಳ್ಳದೆ ದ್ರೋಣ ಬನ್ನಿಮಂಟಪಕ್ಕೆ ಬಂದು ಸೇರಿದ. ಬೇರೆ ಯಾವುದೇ ಆನೆಯಾಗಿದ್ದರೂ ನೋವಿಗೆ ಅತ್ತಿತ್ತ ಅಡ್ಡಾಡಿ ರಂಪ ಮಾಡಿಬಿಡುತ್ತಿತ್ತೋ ಏನೋ. ಪ್ರಾಣಿಯಾಗಿದ್ದರೇನು, ದ್ರೋಣ ತರಬೇತಿ ಹೊಂದಿದ್ದ ಸುಪುಷ್ಟ ಆನೆ. ಅವನ ನೆರವಿನಿಂದ ಮದಿಸಿದ್ದ ಅನೇಕ ಕಾಡಾನೆಗಳನ್ನು ಹಿಡಿಯಲು ಸಾಧ್ಯವಾಗಿತ್ತು. ಹೀಗಾಗಿ ಜವಾಬ್ದಾರಿಕೆ ಎಂಬುದು ಅವನಿಗೆ ಕರಗತವಾಗಿತ್ತು.

ದ್ರೋಣನ ನಡೆ ಧೀರೋದ್ಧಾತ ರಣಾಗ್ರಣಿಯದು. ಸೈನ್ಯ ಪದಾತಿ ದಳದ ಭಾಗವಾಗಿ ಆತ ಹೆಜ್ಜೆ ಹಾಕುತ್ತಿದ್ದ. ಅವನ ನಂತರ ಬಲರಾಮ, ಅರ್ಜುನ, ಅಭಿಮನ್ಯು ಹೀಗೆ ಅನೇಕ ಆನೆಗಳು ಅಂಬಾರಿ ಹೊತ್ತು ನಿಭಾಯಿಸಿದವು. ಬಲರಾಮನೊಮ್ಮೆ ಗಾಬರಿ ಬಿದ್ದು ಎತ್ತೆತ್ತಲೋ ಓಡಾಡಿದ್ದ. ಅವನನ್ನು ಕಂಟ್ರೋಲ್ ಮಾಡಲೆಂದೇ ಮೈಗೆ ತಗುಲುವಂತೆ ಅಂಟಿಸಿ ನಿಲ್ಲಿಸಿದ್ದ ಸರೋಜಿನಿ ಮತ್ತು ಕಾಂತಿ ಎಂಬ ಸುರ–ಸುಂದರಿಯರಿಗೂ ಏನೂ ಮಾಡಲಾಗಲಿಲ್ಲ! ಮುಂದೆ ಅರ್ಜುನ, ಅಭಿಮನ್ಯು ಅಂಬಾರಿ ಹೊತ್ತವು. ಆದರೆ ದ್ರೋಣ ದ್ರೋಣನೇ. ಅವನಿಗೆ ಸಾಟಿಯಾದ ಮತ್ತೊಂದು ಆನೆ ಶತಮಾನ ಕಳೆದರೂ ಸಿಕ್ಕಲಾರದು. ಐತಿಹಾಸಿಕ ಮಹತ್ವದ ದ್ರೋಣ ವಿದ್ಯುತ್ ಆಘಾತದಿಂದ ಅಕಾಲ ಮರಣ ಹೊಂದಿದ. ಆದರೆ ಅವನನ್ನು ನೆನೆಯದೆ ದಸರಾ ಮೆರವಣಿಗೆ ಚಿತ್ರ ಪೂರ್ಣವಾಗದು. ಆ ಸರದಿ ಈಗ ಬಲರಾಮನದು. ಇಬ್ಬರು ಧೀರೋದ್ಧಾತ್ತರಿಗೂ ಶ್ರದ್ಧಾಂಜಲಿ.



ಜೆ.ಬಿ. ರಂಗಸ್ವಾಮಿ
ನಿವೃತ್ತ ಪೊಲೀಸ್ ಅಧಿಕಾರಿ
ಮೊ : 94490–10009

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 10 ಬುಧವಾರ 2023

ಸಂಪುಟ: 44 | ಸಂಚಿಕೆ: 24 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಇಂದು ಬೆಳಗ್ಗೆ 7ರಿಂದ ಸಂಜೆ 6 ಗಂಟೆವರೆಗೆ ಮತದಾನ



- 2615 ಅಭ್ಯರ್ಥಿಗಳ ಭವಿಷ್ಯ ನಿರ್ಧರಿಸಲಿರುವ 5,31,33,054 ಮತದಾರರು
- ಪ್ರತಿ ಬೂತ್‌ನಲ್ಲಿ 900 ಮತ ಚಲಾವಣೆ ನಿಗದಿ;ಎಡಗೈ ತೋರು ಬೆರಳಿಗೆ ಶಾಯಿ
- ರಾಜ್ಯಾದ್ಯಂತ 58,545 ಮತಗಟ್ಟೆ ಸ್ಥಾಪನೆ; ಎಲ್ಲೆಡೆ ವ್ಯಾಪಕ ಬಂದೋಬಸ್ತ್

ಬೆಂಗಳೂರು, ಮೇ 9 (ಕೆಎಂಶಿ)– ರಾಷ್ಟ್ರದ ಗಮನ ಸೆಳೆದಿರುವ ಹಾಗೂ ಮುಂದಿನ ಲೋಕಸಭಾ ಚುನಾವಣೆಗೆ ದಿಕ್ಸೂಚಿ ಎಂದೇ ಪರಿಗಣಿಸಲಾಗಿರುವ ಕರ್ನಾಟಕ ರಾಜ್ಯ ವಿಧಾನಸಭಾ ಚುನಾವಣೆಗೆ ಬುಧವಾರ ಮತದಾನ ನಡೆಯಲಿದೆ.

ರಾಜ್ಯದ 224 ವಿಧಾನಸಭಾ ಕ್ಷೇತ್ರಗಳಿಗೆ ಬೆಳಗ್ಗೆ 7ರಿಂದ ಸಂಜೆ ಆರು ಗಂಟೆವರೆಗೂ ಮತದಾನ ನಡೆಯಲಿದ್ದು, ಮುಕ್ತ, ನ್ಯಾಯ ಸಮ್ಮತ ಹಾಗೂ ನಿಷ್ಪಕ್ಷಪಾತ ಮತದಾನಕ್ಕಾಗಿ ಬಿಗಿ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿದೆ. ಹಾಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಮಾಜಿ ಮುಖ್ಯಮುಂತ್ರಿಗಳಾದ ಹೆಚ್.ಡಿ. ಕುಮಾರಸ್ವಾಮಿ, ಜಗದೀಶ್ ಶೆಟ್ಟರ್, ಸಿದ್ದರಾಮಯ್ಯ ಸೇರಿದಂತೆ 2615 ಅಭ್ಯರ್ಥಿಗಳು ಚುನಾವಣಾ ಕಣದಲ್ಲಿದ್ದಾರೆ.

ಆಡಳಿತಾರೂಢ ಬಿಜೆಪಿ–224 ಕ್ಷೇತ್ರಗಳಿಗೂ ಸ್ಪರ್ಧೆಗಿಳಿದು, ಮತ್ತೆ ಅಧಿಕಾರದ ಚುಕ್ಕಾಣಿ ಹಿಡಿಯುವ ತವಕದಲ್ಲಿದ್ದರೆ, ಪ್ರತಿಪಕ್ಷವಾದ ಕಾಂಗ್ರೆಸ್–223, ಜೆಡಿಎಸ್–209, ಇತರೆ ರಾಷ್ಟ್ರೀಯ, ನೋಂದಾಯಿತ ಪಕ್ಷಗಳು ಹಾಗೂ ಸ್ವತಂತ್ರ ಅಭ್ಯರ್ಥಿಗಳು ತಮ್ಮ ಅದೃಷ್ಟ ಪರೀಕ್ಷೆಗಿಳಿದಿದ್ದಾರೆ.

ರಾಜ್ಯದ ಹದಿನಾರನೇ ವಿಧಾನಸಭಾ ಚುನಾವಣೆಗೆ 224 ಅಭ್ಯರ್ಥಿಗಳನ್ನು ಆಯ್ಕೆ ಮಾಡಲು5,31,33,054 ಮತದಾರರು ಮತದಾನ ಮಾಡುವ ಹಕ್ಕು ಹೊಂದಿದ್ದಾರೆ. ಮತದಾನದ ಅನುಕೂಲಕ್ಕಾಗಿ ಚುನಾವಣಾ ಆಯೋಗ ಸಕಲ ರೀತಿಯಲ್ಲೂ ಸಜ್ಜುಗೊಂಡಿದೆ. 58,545 ಮತಗಟ್ಟೆಗಳನ್ನು ರಾಜ್ಯದಲ್ಲಿ ತೆರೆದಿದ್ದು, ಪ್ರತಿ ಮತ ಕೇಂದ್ರದಲ್ಲಿ ಸುಮಾರು 900 ಮತದಾರರು





ಪ್ರತಿಷ್ಠೆ ಕಣಗಳು

ವರುಣ (ಸಿದ್ದರಾಮಯ್ಯ–ಸೋಮಣ್ಣ)
ಹಾಸನ (ಪ್ರೀತಂಗೌಡ–ಸ್ವರೂಪ್)
ಚನ್ನಪಟ್ಟಣ (ಹೆಚ್.ಡಿ.ಕುಮಾರಸ್ವಾಮಿ– ಸಿ.ಪಿ. ಯೋಗೇಶ್ವರ್)
ಕನಕಪುರ (ಡಿ.ಕೆ.ಶಿವಕುಮಾರ್–ಆರ್.ಅಶೋಕ)
ಹುಬ್ಬಳ್ಳಿ–ಧಾರವಾಡ ಸೆಂಟ್ರಲ್ (ಜಗದೀಶ್‌ಶೆಟ್ಟರ್–ಮೋಹನ್ ತೆಂಗಿನಕಾಯಿ),
ಚಿತ್ತಾಪುರ (ಪ್ರಿಯಾಂಕ್ ಖರ್ಗೆ–ಮಣಿಕಂಠ ರಾಥೋಡ್)
ಅಥಣಿ (ಸವದಿ–ಮಹೇಶ್ ಕುಮಟಳ್ಳಿ)

ಮತ ಚಲಾಯಿಸಲು ಅವಕಾಶ ಕಲ್ಪಿಸಲಾಗಿದೆ. ಮತ ಚಲಾವಣೆ ಸಂದರ್ಭದಲ್ಲಿ ಎಪಿಕ್ ಸೇರಿದಂತೆ ಕೇಂದ್ರ ಇಲ್ಲವೆ ರಾಜ್ಯ ಸರ್ಕಾರ ನೀಡಿರುವ ವಿವಿಧ ಗುರುತಿನ ಚೀಟಿ ಪ್ರದರ್ಶಿಸಿ ಮತ ಚಲಾಯಿಸಬಹುದು. ಮತದಾರರ ಎಡಗೈ ತೋರು ಬೆರಳಿಗೆ ಶಾಯಿ ಹಾಕಲಾಗುತ್ತದೆ. ನಾಳೆ ನಡೆಯುವ ಮತದಾನದ ಸಂದರ್ಭದಲ್ಲಿ ಯಾವುದೇ ಅಹಿತಕರ ಘಟನೆ ಜರುಗದಂತೆ ಮುನ್ನೆಚ್ಚರಿಕಾ ಕ್ರಮವಾಗಿ ರಾಜ್ಯ ಪೊಲೀಸ್, ಹೋಂ ಗಾರ್ಡ್, ಕೇಂದ್ರ ಅರೆಸೇನಾಪಡೆಯನ್ನು ಆಯೋಗ ನಿಯೋಜಿಸಿದೆ. ಸೂಕ್ಷ್ಮ ಮತ್ತು ಅತೀ ಸೂಕ್ಷ್ಮ ಮತಗಟ್ಟೆಗಳಲ್ಲಿ ಹೆಚ್ಚಿನ ಭದ್ರತೆಯ ಜತೆಗೆ ಸಿಸಿಟಿವಿ ಅಳವಡಿಸಿ ಹದ್ದಿನಕಣ್ಣಿಡಲಾಗಿದೆ. ರಾಜ್ಯ ಸರ್ಕಾರಿ ನೌಕರರ ಜತೆಗೆ ಕೇಂದ್ರ ಸರ್ಕಾರಿ ನೌಕರರನ್ನು ಚುನಾವಣಾ ಕಾರ್ಯಕ್ಕೆ ಬಳಕೆ ಮಾಡಿಕೊಂಡಿದ್ದು, ವಿದ್ಯುನ್ಮಾನ ಮತ ಯಂತ್ರಗಳೊಂದಿಗೆ ತಮಗೆ ನಿಗದಿಪಡಿಸಿದ ಮತಗಟ್ಟೆಗಳಿಗೆ ● 10ನೇ ಪುಟಕ್ಕೆ

ಮೈಸೂರು, ಮಂಡ್ಯ, ಚಾ.ನಗರ, ಕೊಡಗು, ಹಾಸನದಲ್ಲಿ ಮತದಾನಕ್ಕೆ ಸರ್ವ ವ್ಯವಸ್ಥೆ

ಮೈಸೂರು ಜಿಲ್ಲೆಯ 11 ವಿಧಾನಸಭಾ ಕ್ಷೇತ್ರಗಳಲ್ಲಿ 2,905 ಮತಗಟ್ಟೆ ವ್ಯವಸ್ಥೆ

- 13,38,637 ಮಹಿಳೆಯರು ಸೇರಿ 26,55,988 ಮತದಾರರ ಹಕ್ಕು ಚಲಾವಣೆಗೆ ಅವಕಾಶ
- ಮತಯಂತ್ರಗಳು, ಮತದಾನ ಪರಿಕರಗಳೊಂದಿಗೆ ಮತಗಟ್ಟೆಗಳಲ್ಲಿ ಚುನಾವಣಾ ಸಿಬ್ಬಂದಿ ಸಿದ್ಧತೆ ಪೂರ್ಣ





ಮೈಸೂರು, ಮೇ 9(ಆರ್‌ಕೆ)–ಕರ್ನಾಟಕ ವಿಧಾನಸಭಾ ಸಾರ್ವತ್ರಿಕ ಚುನಾವಣಾ ಮತದಾನ ಕಾರ್ಯ ನಾಳೆ (ಮೇ 10) ಬೆಳಗ್ಗೆ 7ರಿಂದ ಸಂಜೆ 6 ಗಂಟೆಯವರೆಗೆ ನಡೆಯಲಿದೆ. ಇದಕ್ಕಾಗಿ ಮೈಸೂರು, ಮಂಡ್ಯ, ಚಾ.ನಗರ, ಕೊಡಗು, ಹಾಸನದಲ್ಲಿ ಸರ್ವ ಸಿದ್ಧತೆ ಮಾಡಿಕೊಳ್ಳಲಾಗಿದೆ.

ಮೈಸೂರು ಜಿಲ್ಲೆಯ 11 ವಿಧಾನಸಭಾ ಕ್ಷೇತ್ರಗಳಲ್ಲಿ 2,905 ಮತಗಟ್ಟೆಗಳನ್ನು ಸ್ಥಾಪಿಸಿದ್ದು, 13,38,637 ಮಹಿಳೆಯರು, 230 ಇತರರು ಸೇರಿ ಒಟ್ಟು 26,55,988 ಮತದಾರರು ಬುಧವಾರ ತಮ್ಮ ಸಂವಿಧಾನಿಕ ಹಕ್ಕು ಚಲಾಯಿಸಲಿದ್ದಾರೆ. ಮತಗಟ್ಟೆಗಳಲ್ಲಿ ಕುಡಿಯುವ ನೀರು, ವಿದ್ಯುತ್ ಸಂಪರ್ಕ, ಶೌಚಾಲಯ, ರ್‍ಯಾಂಪ್ ಸೇರಿದಂತೆ ಮತದಾರರಿಗೆ ಎಲ್ಲಾ ಮೂಲಭೂತ ಸೌಕರ್ಯ ಕಲ್ಪಿಸಲಾಗಿದೆ. ಮೈಸೂರಿನ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಮಂಗಳವಾರ ಜಿಲ್ಲಾ ಚುನಾವಣಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಸುದ್ದಿಗೋಷ್ಠಿ ನಡೆಸಿ ಜಿಲ್ಲೆಯಾದ್ಯಂತ ಮತದಾನಕ್ಕೆ ಮಾಡಿರುವ ಸಿದ್ಧತೆ ಕುರಿತಂತೆ ಮಾಹಿತಿ ನೀಡಿದರು. ಪಿರಿಯಾಪಟ್ಟಣದಲ್ಲಿ 235, ಕೆ.ಆರ್.ನಗರದಲ್ಲಿ 250, ● 10ನೇ ಪುಟಕ್ಕೆ

ಮೊಬೈಲ್, ಕ್ಯಾಮರಾ ನಿಷೇಧ

ಮತದಾನದ ದಿನ ಮತಗಟ್ಟೆಗಳಿಗೆ ಮೊಬೈಲ್ ಫೋನ್, ಕ್ಯಾಮರಾ ತೆಗೆದುಕೊಂಡು ಹೋಗುವುದನ್ನು ನಿಷೇಧಿಸಲಾಗಿದ್ದು, ಮತದಾನ ಮಾಡುವವರ ಎಡಗೈ ತೋರು ಬೆರಳಿಗೆ ಅಳಿಸಲಾಗದ ಶಾಯಿಯನ್ನು ಹಾಕಲಾಗುವುದು. ಬುಧವಾರ ಬೆಳಗ್ಗೆ ಎಲ್ಲಾ ಮತಗಟ್ಟೆ ಅಧಿಕಾರಿಗಳು ಅಣಕು ಮತದಾನ ಮಾಡಿ ವಿದ್ಯುನ್ಮಾನ ಮತಯಂತ್ರಗಳು ಸರಿಯಾಗಿ ಕಾರ್ಯನಿರ್ವಹಿಸುತ್ತಿವೆಯೇ ಎಂಬುದನ್ನು ದೃಢಪಡಿಸಿಕೊಂಡು ಬೆಳಗ್ಗೆ 7 ಗಂಟೆಗೆ ಸರಿಯಾಗಿ ಮತದಾನದ ಪ್ರಕ್ರಿಯೆಯನ್ನು ಆರಂಭಿಸಬೇಕೆಂದು ನಿರ್ದೇಶನ ನೀಡಲಾಗಿದೆ.

ಇಂದು ಸಾರ್ವತ್ರಿಕ ರಜೆ

ರಾಜ್ಯ ವಿಧಾನಸಭೆ ಚುನಾವಣೆ ಹಿನ್ನೆಲೆಯಲ್ಲಿ ಇಂದು ಸಾರ್ವತ್ರಿಕ ರಜೆ ಘೋಷಿಸಲಾಗಿದೆ. ಈ ಸಂಬಂಧ ಅಧಿಸೂಚನೆಯನ್ನು ಈಗಾಗಲೇ ಹೊರಡಿಸಲಾಗಿದೆ. ಮತ ಚಲಾಯಿಸಲು ಅನುಕೂಲವಾಗುವಂತೆ ಆಯಾ ಮತ ಕ್ಷೇತ್ರಗಳ ಎಲ್ಲಾ ಕೇಂದ್ರ ಹಾಗೂ ರಾಜ್ಯ ಸರ್ಕಾರಿ ಕಚೇರಿಗಳಿಗೆ, ಶಾಲಾ ಕಾಲೇಜುಗಳಿಗೆ, ವಿವಿಧ ಸಂಘ ಸಂಸ್ಥೆಗಳಿಗೆ ಮತ್ತು ಖಾಸಗಿ ಸಂಸ್ಥೆಗಳಿಗೆ, ಅನುದಾನಿತ ಶಿಕ್ಷಣ ಸಂಸ್ಥೆಗಳಿಗೆ ಸಾರ್ವತ್ರಿಕ ರಜೆಯನ್ನು ಘೋಷಿಸಿದೆ. ಈ ರಜೆಯು ತುರ್ತು ಸೇವೆಗಳಿಗೆ ಅನ್ವಯಿಸುವುದಿಲ್ಲ.

ಇಂದು ಮಧ್ಯರಾತ್ರಿವರೆಗೆ ಮದ್ಯ ಮಾರಾಟ ನಿಷಿದ್ಧ

ಮತ ಎಣಿಕೆ ದಿನವೂ ನಿರ್ಬಂಧ

ಮೈಸೂರು, ಮೇ 9–ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ಮತದಾನ ಮುಕ್ತಾಯವಾಗುವ 48 ಗಂಟೆಗಳ ಮುಂಚಿನಿಂದ, ಅಂದರೆ 08.05.2023ರ ಸಂಜೆ 6.00 ಗಂಟೆಯಿಂದ 10.05.2023ರ ಮಧ್ಯರಾತ್ರಿಯವರೆಗೆ (ಮತದಾನ ಮುಕ್ತಾಯದ ದಿನದವರೆಗೆ) ಹಾಗೂ ಮತ ಎಣಿಕೆಯ ದಿನದಂದು ಒಣ ದಿವಸಗಳೆಂದು ಘೋಷಣೆ ಮಾಡಲಾಗಿದೆ. ಸದರಿ ಒಣ ದಿವಸಗಳಂದು ಎಲ್ಲಾ ಹೋಟೆಲ್, ರೆಸ್ಟೋರೆಂಟ್ ಮತ್ತು ಪರವಾನಗಿ ಹೊಂದಿರುವ ಅಂಗಡಿಗಳಲ್ಲಿ ಯಾವುದೇ ರೀತಿಯ ಮದ್ಯ ಮಾರಾಟವನ್ನು ನಿಷೇಧಿಸಲಾಗಿದೆ. ಪರವಾನಗಿ ಪಡೆಯದ ಆವರಣಗಳಲ್ಲಿ ಮದ್ಯ ಶೇಖರಣೆ ಮಾಡುವುದು ನಿಷೇಧವಿರುತ್ತದೆ. ಮೇ 10 ರಂದು ಮೈಸೂರು ಜಿಲ್ಲಾ ವ್ಯಾಪ್ತಿಯಲ್ಲಿ ನಡೆಯುವ ಎಲ್ಲಾ ಸಂತೆ, ಜಾತ್ರೆ ಮತ್ತು ಉತ್ಸವಗಳನ್ನು ಮುಂದೂಡಿ ಜಿಲ್ಲಾಧಿಕಾರಿಗಳು ಆದೇಶ ಹೊರಡಿಸಿದ್ದಾರೆ.

ಮತದಾನಕ್ಕೆ ಈ ದಾಖಲೆಗಳ ಪೈಕಿ ಒಂದನ್ನು ತನ್ನಿ

ಬುಧವಾರ ಮತದಾನ ಮಾಡಲು ಮತದಾರರ ಗುರುತಿನ ಚೀಟಿಯನ್ನು ಕೊಂಡೊಯ್ಯಬೇಕು. ಒಂದು ವೇಳೆ ಎಪಿಕ್ ಕಾರ್ಡ್ ಇಲ್ಲದಿದ್ದಲ್ಲಿ ಪರ್ಯಾಯವಾಗಿ ಭಾವಚಿತ್ರವಿರುವ ಆಧಾರ್ ಕಾರ್ಡ್, ನರೇಗಾ ಉದ್ಯೋಗ ಕಾರ್ಡ್, ಬ್ಯಾಂಕ್, ಅಂಚೆ ಕಚೇರಿ ಪಾಸ್ ಬುಕ್, ಆರೋಗ್ಯ ವಿಮಾ ಸ್ಮಾರ್ಟ್ ಕಾರ್ಡ್, ಚಾಲನಾ ಪರವಾನಗಿ (DL), ಪಾನ್ ಕಾರ್ಡ್, ರಾಷ್ಟ್ರೀಯ ಜನಸಂಖ್ಯೆ ನೋಂದಣಿ, ನೋಂದಣಿ ಯೋಜನೆಯ ಸ್ಮಾರ್ಟ್ ಕಾರ್ಡ್, ಭಾರತೀಯ ಪಾಸ್‌ಪೋರ್ಟ್, ಪಿಂಚಣಿ ಆದೇಶ ಪ್ರತಿ, ಸರ್ಕಾರಿ ಸಂಸ್ಥೆಗಳು ನೀಡಿರುವ ಸೇವಾ ಗುರುತಿನ ಚೀಟಿ ಹಾಗೂ ಸಂಸದರು, ಶಾಸಕರು, ವಿಧಾನಪರಿಷತ್ ಸದಸ್ಯರಿಗೆ ನೀಡಿರುವ ಗುರುತಿನ ಚೀಟಿ ಇವುಗಳ ಪೈಕಿ ಯಾವುದಾದರೂ ಒಂದು ದಾಖಲೆಯನ್ನು ತೋರಿಸಿ ಮತದಾನ ಮಾಡಬಹುದಾಗಿದೆ.

ಚುನಾವಣೆ ಕಣದಲ್ಲಿ ಕುರುಡು ಕಾಂಚಾಣ; 375 ಕೋಟಿ ರೂ. ನಗದು, ಭಾರಿ ವಸ್ತು ವಶ

ಬೆಂಗಳೂರು: ಕರ್ನಾಟಕ ವಿಧಾನಸಭೆ ಚುನಾವಣೆಯ ಕಣದಲ್ಲಿ ಈ ಬಾರಿ ಕುರುಡು ಕಾಂಚಾಣ ಕುಣಿತ ಹಿಂದೆಂದಿಗಿಂತಲೂ ಹೆಚ್ಚಾಗಿದೆ. ಇದುವರೆಗೆ ಒಟ್ಟು 375 ಕೋಟಿ ರೂಪಾಯಿ ನಗದು ಹಾಗೂ ನಾನಾ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಕೇಂದ್ರ ಚುನಾವಣಾ ಆಯೋಗ ● 10ನೇ ಪುಟಕ್ಕೆ

ಮೈಸೂರು ಸೇರಿ ನೆರೆ ಜಿಲ್ಲೆಗಳಲ್ಲಿ ಇಂದಿನಿಂದ ಮೂರ್‍ನಾಲ್ಕು ದಿನ

ಸಾಧಾರಣ ಮಳೆ ಸಾಧ್ಯತೆ; ಮತದಾನಕ್ಕೆ ಅಡ್ಡಿ ಸಂಭವ



ಮೈಸೂರು,ಮೇ 9(ಪಿಎಂ)– ಮೈಸೂರು ಹಾಗೂ ನೆರೆ ಜಿಲ್ಲೆಗಳಲ್ಲಿ ನಾಳೆಯಿಂದ (ಮೇ 10) ಮೂರ್‍ನಾಲ್ಕು ದಿನ ಸಾಧಾರಣ ಮಳೆಯಾಗುವ ಸಂಭವವಿದ್ದು, ಈ ಹಿನ್ನೆಲೆಯಲ್ಲಿ ನಾಳೆ ನಡೆಯುವ ಮತದಾನ ಪ್ರಕ್ರಿಯೆಗೆ ಒಂದಿಷ್ಟು ಅಡೆತಡೆ ಉಂಟಾಗುವ ಸಾಧ್ಯತೆ ಇದೆ.

ರಾಜ್ಯ ವಿಧಾನಸಭಾ ಸಾರ್ವತ್ರಿಕ ಚುನಾವಣೆ ಹಿನ್ನೆಲೆಯಲ್ಲಿ ನಾಳೆ ಮತದಾನ ಪ್ರಕ್ರಿಯೆಗೆ ಸಕಲ ಸಿದ್ಧತೆ ಮಾಡಿಕೊಂಡಿದ್ದು, ಈ ನಡುವೆ ಮಳೆಯಾದಲ್ಲಿ ಒಂದಿಷ್ಟು ಕಿರಿಕಿರಿ ನಡುವೆ ಮತದಾನ ಪ್ರಕ್ರಿಯೆ ನಡೆಸುವುದು ಅನಿವಾರ್ಯವಾಗಲಿದೆ. ಮೈಸೂರು ಮತ್ತು ನೆರೆ ಜಿಲ್ಲೆಗಳಾದ ಕೊಡಗು, ಮಂಡ್ಯ, ಚಾಮರಾಜನಗರ ಜಿಲ್ಲೆಗಳಲ್ಲಿ ಮೋಡ ಕವಿದ ವಾತಾವರಣದೊಂದಿಗೆ ತುಂತುರು ಮಳೆ ಸಾಧ್ಯತೆ ಇದೆಯೆಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಮುನ್ಸೂಚನೆಯಂತೆ ಮಳೆಯಾದರೂ ಸಹ ಮತದಾನ ಪ್ರಕ್ರಿಯೆ ನಡೆಯಲಿದ್ದು, ಒಂದು ವೇಳೆ ಇದೇ ನೆಪದಲ್ಲಿ ಮತದಾನದಿಂದ ದೂರ ಉಳಿಯುವವರ ಪ್ರಮಾಣ ಹೆಚ್ಚಾದಲ್ಲಿ ಪ್ರಜಾಪ್ರಭುತ್ವದ ಹಬ್ಬ ಕಳೆಗುಂದುವುದು ಮಾತ್ರವಲ್ಲದೆ, ಮುಂದಿನ ದಿನಗಳಲ್ಲಿ ರಾಜ್ಯದ ಆಡಳಿತದ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗಲಿದೆ. ಹಾಗಾಗಿ ಮಳೆ ಬಂದರೂ ಮುನ್ನೆಚ್ಚರಿಕೆಯೊಂದಿಗೆ ಪ್ರತಿಯೊಬ್ಬರು ಮತದಾನ ಮಾಡಬೇಕೆಂಬುದು ಪ್ರಜ್ಞಾವಂತರ ಕಳಕಳಿಯಾಗಿದೆ. ಭಾರತೀಯ ಹವಾಮಾನ ಇಲಾಖೆಯ ಮುನ್ಸೂಚನೆಯಂತೆ ಮೈಸೂರು ಜಿಲ್ಲೆಯಲ್ಲಿ ಮೇ 10ರಿಂದ 15ರವರೆಗೆ ● 10ನೇ ಪುಟಕ್ಕೆ

ಮೈಸೂರು ಮಿತ್ರ ಬುಧವಾರ 10 ಮೇ 2023

ಮತದಾನಕ್ಕೆ ಸಕ್ಕರೆ ನಾಡು ಸಜ್ಜು

● ಜಿಲ್ಲೆಯಲ್ಲಿ 1798 ಮತಗಟ್ಟೆ ಸ್ಥಾಪನೆ ● ಒಟ್ಟು 15,33,831 ಮಂದಿ ಮತದಾನ





ಮಂಡ್ಯ, ಮೇ 9– ಪ್ರಜಾಪ್ರಭುತ್ವದ ದೊಡ್ಡ ಹಬ್ಬ ರಾಜ್ಯ ವಿಧಾನಸಭಾ ಚುನಾವಣಾ ಮತದಾನಕ್ಕೆ ಕ್ಷಣಗಣನೆ ಆರಂಭವಾಗಿದ್ದು, ನಾಳೆ (ಬುಧವಾರ) ಬೆಳಗ್ಗೆ 7 ರಿಂದ ಸಂಜೆ 6 ರವರೆಗೆ ಮತದಾನ ನಡೆಯಲಿದೆ.

ಜಿಲ್ಲೆಯ 7 ವಿಧಾನಸಭಾ ಕ್ಷೇತ್ರಗಳಲ್ಲಿ 319 ಸೂಕ್ಷ್ಮ ಮತಗಟ್ಟೆ, 1479 ಸಾಮಾನ್ಯ ಮತಗಟ್ಟೆ ಸೇರಿದಂತೆ ಒಟ್ಟು 1798 ಮತಗಟ್ಟೆಗಳನ್ನು ಸ್ಥಾಪಿಸಲಾಗಿದ್ದು, 759323 ಪುರುಷರು, 774363 ಮಹಿಳೆಯರು, 145 ಮಂದಿ ಇತರರು ಸೇರಿದಂತೆ 15,33,831 ಮಂದಿ ಮತ ಚಲಾಯಿಸಲಿದ್ದಾರೆ.

ಜಿಲ್ಲೆಯಲ್ಲಿ ಅಂಚೆ ಮತದಾನಕ್ಕೆ 12,674 ಮಂದಿಗೆ ಒಪ್ಪಿಗೆ ನೀಡಿದ್ದು, ಈ ಪೈಕಿ 10,075 ಜನರು ಅಂಚೆ ಮತದಾನ ಮಾಡಿದ್ದು, 2502 ಮಂದಿ 80 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರು, 759 ವಿಕಲಚೇತನರು, 188 ಅಗತ್ಯ ಸೇವಾ ವಲಯ, 6626 ಪೋಲಿಂಗ್ ಅಧಿಕಾರಿಗಳು ಸೇರಿದಂತೆ ಒಟ್ಟು 10,075 ಅಂಚೆ ಮತದಾನ ಮಾಡಿದ್ದಾರೆ.

ಈ ಸಂಬಂಧ ಮಾಹಿತಿ ನೀಡಿದ ಜಿಲ್ಲಾಧಿಕಾರಿ ಡಾ.ಗೋಪಾಲಕೃಷ್ಣ, ಮಂಗಳವಾರ ಜಿಲ್ಲೆಯ ಎಲ್ಲಾ ವಿಧಾನಸಭಾ ಕ್ಷೇತ್ರಗಳಲ್ಲೂ ಮಸ್ಟರಿಂಗ್ ಕಾರ್ಯ ನಡೆಸಿದ್ದು, ಮಳವಳ್ಳಿಯ ಶಾಂತಿ ಪದವಿ ಪೂರ್ವ ಕಾಲೇಜು, ಮದ್ದೂರಿನ ಹೆಚ್.ಕೆ.ವೀರಣ್ಣಗೌಡ ಪದವಿ ಪೂರ್ವ ಕಾಲೇಜು, ಮೇಲುಕೋಟೆ ಕ್ಷೇತ್ರದ ಪಿಎಸ್ಎಸ್‌ಕೆ ಪ್ರೌಢಶಾಲೆ, ಮಂಡ್ಯದ ಮಂಡ್ಯ ವಿಶ್ವವಿದ್ಯಾಲಯ, ಶ್ರೀರಂಗಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜು, ನಾಗಮಂಗಲ ಸರ್ಕಾರಿ ಪದವಿ ಪೂರ್ವ ಕಾಲೇಜು, ಕೆ.ಆರ್.ಪೇಟೆಯ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಮಸ್ಟರಿಂಗ್ ಕಾರ್ಯ ನಡೆದಿದೆ ಎಂದರು.

ಮೇ 10ರಂದು ಮತದಾನ ಮುಕ್ತಾಯಗೊಂಡ ನಂತರ ಆಯಾ ಕ್ಷೇತ್ರಗಳಲ್ಲಿ ಚುನಾವಣಾಧಿಕಾರಿಗಳು ಹಾಗೂ ಸಹಾಯಕ ಚುನಾವಣಾಧಿಕಾರಿಗಳು ಮೊಹರಾದ ವಿದ್ಯುನ್ಮಾನ ಮತಯಂತ್ರಗಳನ್ನು ಪ್ರಿಸೈಡಿಂಗ್ ಅಧಿಕಾರಿಗಳಿಂದ ಸಂಗ್ರಹಿಸಿ ನಂತರ ಜಿಪಿಎಸ್ ಅಳವಡಿಸಿರುವ ವಾಹನ ಹಾಗೂ ಸೂಕ್ತ ಪೊಲೀಸ್ ಭದ್ರತೆಯೊಂದಿಗೆ ಜಿಲ್ಲಾ ಭದ್ರತಾ ಕೊಠಡಿಯಾದ ಮಂಡ್ಯ ವಿಶ್ವವಿದ್ಯಾಲಯಕ್ಕೆ ಸಾಗಿಸಲು ಸೂಕ್ತ ವ್ಯವಸ್ಥೆ ಮಾಡಿಕೊಳ್ಳಲಾಗಿದೆ ಎಂದರು.

ಜಿಲ್ಲಾ ಭದ್ರತಾ ಕೊಠಡಿ ಕೇಂದ್ರದಲ್ಲಿ ವಿಧಾನಸಭಾ ಕ್ಷೇತ್ರವಾರು ತಲಾ 2 ಭದ್ರತಾ ಕೊಠಡಿ ಗುರುತಿಸಲಾಗಿದ್ದು, ಮತದಾನದಲ್ಲಿ ಬಳಸಿದ ಇವಿಎಂ ಯಂತ್ರಗಳನ್ನು ಸಂಗ್ರಹಿಸಿ ಮೊಹರು ಮಾಡಿ ಆರಕ್ಷಕರ ಸುಪರ್ದಿಗೆ ನೀಡಲಾಗುವುದು. ಮುಕ್ತ ಮತ್ತು ನ್ಯಾಯಸಮ್ಮತ ಮತದಾನಕ್ಕೆ ಅವಕಾಶ ಕಲ್ಪಿಸುವ ಸಲುವಾಗಿ ಜಿಲ್ಲಾದ್ಯಂತ ಮೇ 8ರ ಸಂಜೆ 5 ರಿಂದ ಮೇ 11ರ ಬೆಳಗ್ಗೆ 10ಗಂಟೆವರೆಗೆ ಹಾಗೂ ಮೇ 13ರ ಮತ ಎಣಿಕೆ ದಿನದಂದು ಬೆಳಗ್ಗೆ 6ರಿಂದ ಮೇ 14 ಬೆಳಗ್ಗೆ 10 ಗಂಟೆವರೆಗೆ ಮಂಡ್ಯ ಜಿಲ್ಲಾದ್ಯಂತ ಮದ್ಯ ವ್ಯಾಪಾರ, ಸಾಗಾಣಿಕೆ ನಿಷೇಧ ಮಾಡಲಾಗಿದೆ ಎಂದು ತಿಳಿಸಿದರು.

ಮತ ಎಣಿಕೆ ಕೇಂದ್ರವಾದ ಮಂಡ್ಯ ವಿಶ್ವವಿದ್ಯಾಲಯ, ಮಂಡ್ಯ ಇಲ್ಲಿ ವಿಧಾನಸಭಾ ಕ್ಷೇತ್ರವಾರು ತಲಾ 2 ಕೊಠಡಿಗಳನ್ನು ಮತ ಎಣಿಕೆಗಾಗಿ ಗುರುತಿಸಲಾಗಿದ್ದು, ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ಕೊಠಡಿಗೆ 7ರಂತೆ 14 ಟೇಬಲ್‌ಗಳಲ್ಲಿ ಮತ ಎಣಿಕೆ ನಡೆಯಲಿದೆ. ಈ ಕಾರ್ಯಕ್ಕಾಗಿ 120 ಅಧಿಕಾರಿ/ಸಿಬ್ಬಂದಿಗಳನ್ನು (ಮೈಕ್ರೋ ಅಬ್ಸರ್ವರ್‌ಗಳೊಂದಿಗೆ) ಎಣಿಕೆ ಸಿಬ್ಬಂದಿಗಳನ್ನು ನೇಮಕ ಮಾಡಿ ಮೇ 6 ರಂದು ತರಬೇತಿ ಸಹ ನೀಡಲಾಗಿದೆ ಎಂದರು.

ಮತ ಎಣಿಕೆ ಕೇಂದ್ರದ ನೆಲ ಮಹಡಿ ಕೊಠಡಿ ಸಂಖ್ಯೆ 6ರಲ್ಲಿ ಮೇಲುಕೋಟೆ, ಮಂಡ್ಯ, ನಾಗಮಂಗಲ ಮತ್ತು ಕೆ.ಆರ್.ಪೇಟೆ ವಿಧಾನಸಭಾ ಕ್ಷೇತ್ರಗಳ ಅಂಚೆ ಮತ ಎಣಿಕೆ ಕಾರ್ಯ ನೆಡೆಯಲಿದೆ. ಎರಡನೇ ಮಹಡಿಯ ಕೊಠಡಿ ಸಂಖ್ಯೆ 30ರಲ್ಲಿ ಮಳವಳ್ಳಿ, ಮದ್ದೂರು ಮತ್ತು ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರಗಳ ಅಂಚೆ ಮತ ಎಣಿಕೆ ಕಾರ್ಯ ನಡೆಯಲಿದೆ.

ಭಾವಚಿತ್ರವಿರುವ ಮತದಾರರ ಗುರುತಿನ ಚೀಟಿ, ಆಧಾರ್ ಕಾರ್ಡ್, ಎಂಎನ್‌ಆರ್‌ಇಜಿಎ ಜಾಬ್ ಕಾರ್ಡ್, ಬ್ಯಾಂಕ್/ಅಂಚೆ ಕಚೇರಿ ನೀಡಿರುವ ಭಾವಚಿತ್ರವಿರುವ ಪಾಸ್‌ಬುಕ್, ಕಾರ್ಮಿಕ ಸಚಿವಾಲಯದಿಂದ ನೀಡಿರುವ ಆರೋಗ್ಯ ವಿಮೆ ಕಾರ್ಡ್, ಚಾಲನಾ ಪರವಾನಗಿ (ಡ್ರೈವಿಂಗ್ ಲೈಸೆನ್ಸ್), ಪ್ಯಾನ್ ಕಾರ್ಡ್, ಎನ್‌ಪಿಆರ್‌ನ ಅಡಿ ಆರ್‌ಜಿಐ ನೀಡಿರುವ ಸ್ಮಾರ್ಟ್ ಕಾರ್ಡ್, ಭಾರತೀಯ ಪಾಸ್‌ಪೋರ್ಟ್, ಭಾವಚಿತ್ರ ಇರುವ ಪಿಂಚಣಿ ದಾಖಲೆಗಳನ್ನು ತೋರಿಸಿ ಮತ ಚಲಾಯಿಸಬಹುದಾಗಿದೆ.

ಸಿಬ್ಬಂದಿಗೆ ಕಳಪೆ ಊಟ: ಆಕ್ರೋಶ

ಮಂಡ್ಯ: ಸೂಕ್ತ ಊಟದ ವ್ಯವಸ್ಥೆ ಮಾಡದಿರುವುದನ್ನು ಖಂಡಿಸಿ ಚುನಾವಣಾ ಕಾರ್ಯಕ್ಕೆ ನೇಮಕವಾಗಿರುವ ಸಿಬ್ಬಂದಿಗಳು ಕರ್ತವ್ಯಕ್ಕೆ ಹೋಗುವುದಿಲ್ಲ ಎಂದು ಪ್ರತಿಭಟನೆ ನಡೆಸಿದ ಘಟನೆ ಕೆ.ಆರ್.ಪೇಟೆ ಪಟ್ಟಣದ ಮಸ್ಟರಿಂಗ್ ಕೇಂದ್ರದ ಬಳಿ ನಡೆಯಿತು.

ಊಟದ ಕೊರತೆ ಜೊತೆಗೆ ಮಾಡಿರುವ ಊಟವೂ ಕಳಪೆಯಿಂದ ಕೂಡಿದೆ. ಇದರಿಂದ ನಮ್ಮ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರಲಿದೆ. ಆದ್ದರಿಂದ ಊಟ ಮಾಡಲ್ಲ. ಕರ್ತವ್ಯಕ್ಕೂ ಹೋಗಲ್ಲ. ತಹಶೀಲ್ದಾರ್ ಅವರೇ ಎಲ್ಲವನ್ನು ಮಾಡಿಕೊಳ್ಳಲಿ ಎಂದು ಸಿಬ್ಬಂದಿ ರೊಚ್ಚಿಗೆದ್ದರು. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ತಹಸೀಲ್ದಾರ್ ನಿಸರ್ಗ ಪ್ರಿಯ, ನಮ್ಮಿಂದ ತಪ್ಪಾಗಿದೆ ದಯವಿಟ್ಟು ಕ್ಷಮಿಸಿ. ಕರ್ತವ್ಯಕ್ಕೆ ಹೊರಡಿ ಎಂದು ಮನವಿ ಮಾಡಿದರು. ಮೂರು ಗಂಟೆಯಾದರೂ ಶೇ.50ರಷ್ಟು ಸಿಬ್ಬಂದಿಗಳಿಗೆ ಊಟದ ವ್ಯವಸ್ಥೆ ಇಲ್ಲ ಎಂದು ಸಿಬ್ಬಂದಿ ಆಕ್ರೋಶ ವ್ಯಕ್ತಪಡಿಸಿದ್ದು, ಜೊತೆಗೆ ತರಬೇತಿ ಸಮಯದಲ್ಲಿಯೂ ಸರಿಯಾಗಿ ಊಟ ಕೊಟ್ಟಿಲ್ಲ ಎಂದು ದೂರಿದರು.

ಮತಕೇಂದ್ರಗಳು, ಮತದಾರರ ವಿವರ


ಕ್ಷೇತ್ರ	ಬೂತ್‌ಗಳು	ಸೂಕ್ಷ್ಮ	ಸಾಮಾನ್ಯ	ಪುರುಷರು	ಮಹಿಳೆಯರು	ಇತರೆ	ಒಟ್ಟು ಮತದಾರರು
ಮಳವಳ್ಳಿ	268	56	212	1,24,284	1,24,187	23	2,48,494
ಮದ್ದೂರು	254	40	214	1,03,863	1,09,823	20	2,13,706
ಮೇಲುಕೋಟೆ	258	51	207	99,354	1,00,764	07	2,00,125
ಮಂಡ್ಯ	254	50	204	1,09,953	1,14,243	33	2,24,229
ಶ್ರೀರಂಗಪಟ್ಟಣ	249	25	224	1,04,656	1,08,492	39	2,13,187
ನಾಗಮಂಗಲ	257	52	205	1,07,115	1,07,075	12	2,14,202
ಕೆ.ಆರ್.ಪೇಟೆ	258	45	213	1,10,098	1,09,779	11	2,19,888
ಒಟ್ಟು	1798	319	1479	7,59,323	7,74,363	145	15,33,831

ಚಿನಕುರಳಿಯಲ್ಲಿ ಸಾಂಪ್ರದಾಯಿಕ ಮತಗಟ್ಟೆ ಸ್ಥಾಪನೆ



ಚಿನಕುರಳಿ: ಮೇಲುಕೋಟೆ ವಿಧಾನಸಭಾ ಕ್ಷೇತ್ರದ ಚಿನಕುರಳಿ ಮತಗಟ್ಟೆ ಸಂಖ್ಯೆ 135 ಅನ್ನು ಸಾಂಪ್ರದಾಯಿಕ ಮತಗಟ್ಟೆಯನ್ನಾಗಿ ರೂಪಿಸಲಾಗಿದೆ.

ಚಿನಕುರಳಿ ಗ್ರಾಮದ ಸರ್ಕಾರಿ ಪ್ರಾಥಮಿಕ ಪಾಠಶಾಲೆಯಲ್ಲಿ ಈ ಮತಗಟ್ಟೆ ನಿರ್ಮಿಸಲಾಗಿದ್ದು, ಮತಗಟ್ಟೆ ಪ್ರವೇಶ ದ್ವಾರವನ್ನು ಗ್ರಾಮೀಣ ಭಾಗದ ಸಾಂಪ್ರದಾಯಿಕ ತೆಂಗಿನ ಗರಿ ಚಪ್ಪರದಿಂದ ನಿರ್ಮಿಸಿ ಹೂವುಗಳಿಂದ ಅಲಂಕರಿಸಲಾಗಿದೆ. ಜತೆಗೆ ತೆಂಗಿನ ಗರಿಯ ಪೊಲೀಸ್ ಚೌಕಿಯನ್ನೂ ಸಹ ಸುಂದರವಾಗಿ ನಿರ್ಮಿಸಲಾಗಿದೆ. ಮತಗಟ್ಟೆ ಗೋಡೆ ಮೇಲೆ ಸಂಪೂರ್ಣ ವಿವರಗಳನ್ನು ಮತಗಟ್ಟೆ ಅಧಿಕಾರಿ ಹೆಸರು ಮತ್ತು ಮೊಬೈಲ್ ನಂಬರ್ ಸಮೇತ ಬರೆಯಲಾಗಿದೆ. ಒಟ್ಟಾರೆ ಈ ಮತಗಟ್ಟೆ ಮದುವೆ ಚಪ್ಪರದ ಮನೆಯಂತೆ ಕಂಗೊಳಿಸುತ್ತಿದೆ.



ಮಂಡ್ಯ ಜಿಲ್ಲೆಯಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಈವರೆಗೆ ಒಟ್ಟು 21 ಮಂದಿ ರೌಡಿಗಳನ್ನು ಗಡಿಪಾರು ಮಾಡಲಾಗಿದೆ. ಶಾಂತಿ, ಸುವ್ಯವಸ್ಥೆಗೆ ಭಂಗ ತರಬಾರದು. ಯಾವುದೇ ಸಮಸ್ಯೆಯಾಗಬಾರದೆಂಬ ಕಾರಣಕ್ಕೆ ಈ ನಿರ್ಧಾರ ಕೈಗೊಂಡಿದ್ದು, ನಾಗಮಂಗಲ ಸೇರಿದಂತೆ ಸೂಕ್ಷ್ಮ ಪ್ರದೇಶಗಳಲ್ಲಿ ಕಟ್ಟೆಚ್ಚರ ವಹಿಸಲಾಗಿದೆ. ಶಾಂತಿಯುತ ಮತದಾನಕ್ಕಾಗಿ 29 ಮಂದಿ ಸಿಪಿಐ, 58 ಮಂದಿ ಪಿಎಸ್ಐ, 137 ಮಂದಿ ಎಎಸ್ಐ, 418 ಮಂದಿ ಹೆಡ್ ಕಾನ್ಸ್‌ಟೇಬಲ್, 1043 ಮಂದಿ ಪಿಸಿಗಳು ಹಾಗೂ 890 ಮಂದಿ ಹೋಂ ಗಾರ್ಡ್‌ಗಳನ್ನು ಜಿಲ್ಲಾದ್ಯಂತ ನಿಯೋಜಿಸಿದ್ದು, 7 ಕೆಎಸ್‌ಆರ್‌ಪಿ ತುಕಡಿಗಳು ಸಹ ಕಾರ್ಯ ನಿರ್ವಹಿಸಲಿವೆ.

- ಎನ್.ಯತೀಶ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ.

ಇಂದು ವೇತನ ಸಹಿತ ರಜೆ

ಮತದಾನ ದಿನವಾದ ಬುಧವಾರ ಜಿಲ್ಲಾದ್ಯಂತ ಎಲ್ಲಾ ಕಾರ್ಖಾನೆಗಳು, ವಾಣಿಜ್ಯ ಸಂಸ್ಥೆಗಳು, ಹೋಟೆಲ್ ಉದ್ಯಮಗಳು ಹಾಗೂ ಇತರೆ ಸಂಸ್ಥೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ 1951ರ ಪ್ರಜಾ ಪ್ರತಿನಿಧಿ ಕಾಯ್ದೆ ಸೆಕ್ಷನ್ 135 (ಬಿ)ರಡಿ ಹಾಗೂ ಕೈಗಾರಿಕಾ ಸಂಸ್ಥೆಗಳ (ರಾಷ್ಟ್ರೀಯ ಮತ್ತು ಹಬ್ಬದ ರಜೆಗಳು) ಕಾಯ್ದೆ –1963 ಕಲಂ 3 (ಎ)ರನ್ವಯ ಅರ್ಹ ಮತದಾರರಿಗೆ ವೇತನ ಸಹಿತ ರಜೆ ಘೋಷಿಸಿ ಸಂವಿಧಾನಾತ್ಮಕ ಹಕ್ಕಾದ ಮತವನ್ನು ಚಲಾಯಿಸುವುದಕ್ಕಾಗಿ ಎಲ್ಲಾ ಮಾಲೀಕರು/ನಿಯೋಜಕರು ಅನುವು ಮಾಡಿಕೊಡಬೇಕು ಎಂದು ಆದೇಶ ಹೊರಡಿಸಿದೆ. ತಪ್ಪಿದ್ದಲ್ಲಿ ಸಂಬಂಧಪಟ್ಟ ಸಂಸ್ಥೆ/ನಿಯೋಜಕರ ವಿರುದ್ಧ ನಿಯಮಾನುಸಾರ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಜಿಲ್ಲಾ ಕಾರ್ಮಿಕ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪತ್ನಿ ಹತ್ಯೆಗೈದು ಪತಿ ಪರಾರಿ



ಹಲಗೂರು, ಮೇ 9– ಪತಿ ತನ್ನ ಪತ್ನಿಯನ್ನು ಹತ್ಯೆಗೈದು ಪರಾರಿಯಾಗಿರುವ ಘಟನೆ ಹಲಗೂರು ಸಮೀಪದ ಧನಗೂರು ಗ್ರಾಮದಲ್ಲಿ ಜರುಗಿದೆ. ಧನಗೂರಿನ ನಿವಾಸಿ ಅಜ್ಮಲ್ ಪಾಷಾ ಎಂಬಾತ ತನ್ನ ಪತ್ನಿ ಸಲ್ಮಾಬಾನು (38) ವನ್ನು ಕೊಲೆ ಮಾಡಿ ಪರಾರಿಯಾಗಿದ್ದಾನೆ. ಕೌಟುಂಬಿಕ ವಿಚಾರವಾಗಿ ನಡೆದ ಜಗಳದಲ್ಲಿ ಆರೋಪಿ ಅಜ್ಮಲ್ ಪಾಷಾ ಮಂಗಳವಾರ ಮುಂಜಾನೆ ತನ್ನ ಪತ್ನಿಯನ್ನು ಉಸಿರುಗಟ್ಟಿಸಿ ಕೊಲೆ ಮಾಡಿ ನಂತರ ತಾನೇ ಈ ವಿಚಾರವನ್ನು ಆಕೆಯ ಪೋಷಕರಿಗೆ ಮೊಬೈಲ್ ಮೂಲಕ ತಿಳಿಸಿ ಪರಾರಿಯಾಗಿದ್ದಾನೆ ಎಂದು ಸ್ಥಳೀಯರು ತಿಳಿಸಿದ್ದು, ಮೃತಳಿಗೆ ನಾಲ್ವರು ಮಕ್ಕಳಿದ್ದಾರೆ. ಸಿಪಿಐ ಶ್ರೀಧರ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದು, ಹಲಗೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪಾಂಡವಪುರ ತಾಲೂಕಿನ ಚಿನಕುರಳಿ ಹೋಬಳಿ ಇಳ್ಳೇನಹಳ್ಳಿ, ದೊಡ್ಡಬೋಗನಹಳ್ಳಿ, ಚಿಕ್ಕಬೋಗನಹಳ್ಳಿ, ಬ್ಯಾಟರಾಯನಕೊಪ್ಪಲು, ಕಾಳೇಗೌಡನಕೊಪ್ಪಲು, ಮರಸನಹಳ್ಳಿ ವಿವಿಧೆಡೆ ಜೆಡಿಎಸ್ ಅಭ್ಯರ್ಥಿ, ಶಾಸಕ ಸಿ.ಎಸ್.ಪುಟ್ಟರಾಜು ಪ್ರಚಾರ ನಡೆಸಿದರು.



ವ್ಯಕ್ತಿ ನಾಪತ್ತೆ



ಭಾರತೀನಗರ, ಮೇ 9– ಇಲ್ಲಿಗೆ ಸಮೀಪದ ಅಣ್ಣೂರು ಗ್ರಾಮದ ನಿವಾಸಿ ಚನ್ನೇಗೌಡ(71) ನಾಪತ್ತೆಯಾಗಿರುವ ಸಂಬಂಧ ಕೆ.ಎಂ.ದೊಡ್ಡಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಈತ ಏ.27 ರಂದು ಬೆಳಗ್ಗೆ ಗದ್ದೆ ಕಡೆಗೆ ಹೋಗಿ ಬರುವುದಾಗಿ ತಿಳಿಸಿ ಹೋದವರು ಇದುವರೆಗೂ ಮನೆಗೆ ಹಿಂತಿರುಗಿ ಬಂದಿಲ್ಲ ಎಂದು ಪುತ್ರ ಜೆ.ಸಿ.ಮಧುಸೂದನ್ ದೂರು ನೀಡಿದ್ದಾರೆ. ಇವರ ಬಗ್ಗೆ ಮಾಹಿತಿ ಸಿಕ್ಕಲ್ಲಿ ಹತ್ತಿರದ ಠಾಣೆಗೆ ಮಾಹಿತಿ ನೀಡುವಂತೆ ಪ್ರಕಟಣೆ ತಿಳಿಸಿದೆ.

ಮೈಸೂರು ಜಿಲ್ಲೆಯ 143 ಅಭ್ಯರ್ಥಿಗಳ ರಾಜಕೀಯ ಭವಿಷ್ಯ ಇಂದು ನಿರ್ಧಾರ

ಮೈಸೂರು, ಮೇ 9(ಎಸ್‌ಬಿಡಿ)– ಮೈಸೂರು ಜಿಲ್ಲೆಯ 11 ವಿಧಾನಸಭಾ ಕ್ಷೇತ್ರಗಳ ಒಟ್ಟು 143 ಅಭ್ಯರ್ಥಿಗಳ ಭವಿಷ್ಯ ಬುಧವಾರ (ಮೇ 10) ಮತಯಂತ್ರಗಳನ್ನು ಸೇರಲಿದೆ.

ವರುಣ ಕ್ಷೇತ್ರ: ಕಾಂಗ್ರೆಸ್‌ನ ಸಿದ್ದರಾಮಯ್ಯ, ಬಿಜೆಪಿಯ ವಿ.ಸೋಮಣ್ಣ, ಜೆಡಿಎಸ್‌ನ ಡಾ.ಎನ್.ಎಲ್.ಭಾರತಿ ಶಂಕರ್, ಬಿಎಸ್‌ಪಿಯ ಎಂ.ಕೃಷ್ಣಮೂರ್ತಿ, ಆಮ್ ಆದ್ಮಿ ಪಕ್ಷದ ರಾಜೇಶ್ ಸೇರಿದಂತೆ ಒಟ್ಟು 15 ಅಭ್ಯರ್ಥಿಗಳು.

ಕೆ.ಆರ್.ನಗರ: ಜೆಡಿಎಸ್ ಸಾ.ರಾ. ಮಹೇಶ್, ಕಾಂಗ್ರೆಸ್‌ನ ಡಿ.ರವಿಶಂಕರ್, ಬಿಜೆಪಿಯ ಹೊಸಹಳ್ಳಿ ವೆಂಕಟೇಶ್, ಬಿಎಸ್‌ಪಿಯ ಭರತ್‌ಕುಮಾರ್, ಆಮ್ ಆದ್ಮಿ ಪಾರ್ಟಿಯ ಮುರುಗೇಶ್ ಸೇರಿ 8 ಮಂದಿ.

ನರಸಿಂಹರಾಜ: ಕಾಂಗ್ರೆಸ್‌ನ ತನ್ವೀರ್ ಸೇಠ್, ಬಿಜೆಪಿಯ ಎಸ್.ಸತೀಶ್ ಸಂದೇಶ್ ಸ್ವಾಮಿ, ಜೆಡಿಎಸ್‌ನ ಅಬ್ದುಲ್ ಖಾದರ್, ಆಮ್ ಆದ್ಮಿ ಪಾರ್ಟಿಯ ಧರ್ಮಶ್ರೀ, ಎಸ್‌ಡಿಪಿಐನ ಕೆ.ಹೆಚ್.ಅಬ್ದುಲ್ ಮಜೀದ್ ಸೇರಿ ಒಟ್ಟು 17 ಮಂದಿ.

ತಿ.ನರಸೀಪುರ ಕ್ಷೇತ್ರ: ಜೆಡಿಎಸ್ ಎಂ.ಅಶ್ವಿನ್ ಕುಮಾರ್, ಕಾಂಗ್ರೆಸ್‌ನ ಡಾ. ಹೆಚ್.ಸಿ.ಮಹದೇವಪ್ಪ, ಬಿಜೆಪಿ ಡಾ.ಎಂ. ರೇವಣ್ಣ, ಬಿಎಸ್‌ಪಿ ಬಿ.ಆರ್.ಪುಟ್ಟಸ್ವಾಮಿ, ಆಮ್ ಆದ್ಮಿ ಪಾರ್ಟಿಯ ಎಂ.ಸಿದ್ದರಾಜು ಸೇರಿ 12 ಮಂದಿ.



ಚಾಮರಾಜ ಕ್ಷೇತ್ರ: ಬಿಜೆಪಿಯ ಎಲ್.ನಾಗೇಂದ್ರ, ಕಾಂಗ್ರೆಸ್‌ನ ಕೆ.ಹರೀಶ್ ಗೌಡ, ಜೆಡಿಎಸ್‌ನ ಹೆಚ್.ಕೆ.ರಮೇಶ್ (ರವಿ), ಆಮ್ ಆದ್ಮಿ ಪಾರ್ಟಿಯ ಮಾಲವಿಕ ಗುಬ್ಬಿವಾಣಿ, ಬಿಎಸ್‌ಪಿ ಚಂದ್ರಶೇಖರ ಸೇರಿ 14 ಅಭ್ಯರ್ಥಿಗಳು ಕಣದಲ್ಲಿದ್ದಾರೆ.

ಚಾಮುಂಡೇಶ್ವರಿ ಕ್ಷೇತ್ರ: ಜೆಡಿಎಸ್‌ನ ಜಿ.ಟಿ.ದೇವೇಗೌಡ, ಕಾಂಗ್ರೆಸ್ ಎಸ್.ಸಿದ್ದೇಗೌಡ, ಬಿಜೆಪಿಯ ವಿ.ಕವೀಶ್ ಗೌಡ, ಬಿಎಸ್‌ಪಿಯ ಜೆ.ಜಯಶಂಕರ(ಶ್ಯಾಮ್), ಆಮ್ ಆದ್ಮಿ ಪಾರ್ಟಿಯ ಕಿರಣ್ ನಾಗೇಶ್ ಕಲ್ಯಾಣಿ ಸೇರಿ ಒಟ್ಟು 14 ಅಭ್ಯರ್ಥಿಗಳು.

ಹುಣಸೂರು ಕ್ಷೇತ್ರ: ಜೆಡಿಎಸ್‌ನ ಜಿ.ಡಿ. ಹರೀಶ್‌ಗೌಡ, ಕಾಂಗ್ರೆಸ್‌ನ ಹೆಚ್.ಪಿ. ಮಂಜುನಾಥ್, ಬಿಜೆಪಿಯ ಸೋಮಶೇಖರ್, ಬಿಎಸ್‌ಪಿ ಪ್ರಸನ್ನಕುಮಾರ್, ಆಮ್ ಆದ್ಮಿ ಪಾರ್ಟಿಯ ಜಿ.ರವಿಕುಮಾರ್ ಸೇರಿ ಒಟ್ಟು 12 ಮಂದಿ.

ಪಿರಿಯಾಪಟ್ಟಣ: ಜೆಡಿಎಸ್‌ನ ಕೆ. ಮಹದೇವ, ಕಾಂಗ್ರೆಸ್‌ನ ಕೆ.ವೆಂಕಟೇಶ್, ಬಿಜೆಪಿಯ ಸಿ.ಹೆಚ್.ವಿಜಯಶಂಕರ್, ಬಿಎಸ್‌ಪಿಯ ಸಿ.ಎಸ್.ಪ್ರದೀಪ, ಆಮ್ ಆದ್ಮಿ ಪಕ್ಷದ ರಾಜಶೇಖರ್ ದೊಡ್ಡಣ್ಣ ಸೇರಿ ಒಟ್ಟು 10 ಮಂದಿ.

ಕೃಷ್ಣರಾಜ ಕ್ಷೇತ್ರ: ಬಿಜೆಪಿಯ ಟಿ.ಎಸ್.ಶ್ರೀವತ್ಸ, ಕಾಂಗ್ರೆಸ್‌ನ ಎಂ.ಕೆ. ಸೋಮಶೇಖರ್, ಜೆಡಿಎಸ್‌ನ ಕೆ.ವಿ. ಮಲ್ಲೇಶ್, ಆಮ್ ಆದ್ಮಿ ಪಕ್ಷದ ವೈ. ಜಯಶ್ರೀ, ಬಿಎಸ್‌ಪಿಯ ಸಿ.ಶ್ರೀನಿವಾಸ ಪ್ರಸಾದ್ ಸೇರಿ ಒಟ್ಟು 17 ಮಂದಿ.

ಹೆಚ್.ಡಿ.ಕೋಟೆ: ಕಾಂಗ್ರೆಸ್‌ನ ಅನಿಲ್ ಚಿಕ್ಕಮಾದು, ಬಿಜೆಪಿ ಕೆ.ಎಂ. ಕೃಷ್ಣನಾಯಕ, ಜೆಡಿಎಸ್ ಜಯಪ್ರಕಾಶ ಚಿಕ್ಕಣ್ಣ, ಬಿಎಸ್‌ಪಿಯ ಹೋಟೆಲ್ ಶಿವಣ್ಣ, ಉತ್ತಮ ಪ್ರಜಾಕೀಯ ಪಾರ್ಟಿಯ ಹೆಚ್.ಎಂ.ನಾಗೇಶ ಸೇರಿ ಒಟ್ಟು 12 ಮಂದಿ.

ನಂಜನಗೂಡು ಕ್ಷೇತ್ರ: ಕಾಂಗ್ರೆಸ್ ದರ್ಶನ್ ಧ್ರುವನಾರಾಯಣ್, ಬಿಜೆಪಿ ಬಿ.ಹರ್ಷವರ್ಧನ್, ಬಿಎಸ್‌ಪಿಯ ಶ್ರೀಕಂಠ, ಆಮ್ ಆದ್ಮಿ ಪಾರ್ಟಿಯ ಹೆಚ್.ಹನುಮಯ್ಯ, ಕಲ್ಯಾಣ ರಾಜ್ಯ ಪ್ರಗತಿ ಪಕ್ಷದ ಆರ್.ಮಾದೇಶನ್ ಸೇರಿ ಒಟ್ಟು 12 ಅಭ್ಯರ್ಥಿಗಳು ಅದೃಷ್ಟ ಪರೀಕ್ಷೆಗಿಳಿದಿದ್ದಾರೆ. ಮತದಾರನ ಒಲವು ಯಾರ ಮೇಲಿದೆ, ಯಾರು ಗೆಲುವು ಸಾಧಿಸಿ, ವಿಧಾನಸಭೆಗೆ ಪ್ರವೇಶಿಸಲಿದ್ದಾರೆ ಎಂಬುದು ಮೇ 13ರಂದು ತಿಳಿಯಲಿದೆ.

ಮೈಸೂರು ನಗರ ಸೇರಿದಂತೆ ಜಿಲ್ಲೆಯಲ್ಲಿ ವ್ಯಾಪಕ ಭದ್ರತೆ

● 4,914 ಪೊಲೀಸರ ನಿಯೋಜನೆ ● 1597 ಮತಗಟ್ಟೆಗಳಲ್ಲಿ ವೆಬ್‌ಕಾಸ್ಟಿಂಗ್ ಮೂಲಕ ನಿಗಾ



ಮೈಸೂರು, ಮೇ 9(ಆರ್‌ಕೆ)–ನಾಳೆ (ಬುಧವಾರ) ನಡೆಯಲಿರುವ ವಿಧಾನಸಭಾ ಚುನಾವಣೆ ಮತದಾನಕ್ಕೆ ಮೈಸೂರು ನಗರ ಮತ್ತು ಜಿಲ್ಲೆಯಾದ್ಯಂತ ಭಾರಿ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಿ, ಕಟ್ಟೆಚ್ಚರ ವಹಿಸಲಾಗಿದೆ. ಮೈಸೂರಿನ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಇಂದು ಭದ್ರತಾ ವ್ಯವಸ್ಥೆ ಕುರಿತು ಮಾಹಿತಿ ನೀಡಿದ ನಗರ ಪೊಲೀಸ್ ಆಯುಕ್ತ ಬಿ. ರಮೇಶ್, ಸಿಟಿ ಸಿವಿಲ್, ಸಿಎಆರ್, ಕೆಎಸ್‌ಆರ್‌ಪಿ, ಅರೆ ಮಿಲಿಟರಿ ಪಡೆ ಸೇರಿದಂತೆ ಮೈಸೂರು ನಗರ ವ್ಯಾಪ್ತಿಯ ಮತಗಟ್ಟೆಗಳಿಗೆ 2,400 ಮಂದಿ ಪೊಲೀಸ್ ಸಿಬ್ಬಂದಿ ನಿಯೋಜಿಸಲಾಗಿದೆ ಎಂದರು. ಡಿಸಿಪಿ, ಎಸಿಪಿಗಳು, ಸೆಕ್ಟರ್ ಮೊಬೈಲ್ ಸ್ಕ್ವಾಡ್, ಫ್ಲೈಯಿಂಗ್ ಸ್ಕ್ವಾಡ್‌ಗಳೂ ನಗರ ವ್ಯಾಪ್ತಿಯಲ್ಲಿ ಗಸ್ತು ತಿರುಗಿ ಬಂದೋಬಸ್ತ್ ಮೇಲ್ವಿಚಾರಣೆ ನಡೆಸಲಿದ್ದು, ಯಾವುದೇ ಅಕ್ರಮ, ಗಲಾಟೆ, ಗೊಂದಲವಾಗದಂತೆ ಎಚ್ಚರ ವಹಿಸಲಾಗಿದೆ ಎಂದು ಅವರು ತಿಳಿಸಿದರು.

ಜಿಲ್ಲೆಯ ಗ್ರಾಮಾಂತರ ಭಾಗದ ಮತಗಟ್ಟೆಗಳಿಗೆ 2,514 ಸಿಬ್ಬಂದಿಯನ್ನು ನಿಯೋಜಿಸಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸೀಮಾ ಲಾಟ್ಕರ್ ತಿಳಿಸಿದರು. ಸಿವಿಲ್, ಕೆಎಸ್‌ಆರ್‌ಪಿ, ಅರೆ ಮಿಲಿಟರಿ ಪಡೆ, ಡಿಎಆರ್, ಡಿವೈಎಸ್ಪಿಗಳು, ಅಡಿಷನಲ್ ಎಸ್ಪಿಗಳೂ ಸಹ ಜಿಲ್ಲೆಯಲ್ಲಿ ಬಂದೋಬಸ್ತ್ ಕರ್ತವ್ಯದಲ್ಲಿ ನಿರತರಾಗಿರುವರು ಎಂದು ಅವರು ತಿಳಿಸಿದರು. ಇನ್ಸ್‌ಪೆಕ್ಟರ್ ನೇತೃತ್ವದ ಸೆಕ್ಟರ್ ಮೊಬೈಲ್ ಸ್ಕ್ವಾಡ್, ಫ್ಲೈಯಿಂಗ್ ಸ್ಕ್ವಾಡ್ ಸಿಬ್ಬಂದಿ ಸಹ ಕ್ಷೇತ್ರ ವ್ಯಾಪ್ತಿಗಳಲ್ಲಿ ನಿರಂತರವಾಗಿ ಗಸ್ತು ತಿರುಗಿ ಅಹಿತಕರ ಘಟನೆ ನಡೆಯದಂತೆ ಎಚ್ಚರ ವಹಿಸಲಿದ್ದು, ತಾವೂ ಜಿಲ್ಲೆಯಾದ್ಯಂತ ತೆರಳಿ ಬಂದೋಬಸ್ತ್ ಮೇಲ್ವಿಚಾರಣೆ ನಡೆಸುವುದಾಗಿ ಮಾಹಿತಿ ನೀಡಿದರು.

ಇದು ಬರೀ ಮತಗಟ್ಟೆಯಲ್ಲ ಪರಿಸರ ಜಾಗೃತಿ ಮೂಡಿಸುವ ತಾಣ!



ವಿಜಯನಗರದಲ್ಲಿರುವ ಭಾರತೀಯ ವಿದ್ಯಾಭವನ (ಬಿವಿಬಿ)ದಲ್ಲಿ ವಿನ್ಯಾಸಗೊಂಡಿರುವ ಹಸಿರು ಮತಗಟ್ಟೆ

"ನಗರ ಪ್ರದೇಶದಲ್ಲಿ ಗ್ರಾಮೀಣ ಸೊಗಡಿನ ಮತಗಟ್ಟೆಯ ಮೂಲಕ ಮತದಾರರನ್ನು ಸೆಳೆಯುವ ಕೆಲಸ ಮಾಡಲಾಗಿದೆ. ಹಾಗೆಯೇ ಪರಿಸರ ಜಾಗೃತಿಗಾಗಿ ಹಸಿರು ಹಾಗೂ ಸೃಜನಶೀಲ ಮತಗಟ್ಟೆ ನಿರ್ಮಾಣ ಮಾಡಲಾಗಿದೆ. ಹಸಿರು ಮತಟಗಟ್ಟೆಯೊಳಗೆ ಗೋಡೆ ಚಿತ್ರಗಳ ಮೂಲಕ ಪರಿಸರ ಜಾಗೃತಿ ಸಂದೇಶ ನೀಡಿರುವುದು ಮತದಾನ ಬಳಿಕ ಶಾಲಾ ವಿದ್ಯಾರ್ಥಿಗಳಿಗೆ ಅನುಕೂಲವಾಗಲಿದೆ.

– ಎಸ್.ಮೈತ್ರಿ, ಪರಿಸರ ಇಂಜಿನಿಯರ್, ನಗರಪಾಲಿಕೆ



ಮೈಸೂರು, ಮೇ 9(ಎಂಕೆ)– ಮೈಸೂರು ನಗರ ವ್ಯಾಪ್ತಿಯಲ್ಲಿ ವಿನ್ಯಾಸಗೊಂಡಿರುವ ಮೂರು ಮಾದರಿ ಮತಗಟ್ಟೆಗಳು (ಥೀಮ್ ಬೂತ್) ಎಲ್ಲರ ಆಕರ್ಷಿಸುತ್ತಿವೆ. ಮತದಾನದ ಜೊತೆಗೆ ಪರಿಸರ ಜಾಗೃತಿಯ ಸಂದೇಶ ನೀಡಲು ಸಿದ್ಧವಾಗಿವೆ.

ಮೈಸೂರು ನಗರಪಾಲಿಕೆ ಸ್ವೀಪ್ ತಂಡದ ವತಿಯಿಂದ ಚಾಮರಾಜ, ಕೃಷ್ಣರಾಜ ಹಾಗೂ ನರಸಿಂಹರಾಜ ಕ್ಷೇತ್ರ ವ್ಯಾಪ್ತಿಯಲ್ಲಿ 'ಹಸಿರು, ಬಿದಿರು(bamboo) ಅಥವಾ ಸೃಜನಶೀಲ ಹಾಗೂ ಗ್ರಾಮೀಣ ಸೊಗಡು' ಪರಿಕಲ್ಪನೆಯಡಿ ಮಾದರಿ ಮತಗಟ್ಟೆಗಳನ್ನು ವಿನ್ಯಾಸ ಮಾಡಲಾಗಿದೆ.

ಚಾಮರಾಜ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ವಿಜಯನಗರ 1ನೇ ಹಂತದಲ್ಲಿರುವ ಭಾರತೀಯ ವಿದ್ಯಾ ಭವನ ಶಾಲೆಯಲ್ಲಿ 'ಹಸಿರು ಮತಗಟ್ಟೆ' ಸಿಂಗಾರಗೊಂಡಿದ್ದು, ಮತದಾನಕ್ಕೆ ಆಗಮಿಸುವ ಮತದಾರರಲ್ಲಿ ಪರಿಸರ ಉಳಿಸಿ ಜಾಗೃತಿ ಸಂದೇಶವನ್ನು ನೀಡುವುದಾಗಿದೆ. ಮತಗಟ್ಟೆಯ ಮುಖ್ಯ ದ್ವಾರದಿಂದ ಹಿಡಿದು ಇಡೀ ಮತಗಟ್ಟೆ ಹಸಿರು ತೋರಣಗಳಿಂದ ಕಂಗೊಳಿಸುತ್ತಿದೆ. ಹಸಿರು ತೆಂಗಿನ ಗರಿಗಳು, ನರ್ಸರಿ ಗಿಡಗಳ ಪಾಟ್ ಹಾಗೂ ಚೆಂಡು ಹೂ ಬಳಸಿ ಸಿಂಗರಿಸಲಾಗಿದೆ.

ಹಾಗೆಯೇ ಮತಗಟ್ಟೆಯೊಳಗೆ ಪರಿಸರ ಸಂರಕ್ಷಣೆ, ನೀರಿನ ಸದ್ಬಳಕೆ, ಜಲ ವಿಜ್ಞಾನದ ಚಕ್ರ, ಭೂಮಿಯನ್ನು ಉಳಿಸಿ ಎಂಬ ಗೋಡೆ ಚಿತ್ರ ಸಹಿತ ಸಂದೇಶಗಳ ಮೂಲಕ ಅರಿವು ಮೂಡಿಸಲಾಗಿದೆ. ಮತಗಟ್ಟೆಯ ಹೊರಗೆ ಹಸಿರು ಚಪ್ಪರ, ಫ್ಲೆಕ್ಸ್‌ಗಳ ಬದಲು ಹಸಿರು ತೋರಣ, ಹಸಿರು ಸೆಲ್ಫಿ ಸ್ಪಾಟ್, ಮತದಾನ ಸ್ಥಳದಲ್ಲಿ ಹಸಿರು ಬಣ್ಣ ಮೇಜುಗಳನ್ನು ಬಳಸಿದ್ದು, ನೋಡಲು ಆಕರ್ಷಣೀಯವಾಗಿವೆ.

ಬಿದಿರು ಮತಗಟ್ಟೆ: ಕೃಷ್ಣರಾಜ ಕ್ಷೇತ್ರ ವ್ಯಾಪ್ತಿಯ ಚಾಮರಾಜ ಜೋಡಿ ರಸ್ತೆಯಲ್ಲಿರುವ ಅಂಬ್ಲೆ ಅಣ್ಣಯ್ಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಬಿದಿರು ಮತಗಟ್ಟೆ ನಿರ್ಮಿಸಲಾಗಿದೆ. ಸಂಪೂರ್ಣವಾಗಿ ಬಿದಿರಿನಿಂದ ಮಾಡಿದಂತಹ ವಸ್ತುಗಳನ್ನು ಬಳಕೆ ಮಾಡಿರುವುದು ವಿಶೇಷವಾಗಿ ಕಾಣುವಂತೆ ಮಾಡಿದೆ. ಗಾಳಿ ಬೀಸಣಿಕೆ, ಬುಟ್ಟಿ, ಮೊರ ಇತ್ಯಾದಿ ಬಿದಿರಿನ ವಸ್ತುಗಳ ಜೊತೆಗೆ ಸೆಲ್ಫಿ ಸ್ಪಾಟ್ ವ್ಯವಸ್ಥೆಯನ್ನು ಮಾಡಲಾಗಿದೆ. ಮತದಾನ ಮಾಡಲು ಬರುವ ಮತದಾರರು ತಮ್ಮ ಹಕ್ಕು ಚಲಾಯಿಸಿದ ಬಳಿಕ ಫೋಟೊ ಕ್ಲಿಕ್ಕಿಸಿಕೊಳ್ಳಲು ಅವಕಾಶ ಮಾಡಿಕೊಡಲಾಗಿದೆ.

ಗ್ರಾಮೀಣ ಸೊಗಡು ಮತಗಟ್ಟೆ: ಮಣ್ಣಿನ ಮಡಿಕೆ–ಕುಡಿಕೆಗಳಿಂದ ಸಿಂಗಾರಗೊಂಡಿರುವ ಗ್ರಾಮೀಣ ಸೊಗಡು ಮಾದರಿ ಮತಗಟ್ಟೆಯನ್ನು ನರಸಿಂಹರಾಜ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಕ್ಯಾತಮಾರನಹಳ್ಳಿ (ಹುಲಿಯಮ್ಮ ದೇವಸ್ಥಾನದ ಬಳಿ) ಯಲ್ಲಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವಿನ್ಯಾಸಗೊಳಿಸಲಾಗಿದೆ. ಮತಗಟ್ಟೆಯು ಸಂಪೂರ್ಣವಾಗಿ ಗ್ರಾಮೀಣ ಮಾದರಿಯಲ್ಲಿ ಕೂಡಿದ್ದು, ನಯನ ಮನೋಹರವಾಗಿ ಕಾಣುತ್ತಿದೆ. ಮಡಿಕೆಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆಯನ್ನೂ ಮಾಡಲಾಗಿದೆ.

ಶೂನ್ಯ ಪ್ಲಾಸ್ಟಿಕ್ ಬಳಕೆ: ಮೂರು ಮಾದರಿ ಮತಗಟ್ಟೆಗಳಲ್ಲಿಯೂ ಪ್ಲಾಸ್ಟಿಕ್ ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಎಲ್ಲಿಯೂ ಪ್ಲಾಸ್ಟಿಕ್ ಬಳಸದೆ ಪರಿಸರ ಸಂರಕ್ಷಣೆ ಮಹತ್ವ ತಿಳಿಸಲಾಗಿದೆ. ಮತಗಟ್ಟೆ ವಿನ್ಯಾಸವನ್ನು ಆಯಾ ಪರಿಕಲ್ಪನೆಗೆ ಅನುಗುಣವಾಗಿ ಮಾಡಿದ್ದು, ಪ್ಲಾಸ್ಟಿಕ್ ಬಳಕೆಯಿಂದ ಪರಿಸರ ಮೇಲೆ ಉಂಟಾಗುವ ದುಷ್ಪರಿಣಾಮವನ್ನು ತಿಳಿಸುವ ಪ್ರಯತ್ನ ಮಾಡಲಾಗಿದೆ.

ಬಾವುಟ ಹಾರಾಟ: ಮಾದರಿ ಮತಗಟ್ಟೆಗಳ ಎದುರು 'ಪ್ರಜಾಪ್ರಭುತ್ವ ಹಬ್ಬ' ಎಂದು ಬರೆದಿರುವ ಬಾವುಟ ಹಾರಾಡಲಿದ್ದು, ಮತದಾರರನ್ನು ತನ್ನತ್ತ ಸೆಳೆಯಲಿದೆ. ಮತದಾನ ಪ್ರಮಾಣ ಹೆಚ್ಚಿಸುವ ನಿಟ್ಟಿನಲ್ಲಿ ಮೊದಲ ಬಾರಿಗೆ ಮಾದರಿ ಮತಗಟ್ಟೆಗಳನ್ನು ವಿನ್ಯಾಸಗೊಳಿಸಲಾಗಿದೆ ಎಂದು ನಗರಪಾಲಿಕೆ ಸ್ವೀಪ್ ಸಮಿತಿ ನೋಡಲ್ ಅಧಿಕಾರಿ ನಾಗರಾಜ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.



ಅಂಬ್ಲೆ ಅಣ್ಣಯ್ಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿನ ಬಿದಿರು ಮತಗಟ್ಟೆ

ಮತದಾನಕ್ಕೆ ಮೈಲ್ಯಾಕ್‌ನಿಂದ 1.20 ಲಕ್ಷ ಬಾಟಲಿ ಶಾಯಿ ಪೂರೈಕೆ

ಮೈಸೂರು, ಮೇ 9– ಕರ್ನಾಟಕ ವಿಧಾನಸಭಾ ಚುನಾವಣಾ ಮತದಾನಕ್ಕೆ ಮೈಸೂರು ಅರಗು ಮತ್ತು ಬಣ್ಣ ಕಾರ್ಖಾನೆ (ಮೈಲ್ಯಾಕ್)ಯಿಂದ 1.20 ಲಕ್ಷ ಬಾಟಲಿ ಅಳಿಸಲಾಗದ ಶಾಯಿ ಪೂರೈಕೆ ಮಾಡಲಾಗಿದೆ. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು 1937ರಲ್ಲಿ ಮೈಲ್ಯಾಕ್ ಸಂಸ್ಥೆ ಸ್ಥಾಪಿಸಿದರು. 1962ರಲ್ಲಿ ಅಳಿಸಲಾಗದ ಶಾಯಿ ಉತ್ಪಾದನೆ ಆರಂಭಿಸಲಾಯಿತು. ಕರ್ನಾಟಕದಲ್ಲಿ ಮಾತ್ರವಲ್ಲದೆ, ದೇಶದ ಬಹುತೇಕ ರಾಜ್ಯಗಳಲ್ಲಿ ನಡೆಯಲಿರುವ ಚುನಾವಣೆಗಳಲ್ಲೂ ಮೈಲ್ಯಾಕ್ ಅಳಿಸಲಾಗದ ಶಾಯಿ ಬಳಸಲಾಗುತ್ತಿದೆ. ಅಲ್ಲದೆ ವಿದೇಶಗಳಿಂದಲೂ ಮೈಲ್ಯಾಕ್ ಇಂಕ್‌ಗೆ ಭಾರಿ ಬೇಡಿಕೆಯಿರುವುದು ಹೆಮ್ಮೆಯ ಸಂಗತಿ.



ಸಾರ್ವಜನಿಕ ಪ್ರಕಟಣೆ

ಷೆಡ್ಯೂಲ್ ಜಮೀನಿನ ವಿವರ

ಗುಂಡ್ಲುಪೇಟೆ ತಾಲ್ಲೂಕು, ಬೇಗೂರು ಹೋಬಳಿ, ಹಿರಿಕಾಟಿ ಗ್ರಾಮದ ಸರ್ವೆ ನಂ. 127/1ಕ್ಕೆ 4.00 (ನಾಲ್ಕು ಎಕರೆ) ಖಾತೆದಾರರು ಹೆಚ್.ಎಸ್. ಪ್ರಭಾಕರ್ ದಾಸ್ ಬಿನ್ ಸುಂದರ್ ದಾಸ್ ಸ್ವತ್ತು ಒಂದು ಮತ್ತು ಸರ್ವೆ ನಂ. 127/2ರ ವಿಸ್ತೀರ್ಣ 3.13.00 (ಮೂರು ಎಕರೆ ಹದಿಮೂರು ಗುಂಟೆ) ಖಾತೆದಾರರು ಹೆಚ್.ಪಿ. ಶಶಿರೇಖಾ ಕೋಂ. ಹೆಚ್.ಎಸ್. ಪ್ರಭಾಕರ್ ದಾಸ್ ಈ ಎರಡು ಸರ್ವೆ ನಂಬರ್‌ಗಳು ಒಂದೇ ಬೌಂಡರಿಯಲ್ಲಿ ಇರುತ್ತವೆ. ಮೇಲ್ಕಂಡ ಇಬ್ಬರೂ ಕ್ರಯಕ್ಕೆ ಕೊಡಲು ಮುಂದೆ ಬಂದಿರುತ್ತಾರೆ ಇದನ್ನು ಕೊಳ್ಳಲು ಶ್ರೀಮತಿ ಹೇಮಾವತಿ. ವಿ, ಕೋಂ. ಲಕ್ಷ್ಮಿಕಾಂತ್.ಎ ರವರು ಮುಂದೆ ಬಂದಿರುತ್ತಾರೆ. ಈ ಮೇಲ್ಕಂಡ ಷೆಡ್ಯೂಲ್ ಸ್ವತ್ತಿಗೆ ಯಾರಾದರೂ ಹಕ್ಕುವುಳ್ಳವರು, ಬ್ಯಾಂಕ್, ಖಾಸಗಿಯವರು ಬೇರೆ ಜನರು ಈ ಮೇಲ್ಕಂಡ ಜಮೀನಿನ ಬಗ್ಗೆ ಯಾವುದೇ ರೀತಿಯ ವ್ಯವಹಾರ ಮಾಡಿದ್ದರೆ ಈ ಜಾಹೀರಾತಿನ ದಿನಾಂಕದಿಂದ ಹದಿನೈದು ದಿನಗಳ ಒಳಗೆ ಈ ಕೆಳಕಂಡ ಮೊಬೈಲ್ ನಂಬರ್‌ಗೆ ವ್ಯವಹರಿಸಬೇಕೆಂದು ವಿನಂತಿ ಅಥವಾ ಈ ಜಾಹೀರಾತು ಇರುವ ನ್ಯೂಸ್ ಪೇಪರ್ ಆಫೀಸ್‌ಗೆ ತಿಳಿಸಬೇಕಾಗಿ ವಿನಂತಿ. ಮೊಬೈಲ್ ನಂ. +91 9480380278.

ಈ ಖುಷ್ಕಿ ಜಮೀನಿಗೆ ಚೆಕ್ಕುಬಂದಿ:–

ಪೂರ್ವಕ್ಕೆ: ರಸ್ತೆ ; ಪಶ್ಚಿಮಕ್ಕೆ: ದೊರೆಸ್ವಾಮಿ ರವರ ಜಮೀನು ಸರ್ವೆ ನಂ. 126 ಮತ್ತು 128 ; ಉತ್ತರಕ್ಕೆ: ರಸ್ತೆ ; ದಕ್ಷಿಣಕ್ಕೆ: ಹಿರಿಕಾಟಿ ಗ್ರಾಮ ಮತ್ತು ಗ್ರಾಮ ಠಾಣ ನಿವೇಶನ.

Sd/- Kenche Gowda Patel,
B.A.L., LL.B., KAR 41/2011
Mohan Kumari. S., LL.B.,
LL.M., KAR 1836/2010
Advocates, #2394, 2nd Floor,
S.K. Complex, Kantharaj Urs Road,
K.G. Koppal, Mysuru-570 014.
Mob: +91 96322 99404

ಸ್ಥಳ: ಮೈಸೂರು
ದಿನಾಂಕ: 9–5–2023



















ಮತದಾನದ ಮಹತ್ವ ಸಾರುವ ಮಾದರಿ ಮತಗಟ್ಟೆ

ಮಡಿಕೇರಿ, ಮೇ 9– ವಿಧಾನಸಭಾ ಚುನಾವಣೆ ಹಿನ್ನೆಲೆ ನಾಳೆ (ಮೇ 10) ಮತದಾನ ನಡೆಯಲಿದೆ. ಈ ಸಂದರ್ಭದಲ್ಲಿ ಮತದಾನದ ಮಹತ್ವವನ್ನು ಸಾರುವ ಉದ್ದೇಶದಿಂದ ಸಾಂಕೇತಿಕವಾಗಿ ಕೊಡಗು ಜಿಲ್ಲಾಡಳಿತ, ಜಿಲ್ಲಾ ಸ್ವೀಪ್ ಸಮಿತಿ ವತಿಯಿಂದ ಮಡಿಕೇರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಮತಗಟ್ಟೆ ಸಂಖ್ಯೆ 210 ಹಾಗೂ 211 ನಗರಸಭೆಯ ಹಿರಿಯ ಪ್ರಾಥಮಿಕ ಶಾಲೆ, ಹಿಲ್ ರಸ್ತೆ, ಮಡಿಕೇರಿ ಇಲ್ಲಿನ ಮತಗಟ್ಟೆಯನ್ನು ಮಾದರಿ ಮತಗಟ್ಟೆಯಾಗಿ ವಿನ್ಯಾಸಗೊಳಿಸಲಾಗಿದೆ.

ಮಾದರಿ ಮತಗಟ್ಟೆಯಲ್ಲಿ ಲಭ್ಯವಿರುವ ಸೌಲಭ್ಯಗಳು: ಶಾಲಾ ಕಟ್ಟಡವನ್ನು ಕೊಡಗಿನ ಕಾಫಿ ಸಂಸ್ಕೃತಿಯನ್ನು ಸಾರುವ ಚಿತ್ರಕಲೆ ಮೂಲಕ ವಿಶೇಷವಾಗಿ ವಿನ್ಯಾಸಗೊಳಿಸಲಾಗಿದೆ. ವಿಶೇಷ ಚೇತನರಿಗಾಗಿ ರ್‍ಯಾಂಪ್, ರೈಲಿಂಗ್ಸ್, ವೀಲ್‌ಚೇರ್ ಹಾಗೂ ವಾಹನ ಸೌಲಭ್ಯ ಕಲ್ಪಿಸಲಾಗಿದೆ. ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿದೆ.

ರಿಯಾಯಿತಿ ದರದಲ್ಲಿ ಮತದಾರರಿಗೆ ಕುಡಿಯಲು ಕಾಫಿ ವ್ಯವಸ್ಥೆ ಮಾಡಲಾಗಿದೆ (ರೂ.10ಕ್ಕೆ ಫಿಲ್ಟರ್ ಕಾಫಿಯನ್ನು ನಿರೀಕ್ಷಣಾ ಕೊಠಡಿಯಲ್ಲಿ ಕುಳಿತು ಸವಿಯಬಹುದಾಗಿದೆ). ಪುರುಷರು ಹಾಗೂ ಮಹಿಳೆಯರಿಗೆ ಪ್ರತ್ಯೇಕ ಶೌಚಾಲಯ ಕಲ್ಪಿಸಲಾಗಿದೆ. ಪೀಠೋಪಕರಣಗಳು, ಫ್ಯಾನ್, ಬೆಳಕಿನ ವ್ಯವಸ್ಥೆಗಳನ್ನೊಳಗೊಂಡಂತೆ ಅಗತ್ಯ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲಾಗಿದೆ.

ವೇಯಿಟಿಂಗ್ ರೂಮ್ ಸೌಲಭ್ಯದೊಂದಿಗೆ ವ್ಯವಸ್ಥಿತ ರೀತಿಯಲ್ಲಿ ಮತದಾನ ಮಾಡಲು ಟೋಕನ್ ಸೌಲಭ್ಯ ಕಲ್ಪಿಸಲಾಗಿದೆ. ವಿಶೇಷ ಚೇತನರು ಹಾಗೂ ಹಿರಿಯ ನಾಗರಿಕ ಮತದಾರರ ಸಹಾಯಕ್ಕಾಗಿ ಸ್ವಯಂ ಸೇವಕರ ಸೇವೆಯನ್ನು ಒದಗಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಕೊಡಗಲ್ಲಿ ಇಂದು ಮತದಾನ

ಬೆಳಗ್ಗೆ 7 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಅವಕಾಶ

• ಜಿಲ್ಲೆಯಲ್ಲಿ 543 ಮತಗಟ್ಟೆ ಸ್ಥಾಪನೆ • 2,32,148 ಮತದಾರರಿಂದ ಅಭ್ಯರ್ಥಿಗಳ ಭವಿಷ್ಯ ನಿರ್ಧಾರ

ಮಡಿಕೇರಿ, ಮೇ 9– ಬುಧವಾರ ಬೆಳಗ್ಗೆ 7 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಕೊಡಗು ಜಿಲ್ಲೆಯ 2 ವಿಧಾನಸಭಾ ಕ್ಷೇತ್ರಗಳಲ್ಲಿ ಚುನಾವಣೆಯ ಮತದಾನ ಪ್ರಕ್ರಿಯೆ ನಡೆಯಲಿದೆ. ಆ ಮೂಲಕ ಚುನಾವಣೆಗೆ ಸ್ಪರ್ಧಿಸಿದವರ ರಾಜಕೀಯ ಭವಿಷ್ಯವನ್ನು ಮತದಾರರು ಬರೆಯಲಿದ್ದಾರೆ.

ಮಡಿಕೇರಿ ಕ್ಷೇತ್ರದಲ್ಲಿ ಒಟ್ಟು 2,32,148 ಮತದಾರರಿದ್ದು, ವಿರಾಜಪೇಟೆ ಕ್ಷೇತ್ರದಲ್ಲಿ 2,24,165 ಮತದಾರರಿದ್ದಾರೆ. ಈಗಾಗಲೇ ಮನೆ ಮನೆ ಪ್ರಚಾರದ ಮೂಲಕ ಅಭ್ಯರ್ಥಿಗಳು ಮತದಾರರ ಮನವೊಲಿಸುವ ಪ್ರಯತ್ನ ನಡೆಸಿದ್ದು, ಮತ ದಾರರು ತಮ್ಮ ಅಮೂಲ್ಯ ಮತವನ್ನು "ದಾನ" ಮಾಡುವ ಮೂಲಕ "ಪ್ರಜಾಪ್ರಭುತ್ವದ ಹಬ್ಬಾಚರಣೆ" ಮಾಡಲಿದ್ದಾರೆ.

ಮಡಿಕೇರಿ ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಒಟ್ಟು 15 ಮಂದಿ ಕಣದಲ್ಲಿದ್ದರೆ, ವಿರಾಜಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ಒಟ್ಟು 9 ಮಂದಿ ಸ್ಪರ್ಧೆಯಲ್ಲಿದ್ದಾರೆ. ಎರಡೂ ವಿಧಾನಸಭಾ ಕ್ಷೇತ್ರಗಳಲ್ಲಿ ಒಟ್ಟು 24 ಮಂದಿ ಚುನಾವಣೆ ಎದುರಿಸಿದರೂ ಕೇವಲ ಇಬ್ಬರು ಮಾತ್ರವೇ ಮತದಾರರ ಬಹುಮತದ ಜನಾಶೀರ್ವಾದ ಪಡೆಯುವ ಮೂಲಕ ಶಾಸಕರಾಗಿ ಆಯ್ಕೆಯಾಗಲಿದ್ದಾರೆ. ಯಾರಿಗೆ ಮತದಾರರು 'ಗೌಪ್ಯವಾಗಿ' ತಮ್ಮ ಒಲವು ತೋರಿದ್ದಾರೆ ಎಂಬುದು ಮೇ 13ರಂದು ನಡೆಯುವ ಮತ ಎಣಿಕೆಯಲ್ಲಿ ಬಹಿರಂಗವಾಗಲಿದೆ.

ಸಾರ್ವತ್ರಿಕ ವಿಧಾನಸಭಾ ಚುನಾವಣೆಯ ಮತದಾನ ಪ್ರಕ್ರಿಯೆಗಳನ್ನು ವ್ಯವಸ್ಥಿತವಾಗಿ ನಡೆಸುವ ನಿಟ್ಟಿನಲ್ಲಿ ಜಿಲ್ಲೆಯ ಮಡಿಕೇರಿ ಮತ್ತು ವಿರಾಜಪೇಟೆ ಕ್ಷೇತ್ರಗಳ 543 ಮತಗಟ್ಟೆಗಳಿಗೆ ಚುನಾವಣಾ ಸಿಬ್ಬಂದಿಗಳು ಮತ್ತು ಭದ್ರತಾ ಸಿಬ್ಬಂದಿಗಳನ್ನು ನಿಯೋಜಿಸುವ ಕಾರ್ಯ ಯಶಸ್ವಿಯಾಗಿ ನಡೆಯಿತು.

ಮಡಿಕೇರಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ ನಗರದ ಸಂತ ಜೋಸೆಫರ ಶಾಲೆಯ ಕೇಂದ್ರದಲ್ಲಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ 269 ಮತಗಟ್ಟೆಗಳಿಗೆ ಹಾಗೂ ವಿರಾಜಪೇಟೆಯ ಸರ್ಕಾರಿ ಜೂನಿಯರ್ ಕಾಲೇಜಿನಲ್ಲಿ ಕ್ಷೇತ್ರದ 273 ಮತಗಟ್ಟೆಗಳಿಗೆ ಸಿಬ್ಬಂದಿಗಳನ್ನು ನಿಯೋಜಿಸಲಾಗಿದೆ.

ಮಡಿಕೇರಿ ಕ್ಷೇತ್ರದ ಚುನಾವಣಾಧಿಕಾರಿಗಳಾದ ಉಪ ವಿಭಾಗಾಧಿಕಾರಿ ಯತೀಶ್ ಉಲ್ಲಾಳ್ ಮತ್ತು ವಿರಾಜಪೇಟೆ ಕ್ಷೇತ್ರದ ಚುನಾವಣಾಧಿಕಾರಿ ಶಬಾನಾ ಶೇಖ್ ಅವರ ಮಾರ್ಗದರ್ಶನದಲ್ಲಿ ಚುನಾವಣಾ ಸಿಬ್ಬಂದಿಗಳಿಗೆ ಅವರು ತೆರಳಬೇಕಾದ ಮತಗಟ್ಟೆಗಳನ್ನು ನಿಗದಿಪಡಿಸಿ, ಇವಿಎಂ ಮತ್ತು ಅಗತ್ಯ ಸಾಮಗ್ರಿಗಳೊಂದಿಗೆ ಕಳುಹಿಸಿಕೊಡಲಾಯಿತು.

ನಗರದ ಸಂತ ಜೋಸೆಫರ ಶಾಲಾ ಕೇಂದ್ರದಲ್ಲಿ ಇಂದು ಬೆಳಗಿನಿಂದಲೆ ಚುನಾವಣಾ ಕರ್ತವ್ಯಕ್ಕೆ ನಿಯುಕ್ತರಾದ ಸಿಬ್ಬಂದಿಗಳನ್ನು ಮತ್ತು ಪೊಲೀಸ್ ಸಿಬ್ಬಂದಿಗಳನ್ನು ನಿಯೋಜಿಸುವ ಕಾರ್ಯದಲ್ಲಿ ನೂರಾರು ಸಿಬ್ಬಂದಿಗಳು ಪಾಲ್ಗೊಂಡಿದ್ದರು. ಆಯಾ ಮಾರ್ಗದ ವಾಹನಗಳ ಸಹಿತ ಅಗತ್ಯ ಪೊಲೀಸ್ ಬಂದೋಬಸ್ತ್, ನಕ್ಸಲ್ ಬಾಧಿತ ಹಾಗೂ ಅತೀ ಸೂಕ್ಷ್ಮ ಮತಗಟ್ಟೆಗಳ ಸಿಬ್ಬಂದಿಗಳನ್ನು ಶಸ್ತ್ರ ಸಜ್ಜಿತ ಯೋಧರ ಬೆಂಗಾವಲಿನಲ್ಲಿ ಆಯಾ ಕೇಂದ್ರಗಳಿಂದ ಬೂತ್‌ಗಳಿಗೆ ಕಳುಹಿಸಿಕೊಡಲಾಯಿತು.

79 ಬಸ್‌ಗಳ ಬಳಕೆ: ಈ ಚುನಾವಣೆಯಲ್ಲಿ ಮಸ್ಟರಿಂಗ್ ಕಾರ್ಯಕ್ಕೆ ಮಡಿಕೇರಿ ಕ್ಷೇತ್ರಕ್ಕೆ 38 ಕೆಎಸ್‌ಆರ್‌ಟಿಸಿ, 11 ಮಿನಿಬಸ್, 15 ಮ್ಯಾಕ್ಸಿ ಕ್ಯಾಬ್, 40 ಜೀಪ್‌ಗಳನ್ನು ಬಳಸಿಕೊಳ್ಳಲಾಗಿದ್ದರೆ, ವಿರಾಜಪೇಟೆ ಕ್ಷೇತ್ರದಲ್ಲಿ 46 ಕೆಎಸ್‌ಆರ್‌ಟಿಸಿ ಬಸ್, 31 ಮಿನಿ ಬಸ್, 41 ಜೀಪ್‌ಗಳನ್ನು ಬಳಸಿಕೊಳ್ಳಲಾಗಿದೆ.

'ವಿಶೇಷ ಚೇತನರ' ಮತಗಟ್ಟೆ: ಮಡಿಕೇರಿಯ ಸಂತ ಮೈಕೆಲರ ಪ್ರೌಢಶಾಲೆ (ಬಲ ಭಾಗ) ಮತ್ತು ವಿರಾಜಪೇಟೆಯ ಸಂತ ಅನ್ನಮ್ಮ ಪ್ರೌಢ ಶಾಲೆಯ ಮತಗಟ್ಟೆಗಳನ್ನು, ವಿಶೇಷಚೇತನರ ಮತಗಟ್ಟೆಗಳನ್ನಾಗಿ ಅಗತ್ಯ ಸೌಲಭ್ಯಗಳನ್ನು ಒದಗಿಸಲಾಗಿದೆ.

'ಯುವ' ಮತಗಟ್ಟೆ: ಕುಶಾಲನಗರದ ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆ(ಎಸ್‌ಡಬ್ಲ್ಯು) ಮತ್ತು ಆರ್ಜಿ ಗ್ರಾಮದ ಕಲ್ಲುಬಾಣೆಯ ಬದ್ರಿಯಾ ಮಾದರಿ ಪ್ರಾಥಮಿಕ ಶಾಲಾ ಮತಗಟ್ಟೆಗಳು ಈ ಬಾರಿ ಯುವ ಚುನಾವಣಾ ಸಿಬ್ಬಂದಿಗಳನ್ನು ಹೊಂದಿದ 'ಯುವ ಮತದಾರರ ಮತಗಟ್ಟೆಯಾಗಿ ಗಮನ ಸೆಳೆಯಲಿದೆ.

'ಕಾಫಿ' ಮತಗಟ್ಟೆ: ಮಡಿಕೇರಿ ಕ್ಷೇತ್ರದ ಮಡಿಕೇರಿಯ ಹಿಲ್ ರಸ್ತೆಯ ಸಿಎಂಸಿ ಮಾದರಿ ಪ್ರಾಥಮಿಕ ಶಾಲೆ(ಬಲ ಭಾಗ) ಮತಗಟ್ಟೆ, ರಂಗಸಮುದ್ರದ ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆ (ಎಡ ಭಾಗ) ಮತಗಟ್ಟೆ ಹಾಗೂ ವಿರಾಜಪೇಟೆ ಕ್ಷೇತ್ರದ ಪೊನ್ನಂಪೇಟೆಯ ಜಿಎಂಪಿಎಸ್ ಮತಗಟ್ಟೆಯನ್ನು ಈ ಬಾರಿ 'ಕಾಫಿ' ವಿಷಯಾಧಾರಿತ ಮತಗಟ್ಟೆಯಾಗಿ ರೂಪಿಸಲಾಗಿದೆ. ವಿಷಯಾಧಾರಿತವಾಗಿ ಅಲಂಕಾರ ಮಾಡಿರುವ ಈ ಮತಗಟ್ಟೆಯಲ್ಲಿ ಕಾಫಿ ಸವಿಯಲು ಅವಕಾಶವಿದೆ. ವಿರಾಜಪೇಟೆ ಕ್ಷೇತ್ರದ ತಿತಿಮತಿ ಜಿಎಂಪಿಎಸ್ ಮತ್ತು ನಾಗರಹೊಳೆಯ ಸರ್ಕಾರಿ ಆಶ್ರಮ ಶಾಲಾ ಮತಗಟ್ಟೆಗಳು ಎಥಿನಿಕ್ ಮತಗಟ್ಟೆಗಳಾಗಿ ಜನರನ್ನು ಆಕರ್ಷಿಸಲಿದೆ.



'ಸಖಿ' ಮತಗಟ್ಟೆಗಳು



ಮಡಿಕೇರಿ ಮತ್ತು ವಿರಾಜಪೇಟೆ ತಾಲೂಕಿನಲ್ಲಿ ತಲಾ 5 ಸಖಿ ಮತಗಟ್ಟೆಗಳನ್ನು ತೆರೆಯಲಾಗಿದೆ. ಮಡಿಕೇರಿ ಕ್ಷೇತ್ರದ ಮಡಿಕೇರಿಯ ಮಹದೇವಪೇಟೆಯ ಸಿಎಂಸಿ ಮಾದರಿ ಪ್ರಾಥಮಿಕ ಶಾಲೆ, ಶಿರಂಗಾಲದ ಸರ್ಕಾರಿ ಪಿಯು ಕಾಲೇಜು, ಮುಳ್ಳುಸೋಗೆಯ ಮಾದರಿ ಪ್ರಾಥಮಿಕ ಶಾಲೆ, ಸೋಮವಾರಪೇಟೆಯ ಎಸ್‌ಜೆಎಂ ಬಾಲಕಿಯರ ಪ್ರೌಢಶಾಲೆ ಮಡಿಕೇರಿಯ ಎಫ್‌ಎಂಕೆಎಂಸಿ ಕಾಲೇಜು ಮತಗಟ್ಟೆಯಲ್ಲಿ ಸಖಿ ಮತಗಟ್ಟೆಗಳನ್ನು ತೆರೆಯಲಾಗಿದೆ. ವಿರಾಜಪೇಟೆ ಕ್ಷೇತ್ರದ ತಿತಿಮತಿ ಗ್ರಾಪಂ ಕಚೇರಿ ಮತಗಟ್ಟೆ, ವಿರಾಜಪೇಟೆ ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆ, ಪೊನ್ನಂಪೇಟೆ ಸರ್ಕಾರಿ ಪದವಿ ಪೂರ್ವ ಕಾಲೇಜು, ಗೋಣಿಕೊಪ್ಪಲು ಮಹಿಳಾ ಸಮಾಜ ಕಟ್ಟಡ, ವಿರಾಜಪೇಟೆಯ ಜಯ ಪ್ರಕಾಶ್ ಬಾಲಕಿಯರ ಪ್ರೌಢ ಶಾಲೆಯಲ್ಲಿ ಸಖಿ ಮತಗಟ್ಟೆಗಳು ಗಮನ ಸೆಳೆಯಲಿವೆ.

ಮತಹಾಕಿ ಸೆಲ್ಫಿ ಕ್ಲಿಕ್ಕಿಸಿ ಫೋಟೋ ಸ್ಪರ್ಧೆ

ಮಡಿಕೇರಿ, ಮೇ 9– ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಕೊಡಗು ಜಿಲ್ಲಾಡಳಿತ, ಜಿಲ್ಲಾ ಸ್ವೀಪ್ ಸಮಿತಿ ವತಿಯಿಂದ ಮತದಾನದ ಪ್ರಮಾಣ ಹೆಚ್ಚಿಸುವ ಉದ್ದೇಶದಿಂದ 'ಸೆಲ್ಫಿ ಸ್ಪರ್ಧೆ' ಆಯೋಜಿಸಿದೆ.

ಮತದಾನ ಮಾಡಿದ ಎಲ್ಲರೂ ಈ ಸ್ಪರ್ಧೆಯಲ್ಲಿ ಭಾಗವಹಿಸಬಹುದಾಗಿದೆ. ಯುವಕ–ಯುವತಿಯರನ್ನು ಒಳಗೊಂಡಂತೆ ಜಿಲ್ಲೆಯ ಎಲ್ಲಾ ಮತದಾರರು ತಮ್ಮ ಕುಟುಂಬದವರೊಂದಿಗೆ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಕೋರಿದೆ. ಉತ್ತಮ ಫೋಟೋಗಳಿಗೆ ಆಕರ್ಷಕ ಬಹುಮಾನ ನೀಡಲಾಗುವುದು ಎಂದು ಜಿಲ್ಲಾ ಸ್ವೀಪ್ ಸಮಿತಿ ಅಧ್ಯಕ್ಷ ಡಾ.ಎಸ್.ಆಕಾಶ್ ತಿಳಿಸಿದ್ದಾರೆ.

ಛಾಯಾಚಿತ್ರವನ್ನು ಮೇ 10 ರ ಮತದಾನದ ದಿನದಂದು ಸಂಜೆ 6 ಗಂಟೆಯೊಳಗೆ ಕಳುಹಿಸಬೇಕು. ಉತ್ತಮವಾದ ಒಂದು ಫೋಟೋ ಮಾತ್ರ ಕಳುಹಿಸಿ ಸ್ಪರ್ಧೆಯಲ್ಲಿ ಭಾಗವಹಿಸಲು ಅವಕಾಶವಿದೆ. ಫೋಟೋವನ್ನು 6363994172 ಅಥವಾ 9743144135 ನಂಬರ್‌ಗೆ ವಾಟ್ಸಾಪ್ ಮೂಲಕ ಕಳುಹಿಸುವುದು. ಸ್ಪರ್ಧಿಯ ಹೆಸರು, ತಂದೆಯ/ ಗಂಡನ ಹೆಸರು, ಮತಗಟ್ಟೆ ಸಂಖ್ಯೆ, ಜನ್ಮ ದಿನಾಂಕ ಹಾಗೂ ತಮ್ಮ ಮೊಬೈಲ್ ಸಂಖ್ಯೆಯ ವಿವರಗಳೊಂದಿಗೆ ಯಾವುದಾದರೂ ಒಂದು ಮೊಬೈಲ್ ಸಂಖ್ಯೆಗೆ ಸೆಲ್ಫಿಯನ್ನು ಕಳುಹಿಸುವುದು ಎಂದು ಕೊಡಗು ಜಿಲ್ಲಾ ಸ್ವೀಪ್ ಸಮಿತಿ ಅಧ್ಯಕ್ಷರು ಹಾಗೂ ಜಿ.ಪಂ. ಸಿಇಒ ಡಾ.ಎಸ್.ಆಕಾಶ್ ಅವರು ತಿಳಿಸಿದ್ದಾರೆ.

ಮತದಾನಕ್ಕೆ ವಿರಾಜಪೇಟೆ ಸಜ್ಜು



ವಿರಾಜಪೇಟೆ, ಮೇ 9– ವಿರಾಜಪೇಟೆ ತಾಲೂಕಿನ ವಿಧಾನ ಸಭಾ ಚುನಾವಣೆಗೆ ನಾಳೆ (ಮೇ10) ಮತದಾನ ನಡೆಯಲಿದ್ದು, ಪಟ್ಟಣದ ಜೂನಿಯರ್ ಕಾಲೇಜು ಆವರಣದಲ್ಲಿ ಮತಯಂತ್ರಗಳು ಹಾಗೂ ಪರಿಕರಗಳನ್ನು ಸಿಬ್ಬಂದಿಗೆ ವಿತರಿಸಲಾಯಿತು.

ವಿರಾಜಪೇಟೆ ವಿಧಾನ ಸಭಾ ಕ್ಷೇತ್ರದಲ್ಲಿ 273 ಮತಗಟ್ಟೆಗಳನ್ನು ಸ್ಥಾಪಿಸಲಾಗಿದ್ದು ಈ ಕೇಂದ್ರಗಳಿಗೆ ಒಟ್ಟು 1,092 ಮಂದಿ ಸಿಬ್ಬಂದಿಗಳನ್ನು ಕರ್ತವ್ಯಕ್ಕೆ ನಿಯೋಜಿಸಲಾಗಿದೆ. ಹಾಗೂ 78 ಮೈಕ್ರೋ ವೀಕ್ಷಕರು, 273 ಸ್ವಯಂ ಸೇವಕರು ಮತ್ತು 273 ಬಿಎಲ್‌ಓಗಳು ಕಾರ್ಯನಿರ್ವಹಿಸಲಿದ್ದಾರೆ. ಸಿಬ್ಬಂದಿಗಳನ್ನು ಮತಗಟ್ಟೆಗೆ ಕರೆದುಕೊಂಡು ಹೋಗಲು 38 ಕೆಎಸ್‌ಆರ್‌ಟಿಸಿ ಬಸ್, 26 ಮಿನಿ ಬಸ್ ಹಾಗೂ 34 ಜೀಪುಗಳನ್ನು ನಿಯೋಜಿಸಲಾಗಿತ್ತು. 20 ಮೀಸಲು ವಾಹನಗಳನ್ನು ಆಯೋಜನೆ ಮಾಡಲಾಗಿದೆ ಎಂದು ವಿಧಾನ ಸಭಾ ಕ್ಷೇತ್ರದ ಚುನಾವಣಾಧಿಕಾರಿ ಶಬಾನ ಎಂ. ಶೇಖ್ ಮಾಹಿತಿ ನೀಡಿದರು.

ಮುಕ್ತ ಮತ್ತು ಶಾಂತಿಯುತ ಮತದಾನಕ್ಕಾಗಿ ಪೊಲೀಸ್ ಇಲಾಖೆಯಿಂದ 3 ಡಿವೈಎಸ್‌ಪಿ, 8 ವೃತ್ತ ನಿರೀಕ್ಷಕರು, 24 ಸಬ್‌ಇನ್‌ಸ್ಪೆಕ್ಟರ್, 18 ಎಎಸ್‌ಐಗಳು, 70 ಮುಖ್ಯ ಪೇದೆಗಳು, 159 ಪೊಲೀಸ್ ಸಿಬ್ಬಂದಿ, 56 ಹೋಂಗಾರ್ಡ್, 120 ಕೇಂದ್ರ ಕೈಗಾರಿಕ ಭದ್ರತ ಪಡೆ ಹಾಗೂ 4 ತಪಾಸಣಾ ಕೇಂದ್ರವನ್ನು ಸ್ಥಾಪಿಸಿರುವುದಾಗಿ ಅಡಿಷನಲ್ ಎಸ್ಪಿ ಸುಂದರ್ ರಾಜ್ ತಿಳಿಸಿದರು. ಈ ಸಂದರ್ಭ ಸಹಾಯಕ ಚುನಾವಣಾಧಿಕಾರಿ ವಿರಾಜಪೇಟೆ ತಹಶೀಲ್ದಾರ್ ರಾಮಚಂದ್ರ ಡಿವೈಎಸ್‌ಪಿ ಮೋಹನ್ ಕುಮಾರ್, ವೃತ್ತನಿರೀಕ್ಷಕ ಶಿವರುದ್ರ ಉಪಸ್ಥಿತರಿದ್ದರು.

ವಿರಾಜಪೇಟೆ ವಿಧಾನಸಭಾ ಕ್ಷೇತ್ರದಲ್ಲಿ 2,24,165 ಮತದಾರರಿದ್ದಾರೆ. ಈ ಕ್ಷೇತ್ರದ ತಿತಿಮತಿ ಗ್ರಾಮ ಪಂಚಾಯಿತಿ, ಗೋಣಿಕೊಪ್ಪಲು ಮಹಿಳಾ ಸಮಾಜ, ವಿರಾಜಪೇಟೆ ಮಾದರಿ ಪ್ರಾಥಮಿಕ ಶಾಲೆ, ಜಯಪ್ರಕಾಶ್ ನಾರಾಯಣ ಬಾಲಕಿಯರ ಶಾಲೆ ಮತ್ತು ಪೊನ್ನಂಪೇಟೆ ಜೂನಿಯರ್ ಕಾಲೇಜ್‌ನಲ್ಲಿ ಸಖಿ ಮತದಾನ ಕೇಂದ್ರಗಳು ಹಾಗೂ ಸಂತ ಅನ್ನಮ್ಮ ಶಾಲೆ ವಿರಾಜಪೇಟೆಯಲ್ಲಿ ವಿಶೇಷಚೇತನ ಅಧಿಕಾರಿಗಳು ಸಿಬ್ಬಂದಿಗಳಿರುವ ಒಂದು ಮತಗಟ್ಟೆ ಇರುವುದಾಗಿ ಮಾಹಿತಿ ತಿಳಿದುಬಂದಿದೆ.

ವಿದ್ಯುತ್ ಸ್ಪರ್ಶದಿಂದ ಕಾಫಿ ಬೆಳೆಗಾರ ಸಾವು

ಗೋಣಿಕೊಪ್ಪ, ಮೇ 9– ಪೊನ್ನಂಪೇಟೆ ತಾಲೂಕಿನ ನಾಲ್ಕೇರಿ ಗ್ರಾಮದಲ್ಲಿ ವಿದ್ಯುತ್ ಸ್ಪರ್ಶದಿಂದ ಕಾಫಿ ಬೆಳೆಗಾರ ಸಾವನ್ನಪ್ಪಿರುವ ಘಟನೆ ಸಂಭವಿಸಿದೆ. ಗ್ರಾಮದ ವಾಸಿ ಮುಕ್ಕಾಟೀರ ದಿನೇಶ್ (41) ಮೃತ ದುರ್ದೈವಿ. ಮಂಗಳವಾರ ಬೆಳಗ್ಗೆ 10 ಗಂಟೆ ಸುಮಾರಿಗೆ ಕೆರೆಯ ಸಮೀಪ ಘಟನೆ ನಡೆದಿದ್ದು, ಕುಟ್ಟ ಸಮುದಾಯ ಆರೋಗ್ಯ ಕೇಂದ್ರಕ್ಕೆ ಮೃತದೇಹವನ್ನು ರವಾನಿಸಲಾಗಿದೆ. ಸ್ಥಳಕ್ಕೆ ಗೋಣಿಕೊಪ್ಪ ಉಪ ವಿಭಾಗ ಎಇಇ ನೀಲ್‌ಶೆಟ್ಟಿ, ಜೆಇ ಹೇಮಂತ್‌ಕುಮಾರ್ ಬೇಟಿ ನೀಡಿ ಪರಿಶೀಲನೆ ನಡೆಸಿದರು.



ಘಟನೆ ವಿವರ ; ಗದ್ದೆಯಲ್ಲಿ ಹಸುವನ್ನು ಕಟ್ಟಲು ತೆರಳಿದ್ದ ಸಂದರ್ಭದಲ್ಲಿ 11 ಕೆವಿ. ವಿದ್ಯುತ್ ಮಾರ್ಗದ ವಿದ್ಯುತ್ ಕಂಬ ಬೀಳದಂತೆ ಕಟ್ಟಿರುವ ಗೈ ವಯರ್ ಮೂಲಕ ವಿದ್ಯುತ್ ಸ್ಪರ್ಶಗೊಂಡು ಸ್ಥಳದಲ್ಲಿಯೇ ಸಾವಿಗೀಡಾದರು. ಕಂಬದಲ್ಲಿರುವ ವಿದ್ಯುತ್ ತಂತಿ ಮತ್ತು ಗೈ ವಯರ್ ನಡುವಿನ ಅಂತರ ಕಡಿಮೆ ಇದ್ದ ಕಾರಣ ಹಿಡಿಯಲು ಯತ್ನಿಸಿದಾಗ ವಿದ್ಯುತ್ ಹರಿದಿರಬಹುದು ಎಂದು ಅಂದಾಜಿಸಲಾಗಿದ್ದು, ಹಸು ಅಪಾಯದಿಂದ ಪಾರಾಗಿದೆ. ಸೆಸ್ಕ್ ನಿರ್ಲಕ್ಷ್ಯದಿಂದ ಅಪಾಯ ನಡೆದಿದೆ ಎಂದು ಗ್ರಾಮಸ್ಥರು ಆರೋಪಿಸಿದ್ದಾರೆ.

ಎಸ್.ಎಲ್. ಕೃಷ್ಣ ನಿಧನ



ವಿರಾಜಪೇಟೆ, ಮೇ 9– ಪಟ್ಟಣದ ಜೈನರ ಬೀದಿಯ ನಿವಾಸಿ ಎಸ್.ಎಲ್. ಕೃಷ್ಣ (42) ಇಂದು ಬೆಳಗ್ಗೆ ನಿಧನರಾಗಿದ್ದಾರೆ. ತೀವ್ರ ಎದೆ ನೋವು ಕಾಣಿಸಿಕೊಂಡ ತಕ್ಷಣ ಅವರನ್ನು ವಿರಾಜಪೇಟೆ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಹತ್ತು ಗಂಟೆಗೆ ನಿಧನರಾದರು. ಮೃತರು ಪತ್ನಿ ಅನಿತ (ನ್ಯಾಯಾಲಯ ಇಲಾಖೆ ಸಿಬ್ಬಂದಿ), ಮಂಗಳೂರಿನ ಖಾಸಗಿ ಕಾಲೇಜ್‌ನಲ್ಲಿ ಇಂಜಿನಿಯರಿಂಗ್ ವ್ಯಾಸಂಗ ಮಾಡುತ್ತಿರುವ ಪುತ್ರ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮಂಗಳವಾರ ಸಂಜೆ ವಿರಾಜಪೇಟೆ ಮೀನು ಪೇಟೆಯ ಹಿಂದೂ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು. ಇವರು ಮೂಲತಃ ಚಿಕ್ಕಮಗಳೂರು ಜಿಲ್ಲೆಯ ನಿವಾಸಿಗಳು ಎನ್ನಲಾಗಿದೆ.

ಚಾ.ನಗರ ಜಿಲ್ಲೆಯಲ್ಲಿ ಇಂದು ಮತದಾನ

• 982 ಮತಗಟ್ಟೆಗಳ ಸ್ಥಾಪನೆ, 61 ಅಭ್ಯರ್ಥಿಗಳ ಭವಿಷ್ಯ ನಿರ್ಧಾರ • ಜಿಲ್ಲೆಯಲ್ಲಿ 8.61 ಲಕ್ಷ ಮತದಾರರು



ಚಾಮರಾಜನಗರ, ಮೇ 9– ಜಿಲ್ಲೆಯ ನಾಲ್ಕು ವಿಧಾನಸಭಾ ಕ್ಷೇತ್ರಗಳಿಗೆ ಬುಧವಾರ ಮತದಾನ ನಡೆಯಲಿದ್ದು, ಕಣದಲ್ಲಿರುವ 61 ಅಭ್ಯರ್ಥಿಗಳ ರಾಜಕೀಯ ಭವಿಷ್ಯವನ್ನು 8.61 ಲಕ್ಷ ಮತದಾರರು ಬರೆಯಲಿದ್ದಾರೆ.

ಬೆಳಗ್ಗೆ 7 ಗಂಟೆಯಿಂದ ಸಂಜೆ 6 ಗಂಟೆವರೆಗೆ ಜಿಲ್ಲೆಯಲ್ಲಿ ಸ್ಥಾಪಿಸಿರುವ 982 ಮತಗಟ್ಟೆಗಳಲ್ಲಿ ಮತದಾರರ ವಿದ್ಯುನ್ಮಾನ ಯಂತ್ರದಲ್ಲಿ ದಾಖಲಿಸಿ ಜಿಲ್ಲೆಯ ನಾಲ್ಕು ಕ್ಷೇತ್ರಗಳ ಶಾಸಕರು ಯಾರು ಎಂಬುದನ್ನು ನಿರ್ಧರಿಸಲಿದ್ದು, ಶಾಂತಿಯುತ ಮತದಾನಕ್ಕೆ ಜಿಲ್ಲಾಡಳಿತ ಹಾಗೂ ಪೊಲೀಸ್ ಇಲಾಖೆಯಿಂದ ಅಗತ್ಯ ಸಿದ್ಧತೆ ಪೂರ್ಣಗೊಳಿಸಿದ್ದು, ಮತದಾನಕ್ಕೆ ಕ್ಷಣಗಣನೆ ಶುರುವಾಗಿದೆ.

ಚಾಮರಾಜನಗರ ಜಿಲ್ಲೆಯಲ್ಲಿ 4,26,547 ಪುರುಷ, 4,34,873 ಮಹಿಳೆ ಹಾಗೂ 69 ಇತರರು ಸೇರಿದಂತೆ ಒಟ್ಟು 8,61,489 ಮತದಾರರಿದ್ದಾರೆ. ಈ ಪೈಕಿ ಹನೂರಿನಲ್ಲಿ ಅತಿ ಹೆಚ್ಚು 2,21,557 ಮತದಾರರಿದ್ದಾರೆ. ಉಳಿದಂತೆ ಕೊಳ್ಳೇಗಾಲದಲ್ಲಿ 2,16,602, ಗುಂಡ್ಲುಪೇಟೆಯಲ್ಲಿ 2,13,836 ಹಾಗೂ ಚಾಮರಾಜನಗರ ವಿಧಾನಸಭಾ ಕ್ಷೇತ್ರದಲ್ಲಿ 2,09,494 ಮಂದಿ ಮತದಾರರಿದ್ದು, ಜಿಲ್ಲೆಯಲ್ಲಿ ಒಟ್ಟು 982 ಮತಗಟ್ಟೆಗಳಲ್ಲಿ ಮತದಾನ ನಡೆಯಲಿದೆ.

ಜಿಲ್ಲೆಯ ಹನೂರು ವಿಧಾನಸಭಾ ಕ್ಷೇತ್ರದಲ್ಲಿ 18 ಮಂದಿ ಅಭ್ಯರ್ಥಿಗಳು, ಕೊಳ್ಳೇಗಾಲದಲ್ಲಿ 13 ಮಂದಿ, ಚಾಮರಾಜನಗರದಲ್ಲಿ 15 ಮಂದಿ ಹಾಗೂ ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರದಲ್ಲಿ 15 ಮಂದಿ ಅಭ್ಯರ್ಥಿಗಳು ಅಂತಿಮ ಕಣದಲ್ಲಿದ್ದಾರೆ.

ನಿಷೇಧಾಜ್ಞೆ ಜಾರಿ: ಚುನಾವಣೆಯನ್ನು ಮುಕ್ತ, ನಿಷ್ಪಕ್ಷಪಾತವಾಗಿ ನಡೆಸಲು ಹಾಗೂ ಕಾನೂನು ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ಮೇ 8ರ ಸಂಜೆ 6 ಗಂಟೆಯಿಂದ ಮೇ 10ರಂದು ಮತದಾನ ಮುಕ್ತಾಯವಾಗುವವರೆಗೆ ಜಿಲ್ಲೆಯಾದ್ಯಂತ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ.

ಜಿಲ್ಲೆಯ ಚುನಾವಣಾ ಹೈಲೈಟ್ಸ್

ಜಿಲ್ಲೆಯ ಒಟ್ಟು ವಿಧಾನಸಭಾ ಕ್ಷೇತ್ರಗಳು	– 04
ಕಣದಲ್ಲಿರುವ ಒಟ್ಟು ಅಭ್ಯರ್ಥಿಗಳು	– 61
ಜಿಲ್ಲೆಯಲ್ಲಿರುವ ಒಟ್ಟು ಮತದಾರರು	– 8,61,489
ಪುರುಷರು	– 4,26,547
ಮಹಿಳಾ ಮತದಾರರು	– 4,34,873
ಇತರೆ	– 69
ಒಟ್ಟು ಮತಗಟ್ಟೆಗಳು	**– 982**
ಮತಗಟ್ಟೆಗಳಿಗೆ ನಿಯೋಜಿಸಿರುವ ಅಧಿಕಾರಿಗಳು	**– 4763**

ಸಾರ್ವಜನಿಕರಿಂದ ಬರುವ ದೂರುಗಳಿಗಾಗಿ ಜಿಲ್ಲಾ ಮಟ್ಟದಲ್ಲಿ ಸ್ಥಾಪಿಸಲಾಗಿರುವ ಕಂಟ್ರೋಲ್ ರೂಂ ದೂರವಾಣಿ ಸಂಖ್ಯೆ– 1950

ಹನೂರು ಕ್ಷೇತ್ರ ಕಂಟ್ರೋಲ್ ರೂಂ	– 08224–268032
ಕೊಳ್ಳೇಗಾಲ ಕ್ಷೇತ್ರ	–08224–252329
ಚಾಮರಾಜನಗರ ಕ್ಷೇತ್ರ	–08226–200254
ಗುಂಡ್ಲುಪೇಟೆ ಕ್ಷೇತ್ರ	–08229–222225



ಚಾಮರಾಜನಗರದಲ್ಲಿ ಅಂಚೆ ಮತ ಚಲಾಯಿಸಿದ ಚುನಾವಣಾ ಮಹಿಳಾ ಸಿಬ್ಬಂದಿ

ಜಿಲ್ಲೆಯಾದ್ಯಂತ ಸೆಕ್ಷನ್ 144ರಡಿ ಜಿಲ್ಲಾಧಿಕಾರಿ ಡಿ.ಎಸ್.ರಮೇಶ್ ನಿಷೇಧಾಜ್ಞೆ ಜಾರಿಗೊಳಿಸಿ ಆದೇಶಿಸಿದ್ದಾರೆ. ಜಿಲ್ಲೆಯಲ್ಲಿ ಚುನಾವಣೆಯನ್ನು ಶಾಂತಿಯುತವಾಗಿ ನಡೆಸಲು ಸುಮಾರು ಎರಡು ಸಾವಿರಕ್ಕೂ ಅಧಿಕ ಪೊಲೀಸ್ ಸಿಬ್ಬಂದಿ ನೇಮಿಸಲಾಗಿದೆ.

ಮತಯಂತ್ರಕ್ಕೆ ಬಿಗಿ ಭದ್ರತೆ: ಮತದಾನದ ಬಳಿಕ ಮತಯಂತ್ರಗಳನ್ನು ಆಯಾ ತಾಲೂಕಿನಲ್ಲಿ ಬಿಗಿ ಪೊಲೀಸ್ ಭದ್ರತೆಯಲ್ಲಿಡಲಾಗುತ್ತದೆ. ಹನೂರು ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಕ್ರಿಸ್ತರಾಜ ಶಿಕ್ಷಣ ಸಂಸ್ಥೆಯಲ್ಲಿ, ಕೊಳ್ಳೇಗಾಲ ಕ್ಷೇತ್ರಕ್ಕೆ ಶ್ರೀಮಹದೇಶ್ವರ ಪ್ರಥಮ ದರ್ಜೆ ಕಾಲೇಜು, ಚಾಮರಾಜನಗರ ಕ್ಷೇತ್ರಕ್ಕೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಹಾಗೂ ಗುಂಡ್ಲುಪೇಟೆ ಕ್ಷೇತ್ರಕ್ಕೆ ಸೆಂಟ್ ಜಾನ್ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಮತಯಂತ್ರಗಳನ್ನು ಇರಿಸಲಾಗುತ್ತದೆ.

ಮೇ 13ರಂದು ಮತ ಎಣಿಕೆ ನಡೆಯಲಿದ್ದು, ಅದಕ್ಕೂ ಮುನ್ನ ಆಯಾ ವಿಧಾನ ಸಭಾ ಕ್ಷೇತ್ರದಿಂದ ಮತಯಂತ್ರವನ್ನು ಜಿಲ್ಲಾ ಕೇಂದ್ರಕ್ಕೆ ರವಾನಿಸಲಾಗುತ್ತದೆ.

ಮನೆ ಮನೆಗೆ ತೆರಳಿ ಸೋಮಣ್ಣ ಮತಯಾಚನೆ



ಚಾಮರಾಜನಗರ, ಮೇ 9– ಕ್ಷೇತ್ರದ ಬಿಜೆಪಿ ಅಭ್ಯರ್ಥಿ, ಸಚಿವ ವಿ. ಸೋಮಣ್ಣ ಅವರು ನಗರದ ದೊಡ್ಡ ಅಂಗಡಿ ಬೀದಿ, ರಥದ ಬೀದಿ, ಕರಿನಂಜನಪುರ ಸೇರಿದಂತೆ ವಿವಿಧೆಡೆ ಮತದಾನಕ್ಕೆ ಮುನ್ನ ದಿನವಾದ ಮಂಗಳವಾರ ಮನೆ ಮನೆಗೆ ತೆರಳಿ ಮತಯಾಚಿಸಿದರು.

ಮಧ್ಯಾಹ್ನ 3 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ಮನೆ ಮನೆಗೆ ತೆರಳಿದ ಸೋಮಣ್ಣ, ಮತದಾರರನ್ನು ಭೇಟಿ ಮಾಡಿ ಚುನಾವಣೆಯಲ್ಲಿ ತನಗೆ ಮತ ನೀಡುವಂತೆ ಕೈ ಮುಗಿದು ವಿನಂತಿಸಿದರು. ಕ್ಷೇತ್ರದಲ್ಲಿ ಕಳೆದ 15 ವರ್ಷಗಳಿಂದ ಕಾಂಗ್ರೆಸ್ ಜಯಗಳಿಸಿದೆ. ನಿರೀಕ್ಷಿಸಿದ ಪ್ರಮಾಣದಲ್ಲಿ ನಗರ ಹಾಗೂ ಗ್ರಾಮೀಣ ಪ್ರದೇಶ ಅಭಿವೃದ್ಧಿ ಕಂಡಿಲ್ಲ. ಹೀಗಾಗಿ ಈ ಬಾರಿ ನನಗೆ ಅವಕಾಶ ಕಲ್ಪಿಸಿಕೊಡಿ ಎಂದು ಮತದಾರರಲ್ಲಿ ಮನವಿ ಮಾಡಿದರು. ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ಆರ್. ಸುಂದರ್, ನಗರ ಘಟಕದ ಅಧ್ಯಕ್ಷ ರಾಜು, ಎಪಿಎಂಸಿ ಅಧ್ಯಕ್ಷ ಮನೋಜ್ ಪಟೇಲ್, ಮುಖಂಡ ಕೆ. ವೀರಭದ್ರಸ್ವಾಮಿ ಉಪಸ್ಥಿತರಿದ್ದರು.

ಕಾಂಗ್ರೆಸ್ ಅಭ್ಯರ್ಥಿ ಪುಟ್ಟರಂಗಶೆಟ್ಟಿ ಸೇರಿ ನಾಲ್ವರ ವಿರುದ್ಧ ಪ್ರಕರಣ ದಾಖಲು

ಚಾಮರಾಜನಗರ, ಮೇ 9– ಚುನಾವಣಾ ನಿಯಮ ಉಲ್ಲಂಘನೆ ಆರೋಪದಡಿ ಕಾಂಗ್ರೆಸ್ ಅಭ್ಯರ್ಥಿ, ಶಾಸಕ ಸಿ. ಪುಟ್ಟರಂಗಶೆಟ್ಟಿ ಹಾಗೂ ನಾಲ್ವರು ಮುಖಂಡರ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ.

ಚಾಮರಾಜನಗರ ಕ್ಷೇತ್ರದ ಬಹುಜನ ಸಮಾಜ ಪಕ್ಷ (ಬಿಎಸ್‌ಪಿ) ಹಾಗೂ ಅದರ ಅಭ್ಯರ್ಥಿ ಹ.ರಾ.ಮಹೇಶ್ ಅವರನ್ನು ಅವಹೇಳನ ಮತ್ತು ಅವರ ವಿರುದ್ಧ ಅಪಪ್ರಚಾರ ಮಾಡಿರುವ ಆರೋಪದ ಅಡಿಯಲ್ಲಿ ಕಾಂಗ್ರೆಸ್ ಅಭ್ಯರ್ಥಿ, ಶಾಸಕ ಸಿ.ಪುಟ್ಟರಂಗಶೆಟ್ಟಿ ಹಾಗೂ ಜಿಲ್ಲಾ ಕಾಂಗ್ರೆಸ್ ಸಮಿತಿ ಉಪಾಧ್ಯಕ್ಷ ಬಿ.ಕೆ. ರವಿಕುಮಾರ್, ಮುಖಂಡ ಹಾಗೂ ಆದಿ ಕರ್ನಾಟಕ ಅಭಿವೃದ್ಧಿ ಸಂಘದ ಅಧ್ಯಕ್ಷ ಎಸ್. ನಂಜುಂಡಸ್ವಾಮಿ ಮತ್ತು ಮಾಜಿ ಸಂಸದ ಕಾಗಲವಾಡಿ ಶಿವಣ್ಣ ವಿರುದ್ಧ ದೂರು ದಾಖಲಾಗಿದೆ.

ಕ್ಷೇತ್ರದ ದಲಿತ ಸಮುದಾಯದ ಮತದಾರರನ್ನು ಉದ್ದೇಶಿಸಿ, ಆದಿ ಕರ್ನಾಟಕ ಅಭಿವೃದ್ಧಿ ಸಂಘದ ಅಧ್ಯಕ್ಷ ಎಸ್. ನಂಜುಂಡಸ್ವಾಮಿ ಹೆಸರಿನಲ್ಲಿ ಗಡಿಮನೆ ಯಜಮಾನರು ಹಾಗೂ ಕಟ್ಟೆಮನೆ ಯಜಮಾನರು, ಕುಲಸ್ಥರನ್ನೆಲ್ಲ ಉಲ್ಲೇಖಿಸಿ ಬರೆದ ಕರಪತ್ರವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತ್ತು. ಇದರ ಜೊತೆಗೆ, ಕಾಂಗ್ರೆಸ್ ಅಭ್ಯರ್ಥಿ ಸಿ. ಪುಟ್ಟರಂಗಶೆಟ್ಟಿ, ರವಿಕುಮಾರ್, ಕಾಗಲವಾಡಿ ಶಿವಣ್ಣ ಸೇರಿದಂತೆ ಇತರೆ ಮುಖಂಡರ ಸಮ್ಮುಖದಲ್ಲಿ ಎಸ್. ನಂಜುಂಡಸ್ವಾಮಿ ಅವರು ಬಿಎಸ್‌ಪಿಯವರನ್ನು ಋಣಾತ್ಮಕವಾಗಿ ಚಿತ್ರಿಸಿ ಮಾತನಾಡುತ್ತಿರುವ ವಿಡಿಯೋ ತುಣುಕು ಕೂಡ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತ್ತು.

ಕರಪತ್ರ ಹಾಗೂ ವಿಡಿಯೊ ತುಣುಕುಗಳನ್ನು ಉಲ್ಲೇಖಿಸಿ ಬಿಎಸ್‌ಪಿ ಅಭ್ಯರ್ಥಿ ಹ.ರಾ. ಮಹೇಶ್ ಅವರು ಶಾಸಕ ಹಾಗೂ ಇತರ ಮೂವರ ಹೆಸರು ಉಲ್ಲೇಖಿಸಿ ಚುನಾವಣಾ ಆಯೋಗಕ್ಕೆ ದೂರು ನೀಡಿದ್ದು, ಅದರ ಆಧಾರದಲ್ಲಿ ಫ್ಲೈಯಿಂಗ್ ಸ್ಕ್ವಾಡ್ ಅಧಿಕಾರಿ ಜಯಶಂಕರ್ ಚಾಮರಾಜನಗರ ಪೂರ್ವ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ. ಇದರ ಅನ್ವಯ ನಾಲ್ವರ ವಿರುದ್ಧ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ.

ಮಸ್ಟರಿಂಗ್ ಕೇಂದ್ರಗಳಲ್ಲಿ ಮತಯಂತ್ರಗಳ ಹಂಚಿಕೆ

ಚಾಮರಾಜನಗರ, ಮೇ 9– ವಿಧಾನ ಸಭೆ ಚುನಾವಣೆಗೆ ಅಂತಿಮ ಹಂತದ ಸಿದ್ಧತೆ ನಡೆಯುತ್ತಿದ್ದು, ಮಸ್ಟರಿಂಗ್ ಕೇಂದ್ರಗಳಿಂದ ಸಿಬ್ಬಂದಿಗೆ ಮಂಗಳವಾರ ಮತಯಂತ್ರಗಳ ಹಂಚಿಕೆ ಮಾಡಲಾಯಿತು.

ಜಿಲ್ಲೆಯ ನಾಲ್ಕು ವಿಧಾನಸಭಾ ಕ್ಷೇತ್ರಗಳಲ್ಲಿ ಸ್ಥಾಪಿಸಲಾಗಿರುವ ಮಸ್ಟರಿಂಗ್ ಕೇಂದ್ರದಿಂದ ಮತಯಂತ್ರಗಳನ್ನು ಪಡೆದುಕೊಂಡ ಸಿಬ್ಬಂದಿ ವಾಹನಗಳ ಮೂಲಕ ನಿಗದಿತ ಮತಗಟ್ಟೆಗೆ ತೆರಳಿದರು.

ಈಗಾಗಲೇ ಮತಗಟ್ಟೆಗಳು ಸಿದ್ಧಗೊಂಡಿದೆ. ಈ ನಿಟ್ಟಿನಲ್ಲಿ ಅಗತ್ಯವಿರುವ ಬ್ಯಾಲೆಟ್ ಯೂನಿಟ್, ಕಂಟ್ರೋಲ್ ಯೂನಿಟ್ ಹಾಗೂ ವಿವಿ ಪ್ಯಾಟ್‌ಗಳನ್ನು ವಿತರಿಸಲಾಯಿತು. ಇವುಗಳನ್ನು ಪಡೆದುಕೊಂಡ ಸಿಬ್ಬಂದಿ ತಮ್ಮ ನಿಗದಿತ ಮತಗಟ್ಟೆಗಳಿಗೆ ತೆರಳಿದರು. ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕೇಂದ್ರದಲ್ಲಿ ಬೆಳಗ್ಗೆಯಿಂದಲೇ ಸಿಬ್ಬಂದಿ ಆಗಮಿಸಿದ್ದರು. ಮಧ್ಯಾಹ್ನ 3.50ಕ್ಕೆ ಮತಗಟ್ಟೆ ಸಿಬ್ಬಂದಿಗೆ ಮತಯಂತ್ರಗಳನ್ನು ಹಂಚಿಕೆ ಮಾಡಲಾಯಿತು.

ಕೊಳ್ಳೇಗಾಲದಲ್ಲಿ 241 ಮತಗಟ್ಟೆ: 1168 ಮಂದಿ ನೇಮಕ



ಕೊಳ್ಳೇಗಾಲ, ಮೇ 9– ಜಿಲ್ಲೆಯಾದ್ಯಂತ ಸುಸೂತ್ರವಾಗಿ ಮತದಾನ ಪ್ರಕ್ರಿಯೆಗೆ ಕ್ರಮ ವಹಿಸಲಾಗಿದೆ. ಯಾವುದೇ ಮತಗಟ್ಟೆ ಸಿಬ್ಬಂದಿಗಳು ಹಾಗೂ ಅಧಿಕಾರಿಗಳಿಂದ ಲೋಪ ಕಂಡು ಬಂದಿಲ್ಲ, ಮತದಾನ ಯಶಸ್ವಿಯಾಗಿ ನಡೆಯಲು ಅಗತ್ಯ ಕ್ರಮಕೈಗೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ರಮೇಶ್ ತಿಳಿಸಿದರು.

ಕೊಳ್ಳೇಗಾಲದಲ್ಲಿ ಮತದಾನ ಕೇಂದ್ರದಲ್ಲಿ ಕರ್ತವ್ಯ ನಿರ್ವಹಿಸಲು ತೆರಳುವ ಬೂತ್ ಮಟ್ಟದ ಅಧಿಕಾರಿಗಳ ತಪಾಸಣೆ, ಕೇಂದ್ರ ಪರಿಶೀಲನೆ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿ, ಎಲ್ಲರೂ ತಪ್ಪದೆ ಮತದಾನದಲ್ಲಿ ಪಾಲ್ಗೊಳ್ಳಿ, ಚುನಾವಣೆಯಲ್ಲಿ ಪಾಲ್ಗೊಳ್ಳುವ ಸಿಬ್ಬಂದಿಗಳಿಗೆ ಯಾವುದೇ ರೀತಿಯ ಸಂದೇಹ ಬಂದರೂ ಸಹಾ ಅದನ್ನ ಪರಿಶೀಲಿಸಿ ಬಗೆಹರಿಸುವಂತೆ ಸಂಬಂಧಪಟ್ಟವರಿಗೆ ಸೂಚಿಸಲಾಗಿದೆ. ಲೋಪವಾಗದಂತೆ ಕರ್ತವ್ಯ ನಿರ್ವಹಿಸಲು ಸೂಚಿಸಲಾಗಿದೆ ಎಂದರು.

ಈ ವೇಳೆ ಉಪವಿಭಾಗಾಧಿಕಾರಿ ಗೀತಾ ಹುಡೇದ್ ಮಾತನಾಡಿ, 241 ಬೂತ್‌ಗಳಲ್ಲಿ ನಾಲ್ಕು ಮಂದಿ ಮತಗಟ್ಟೆ ಅಧಿಕಾರಿಗಳು ಸೇರಿದಂತೆ ಒಟ್ಟು 1168 ಸಿಬ್ಬಂದಿಗಳನ್ನು ನೇಮಕ ಮಾಡಲಾಗಿದೆ. ಚುನಾವಣಾ ಬಂದೋಬಸ್ತ್ ಹಿನ್ನೆಲೆ 600ಕ್ಕೂ ಅಧಿಕ ಪೊಲೀಸ್ ಸಿಬ್ಬಂದಿಗಳನ್ನು ನಿಯೋಜಿಸಲಾಗಿದೆ ಎಂದರು. ಚುನಾವಣಾ ಸಿಬ್ಬಂದಿಗಳನ್ನು ಕಳುಹಿಸಲು 36 ಬಸ್ ಹಾಗೂ ಕೆಲವು ಖಾಸಗಿ ವಾಹನಗಳ ಸೌಲಭ್ಯ ಕಲ್ಪಿಸಲಾಗಿದೆ.

241 ಮತಗಟ್ಟೆಗಳಿಗೆ ಅಗತ್ಯ ಸಿಬ್ಬಂದಿ ನೇಮಿಸಲಾಗಿದೆ. ಬೆಳಗ್ಗೆ 7ರಿಂದ 6ರವರೆಗೆ ಮತದಾನ, ಸರತಿ ಸಾಲಿನಲ್ಲಿ ನಿಂತು ಪ್ರತಿಯೊಬ್ಬರು ಹಕ್ಕು ಚಲಾಯಿಸಿ. ಚುನಾವಣಾ ಅಕ್ರಮ ಕಂಡು ಬಂದಲ್ಲಿ ಕಂಟ್ರೋಲ್ ರೂಂ ಸಂಖ್ಯೆ 08224152329ಗೆ ಕರೆ ಮಾಡಿ ತಿಳಿಸಬೇಕು. ಯಾವುದೇ ಅಕ್ರಮಗಳಿಗೆ ಅವಕಾಶವಿಲ್ಲ, ಎಲ್ಲರೂ ಮತದಾನದಲ್ಲಿ ಪಾಲ್ಗೊಳ್ಳುವ ಮೂಲಕ ತಮ್ಮದೆ ಹಕ್ಕು ಚಲಾಯಿಸಿ, ಮತಗಟ್ಟೆ ಕೇಂದ್ರದಲ್ಲಿ ಸಿಬ್ಬಂದಿಗಳಿಗೆ ಅಗತ್ಯ ಕ್ರಮಕೈಗೊಳ್ಳಲಾಗಿದ್ದು. ಪ್ರತಿ ಮತಗಟ್ಟೆಗೆ ಉಟೋಪಚಾರಕ್ಕಾಗಿ 1 ಸಾವಿರ ರೂ.ಗಳನ್ನು ಮೀಸಲಿರಿಸಲಾಗಿದೆ ಎಂದರು.

ಎಂ.ಸ್ಯಾಂಡ್‌ನಲ್ಲಿ ಬಚ್ಚಿಟ್ಟಿದ್ದ 50 ಲಕ್ಷ ವಶ



ಹೆಚ್.ಡಿ.ಕೋಟೆ, ಮೇ 9– ಮತದಾರರಿಗೆ ಹಂಚಲು ಎಂ.ಸ್ಯಾಂಡ್ ತುಂಬಿದ್ದ ಲಾರಿಯಲ್ಲಿ ಬಚ್ಚಿಟ್ಟಿದ್ದ 50 ಲಕ್ಷ ರೂ.ಗಳನ್ನು ಚುನಾವಣಾಧಿಕಾರಿಗಳು ವಶಪಡಿಸಿಕೊಂಡಿದ್ದಾರೆ. ತಾಲೂಕಿನ ಸವ್ವೆ ಗ್ರಾಮದ ನಿವಾಸಿ ಸಿದ್ದನಾಯಕ ಅವರ ತೋಟದ ಮನೆಯಲ್ಲಿ 50 ಲಕ್ಷ ರೂ.ಗಳನ್ನು ಬಚ್ಚಿಡಲಾಗಿದೆ ಎಂಬ ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿದ ಚುನಾವಣಾಧಿಕಾರಿಗಳು ಪರಿಶೀಲನೆ ನಡೆಸಿ, ಎಂ.ಸ್ಯಾಂಡ್ ತುಂಬಿದ್ದ ಲಾರಿಯಲ್ಲಿ ಬಚ್ಚಿಟ್ಟಿದ್ದ ಹಣವನ್ನು ವಶಕ್ಕೆ ಪಡೆಯಲಾಗಿದೆ. ಬಳಿಕ ಹಣವನ್ನು ತಾಲೂಕು ಕಚೇರಿಯಲ್ಲಿ ಇರಿಸಲಾಗಿದೆ. ಈ ಸಂಬಂಧ ಪಟ್ಟಣದ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದ್ದು, ಇದುವರೆಗೂ ಯಾರನ್ನೂ ಬಂಧಿಸಿಲ್ಲ ಎಂದು ಸಹಾಯಕ ಚುನಾವಣಾಧಿಕಾರಿ ಕುಮುದಾ ಶರತ್ ತಿಳಿಸಿದ್ದಾರೆ. ಹಣ ಬಚ್ಚಿಟ್ಟಿರುವ ವಿಷಯ ತಿಳಿಯುತ್ತಿದ್ದಂತೆ ಅಕ್ಕಪಕ್ಕದ ಗ್ರಾಮಸ್ಥರು ಸ್ಥಳದಲ್ಲಿ ಜಮಾಯಿಸಿದ್ದರು. ಈ ವೇಳೆ ತಹಸೀಲ್ದಾರ್ ಪಿ.ಎನ್.ಮಹೇಶ್, ವೃತ ನಿರೀಕ್ಷಕ ಶಬ್ಬೀರ್ ಹುಸೇನ್ ಉಪಸ್ಥಿತರಿದ್ದರು.

ಹೈ ವೋಲ್ಟೇಜ್ ವರುಣದಲ್ಲಿ 54 ಸೂಕ್ಷ್ಮ ಬೂತ್‌ಗಳು

ಅಡಿಷನಲ್ ಎಸ್ಪಿ, ಇಬ್ಬರು ಡಿವೈಎಸ್ಪಿ ಸೇರಿ ಹೆಚ್ಚು ಸಿಬ್ಬಂದಿ ನಿಯೋಜನೆ, ಭಾರೀ ಕಟ್ಟೆಚ್ಚರ



ಮೈಸೂರು,ಮೇ 9(ಆರ್‌ಕೆ)–ಇಡೀ ರಾಜ್ಯದ ಗಮನ ಸೆಳೆದಿರುವ ಮೈಸೂರಿನ ವರುಣ ಈಗ ಹೈವೋಲ್ಟೇಜ್ ವಿಧಾನಸಭಾ ಕ್ಷೇತ್ರವಾಗಿದೆ. ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಸಚಿವ ವಿ.ಸೋಮಣ್ಣ ಸ್ಪರ್ಧಿಸಿರುವ ಹಿನ್ನೆಲೆಯಲ್ಲಿ ಎಲ್ಲರ ಕಣ್ಣು ಇದರ ಮೇಲೆ ಬಿದ್ದಿದೆ. ಹೈವೋ ಲ್ಟೇಜ್ ಕ್ಷೇತ್ರದಲ್ಲಿ ಬಂದೋಬಸ್ತ್ ಕೂಡ ಹೈ ಆಗಿದೆ.

ವರುಣ ಕ್ಷೇತ್ರದಲ್ಲಿ ಮುಂಜಾಗ್ರತೆಯಾಗಿ ಭಾರೀ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಿ ಕಟ್ಟೆಚ್ಚರ ವಹಿಸಲಾಗಿದೆ ಎಂದು ಎಸ್ಪಿ ಸೀಮಾ ಲಾಟ್ಕರ್ ತಿಳಿಸಿದ್ದಾರೆ.

ಕ್ಷೇತ್ರದಲ್ಲಿರುವ 261 ಮತಗಟ್ಟೆಗಳ ಪೈಕಿ 54 ಮತ ಗಟ್ಟೆಗಳು ಕ್ರಿಟಿಕಲ್ ಎಂದು ಗುರುತಿಸಲಾಗಿದ್ದು, ಅವು ಗಳಿಗೆ ಓರ್ವ ಎಎಸ್‌ಐ, ಓರ್ವ ಹೆಡ್ ಕಾನ್‌ಸ್ಟೇಬಲ್ ಜೊತೆಗೆ ಒಬ್ಬೊಬ್ಬ ಶಸ್ತ್ರ ಸಜ್ಜಿತ ಅರೆಮಿಲಿಟರಿ ಪಡೆ ಸಿಬ್ಬಂದಿಯನ್ನು ನಿಯೋಜಿಸಿ, ವೆಬ್‌ಕಾಸ್ಟಿಂಗ್ ಮೂಲಕ ನಿರಂತರ ನಿಗಾ ವಹಿಸಲು ಸಿದ್ಧತೆ ಮಾಡಲಾಗಿದೆ ಎಂದರು.

ವರುಣ ಕ್ಷೇತ್ರದ ಕ್ರಿಟಿಕಲ್ ಮತಗಟ್ಟೆಗಳ ಮೇಲೆ ನಿಗಾ ವಹಿಸಲು ಅಡಿಷನಲ್ ಎಸ್ಪಿ, ಇಬ್ಬರು ಡಿವೈಎಸ್ಪಿಗಳನ್ನು ನಿಯೋಜಿಸಿದ್ದು, ಯಾವುದೇ ಗೊಂದಲ, ಗದ್ದಲ, ಗಲಾಟೆ ಯಾಗದಂತೆ ಕಟ್ಟೆಚ್ಚರ ವಹಿಸಲು ಜಿಲ್ಲಾ ಪೊಲೀಸ್ ಸರ್ವ ರೀತಿಯಲ್ಲಿ ಸಿದ್ಧತೆ ಮಾಡಿಕೊಂಡಿದೆ ಎಂದು ತಿಳಿಸಿದರು.

ಫ್ಲೈಯಿಂಗ್ ಸ್ಕ್ವಾಡ್, ಸೆಕ್ಟರ್ ಮೊಬೈಲ್ ಸ್ಕ್ವಾಡ್ ಜೊತೆಗೆ ತಾವೂ ಸಹ ವರುಣ ಕ್ಷೇತ್ರದಾದ್ಯಂತ ಗಸ್ತು ಮಾಡಿ ಬಂದೋಬಸ್ತ್ ಮೇಲ್ವಿಚಾರಣೆ ಮಾಡುವ ಜೊತೆಗೆ ಕ್ರಿಟಿಕಲ್ ಮತಗಟ್ಟೆಗಳಲ್ಲಿ ವೀಡಿಯೋ ರೆಕಾ ರ್ಡಿಂಗ್ ಮಾಡಿ ವೆಬ್ ಕಾಸ್ಟಿಂಗ್ ಮೂಲಕ ಇಡೀ ಮತದಾನ ಪ್ರಕ್ರಿಯೆ ಮೇಲೆ ತೀವ್ರ ನಿಗಾ ವಹಿಸಲಾಗುತ್ತಿದೆ ಎಂದು ಸೀಮಾ ಲಾಟ್ಕರ್ ತಿಳಿಸಿದರು.

ಜಿಲ್ಲೆಯಲ್ಲಿ ಒಟ್ಟು 385 ಕ್ರಿಟಿಕಲ್ ಮತಗಟ್ಟೆಗಳಲ್ಲೂ ವಿಶೇಷ ಬಂದೋಬಸ್ತ್ ಮಾಡಲಾಗಿದ್ದು, ಬುಡಕಟ್ಟು ಪ್ರದೇಶದ ಮತಗಟ್ಟೆ ಬಳಿಯೂ ಹೆಚ್ಚುವರಿ ಸಿಬ್ಬಂದಿ ನಿಯೋಜಿಸಿ ಮತದಾರರು ನಿರ್ಭೀತಿಯಿಂದ ಬಂದು ಮತ ಚಲಾಯಿಸಲು ಅನುಕೂಲವಾಗುವಂತೆ ಶಾಂತಿ ವಾತಾವರಣ ನಿರ್ಮಿಸಲು ಕ್ರಮ ವಹಿಸಲಾಗಿದೆ ಎಂದರು.

ಹೊರ ಜಿಲ್ಲೆಯವರು ಬಂದು ವಾಸ್ತವ್ಯ ಹೂಡಿ ಅಭ್ಯರ್ಥಿಗಳ ಪರ ಚುನಾವಣಾ ಪ್ರಚಾರ ಮಾಡುತ್ತಿದ್ದರು. ಹಾಗೂ ಭೀತಿಯ ವಾತಾವರಣ ಮೂಡಿಸುತ್ತಿದ್ದಾರೆಂಬ ದೂರುಗಳ ನ್ವಯ ವರುಣ ಕ್ಷೇತ್ರದಾದ್ಯಂತ ಪ್ರಮುಖ ರಸ್ತೆಗಳಲ್ಲಿ ಚೆಕ್ ಪೋಸ್ಟ್ ಮಾಡಿ ವಾಹನಗಳ ತಪಾಸಣೆ ನಡೆಸಲಾಗು ತ್ತಿದೆ. ನಿಷೇಧಾಜ್ಞೆ ಜಾರಿಯಲ್ಲಿರುವುದರಿಂದ ಕ್ಷೇತ್ರದ ಮತದಾರರಲ್ಲದವರು ಹೊರಗೆ ಹೋಗುವಂತೆ ಸೂಚಿಸ ಲಾಗಿದೆ ಎಂದರು. ಮೈಸೂರು ನಗರ ವ್ಯಾಪ್ತಿಯ ಕ್ಷೇತ್ರಗಳಲ್ಲಿ 180 ಕ್ರಿಟಿಕಲ್ ಮತ ಗಟ್ಟೆಗಳೆಂದು ಗುರುತಿಸಲಾ ಗಿದ್ದು, ವ್ಯಾಪಕ ಭದ್ರತೆ ಮಾಡಲಾಗಿದೆ. ಸೆಕ್ಟರ್ ಮೊಬೈಲ್ ಸ್ಕ್ವಾಡ್ ಮತ್ತು ಎಸಿಪಿ ಮಟ್ಟದ ಅಧಿಕಾರಿಗಳು ಭದ್ರತಾ ಮೇಲ್ವಿ ಚಾರಣೆ ನಡೆಸುವರು ಎಂದು ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ತಿಳಿಸಿದರು.

ಮೈಸೂರು ಮಿತ್ರ

ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ

ಮೈಸೂರು, ಮೇ 9– ಮೈಸೂರಿನ ಲಕ್ಷ್ಮೀಪುರಂನ ಪ್ರೀತಿ ಕ್ಯಾನ್ಸರ್ ಸೆಂಟರ್‌ನಲ್ಲಿ ಮೇ 11 ರಂದು ಬೆಳಿಗ್ಗೆ 10 ರಿಂದ ರಾತ್ರಿ 8 ಗಂಟೆಯವರೆಗೆ ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಮಾಹಿತಿಗೆ ದೂ. 0821–4259259 ಸಂಪರ್ಕಿಸಬಹುದು.

ಐದನೇ ಪುಟದಿಂದ

ಮತದಾನ

ಈಗಾಗಲೇ ತೆರಳಿದ್ದು, ಮತದಾನಕ್ಕೆ ಬೇಕಾದ ಅಗತ್ಯ ಸಿದ್ಧತೆ ಮಾಡಿಕೊಂಡಿದ್ದಾರೆ. ಶಾಂತಿಯುತ ಮತ್ತು ಮುಕ್ತ ಚುನಾವಣೆ ನಡೆಸಲು ಎರಡು ಸಾವಿರಕ್ಕೂ ಹೆಚ್ಚು ಐಎಎಸ್ ಹಾಗೂ ಐಪಿಎಸ್ ಅಧಿಕಾರಿಗಳನ್ನು ವಿವಿಧ ಹಂತಗಳಲ್ಲಿ ನಿಯೋಜಿಸಲಾಗಿದೆ. ಮತದಾನ ಮುಗಿದ ತಕ್ಷಣವೇ ಮತಯಂತ್ರಗಳನ್ನು ಆಯಾ ಕ್ಷೇತ್ರದ ನಿಗದಿತ ಸ್ಟ್ರಾಂಗ್ ರೂಂಗಳಿಗೆ ತಲುಪಿಸಿ ಮೇ 13 ರಂದು ಮತ ಎಣಿಕೆ ನಡೆಯುವವರೆಗೂ ಸೂಕ್ತ ಭದ್ರತೆ ಒದಗಿ ಸಲಾಗುತ್ತದೆ. ಮತದಾರರಿಗೆ ಅನುಕೂಲ ಮಾಡಿಕೊಡುವ ಹಿನ್ನೆಲೆಯಲ್ಲಿ ಎಲ್ಲಾ ಸರ್ಕಾರಿ, ಅರೆ ಸರ್ಕಾರಿ ಹಾಗೂ ಖಾಸಗಿ ವಲಯದ ಉದ್ಯೋಗಿಗಳಿಗೆ ವೇತನ ಸಹಿತ ರಜೆ ನೀಡಲಾಗಿದೆ. ನಿನ್ನೆ ಸಂಜೆಯೇ ಬಹಿರಂಗ ಚುನಾವಣಾ ಪ್ರಚಾರ ಅಂತ್ಯಗೊಳಿಸಿದ ಬೆನ್ನಲ್ಲೇ ಮದ್ಯ ಮಾರಾಟವನ್ನು ನಿಷೇಧಿಸಲಾಗಿದೆ. ಹಾಗೆಯೇ ಮತಗಟ್ಟೆಯ ಸುತ್ತಲಿನ 100 ಮೀ. ವ್ಯಾಪ್ತಿಯಲ್ಲಿ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ. ಅಭ್ಯರ್ಥಿಗಳು ತಮ್ಮ ಕೊನೆಯ ಹಂತದಲ್ಲಿ ಮತದಾರರನ್ನು ಓಲೈಸಿಕೊಳ್ಳಲು ನಾನಾ ರೀತಿಯ ಕಸರತ್ತು ನಡೆಸಿದ್ದಾರೆ.

ಮತದಾನಕ್ಕೆ ಸರ್ವ ವ್ಯವಸ್ಥೆ

ಹುಣಸೂರಿನಲ್ಲಿ 273, ಹೆಚ್.ಡಿ. ಕೋಟೆಯಲ್ಲಿ 282, ನಂಜನಗೂಡಲ್ಲಿ 249, ಚಾಮುಂಡೇಶ್ವರಿಯಲ್ಲಿ 337, ಕೆ.ಆರ್.ನಗರದಲ್ಲಿ 265, ಚಾಮರಾಜದಲ್ಲಿ 244, ಎನ್.ಆರ್.ನಲ್ಲಿ 282, ವರುಣಾದಲ್ಲಿ 261 ಹಾಗೂ ಟಿ.ನರಸೀಪುರ ಕ್ಷೇತ್ರದಲ್ಲಿ 227 ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ.

ಮಸ್ಟರಿಂಗ್ ಕಾರ್ಯ: ಮೈಸೂರಿನ ಕೆಆರ್, ಎನ್‌ಆರ್, ಚಾಮರಾಜ, ಚಾಮುಂಡೇಶ್ವರಿ ಸೇರಿದಂತೆ ಜಿಲ್ಲೆಯ 11 ಕ್ಷೇತ್ರಗಳ ಮತಗಟ್ಟೆಗಳಿಗೆ ವಿದ್ಯುನ್ಮಾನ ಮತಯಂತ್ರ, ಲೇಖನ ಸಾಮಗ್ರಿ, ಮತದಾನದ ಸಲಕರಣೆಗಳೊಂದಿಗೆ ಅಧಿಕಾರಿ, ಸಿಬ್ಬಂದಿ ಎಲ್ಲಾ ಸ್ಟ್ರಾಂಗ್ ರೂಂಗಳಿಂದ ಮಸ್ಟರಿಂಗ್ ಕಾರ್ಯ ಮುಗಿಸಿ ಇಂದು ನಿಯೋಜಿತ ಮತ ಗಟ್ಟೆಗಳಿಗೆ ತೆರಳಿದರು. ಪಿರಿಯಾಪಟ್ಟಣದ ಪುಷ್ಪ ವಿದ್ಯಾಸಂಸ್ಥೆ, ಕೆ.ಆರ್.ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಣಸೂರಿನ ಸೆಂಟ್ ಜೋಸೆಫ್ ಶಾಲೆ, ನಂಜನಗೂಡಿನ ಸರ್ಕಾರಿ ಪಿಯು ಕಾಲೇಜು, ಮೈಸೂರಿನ ಮಹಾರಾಣಿ ಕಲಾ ಕಾಲೇಜು, ಮಹಾರಾಜ ಕಾಲೇಜು ಶತಮಾನೋತ್ಸವ ಭವನ, ಬೇಡನ್ ಪೊವೆಲ್ ಶಾಲೆ, ಊಟಿ ರಸ್ತೆಯ ಜೆಎಸ್‌ಎಸ್ ಕಾಲೇಜು, ನಂಜನಗೂಡು ತಾಲೂಕಿನ ದೇವೀರಮ್ಮನಹಳ್ಳಿಯ ಜೆಎಸ್‌ಎಸ್ ಪ್ರಥಮ ದರ್ಜೆ ಕಾಲೇಜು ಹಾಗೂ ಟಿ. ನರಸೀಪುರದ ವಿದ್ಯೋದಯ ಶಿಕ್ಷಣ ಸಂಸ್ಥೆಯಲ್ಲಿ ಇಂದು ಬೆಳಗ್ಗೆ 8 ರಿಂದ ಮಧ್ಯಾಹ್ನ 3 ಗಂಟೆಯವರೆಗೆ ಮಸ್ಟರಿಂಗ್ ಕಾರ್ಯ ನಡೆಯಿತು.

143 ಅಭ್ಯರ್ಥಿಗಳು: ಮೈಸೂರು ಜಿಲ್ಲೆಯ 11 ಕ್ಷೇತ್ರಗಳಲ್ಲೂ ಬಿಜೆಪಿ, ಕಾಂಗ್ರೆಸ್, ಜೆಡಿಎಸ್, ಎಎಪಿ, ಎಸ್‌ಡಿಪಿಐ, ಬಿಎಸ್‌ಪಿ ಸೇರಿದಂತೆ ಇತರ ಎಲ್ಲಾ ಪಕ್ಷಗಳು, ಪಕ್ಷೇತರರು ಸೇರಿದಂತೆ ಬುಧವಾರ ನಡೆಯಲಿರುವ ಚುನಾವಣೆಯಲ್ಲಿ ಒಟ್ಟು 143 ಅಭ್ಯರ್ಥಿಗಳು ಸ್ಪರ್ಧಾಕಣದಲ್ಲಿದ್ದಾರೆ. ತಿ.ನರಸೀಪುರ ಕ್ಷೇತ್ರದಲ್ಲಿ 12, ವರುಣಾದಲ್ಲಿ 15, ಎನ್‌ಆರ್‌ನಲ್ಲಿ 17, ಚಾಮರಾಜದಲ್ಲಿ 14, ಕೆಆರ್‌ನಲ್ಲಿ 17, ಚಾಮುಂಡೇಶ್ವರಿಯಲ್ಲಿ 14, ನಂಜನಗೂಡಿನಲ್ಲಿ 12, ಹೆಚ್.ಡಿ. ಕೋಟೆಯಲ್ಲಿ 12, ಹುಣಸೂರಲ್ಲಿ 12, ಕೆ.ಆರ್.ನಗರದಲ್ಲಿ 8 ಹಾಗೂ ಪಿರಿಯಾಪಟ್ಟಣದಲ್ಲಿ 10 ಮಂದಿ ಅಭ್ಯರ್ಥಿಗಳು ಸ್ಪರ್ಧಿಸಿದ್ದಾರೆ.

ವಿದ್ಯುನ್ಮಾನ ಮತಯಂತ್ರಗಳು: ಜಿಲ್ಲೆಯಾದ್ಯಂತ ಎಲ್ಲಾ 2905 ಮತಗಟ್ಟೆಗಳಿಗೆ 5620 ಬ್ಯಾಲೆಟ್ ಯೂನಿಟ್, 3936 ಕಂಟ್ರೋಲ್ ಯೂನಿಟ್ ಹಾಗೂ 4,266 ವಿವಿ ಪ್ಯಾಟ್‌ಗಳನ್ನು ಪೂರೈಸಿದ್ದು, ಇಂದು ಸಂಜೆ ಮತಗಟ್ಟೆಗಳಲ್ಲಿ ವಿದ್ಯುನ್ಮಾನ ಮತಯಂತ್ರಗಳನ್ನು ಅಳವಡಿಸಿ ಅವುಗಳ ಕಾರ್ಯ ನಿರ್ವಹಣೆ ಬಗ್ಗೆ ಅಧಿಕಾರಿಗಳು ಖಾತರಿಪಡಿಸಿಕೊಂಡಿದ್ದಾರೆ. ಮತಗಟ್ಟೆಗಳ 200ಮೀ.ವ್ಯಾಪ್ತಿಯಲ್ಲಿ ಅಭ್ಯರ್ಥಿಗಳ ಬೂತ್‌ಗಳನ್ನು ಸ್ಥಾಪಿಸಿ ಮತದಾರರಿಗೆ ಅನುಕೂಲವಾಗುವಂತೆ ಮಾಹಿತಿ ಚೀಟಿಗಳನ್ನು ಮಾತ್ರ ನೀಡಲು ಅವಕಾಶ ಕಲ್ಪಿಸಲಾಗಿದೆ. ಆದರೆ ಅಭ್ಯರ್ಥಿಗಳ ಫೋಟೋ, ಚಿನ್ಹೆಯ ಬ್ಯಾನರ್‌ಗಳನ್ನು ಪ್ರದರ್ಶಿಸುವಂತಿಲ್ಲ.

ಮಂಡ್ಯ: ಜಿಲ್ಲೆಯ 7 ವಿಧಾನಸಭಾ ಕ್ಷೇತ್ರಗಳಲ್ಲಿ 319 ಸೂಕ್ಷ್ಮ ಮತಗಟ್ಟೆ, 1479 ಸಾಮಾನ್ಯ ಮತಗಟ್ಟೆ ಸೇರಿದಂತೆ ಒಟ್ಟು 1798 ಮತಗಟ್ಟೆಗಳನ್ನು ಸ್ಥಾಪಿಸಲಾಗಿದ್ದು, 759323 ಪುರುಷರು, 774363 ಮಹಿಳೆಯರು, 145 ಮಂದಿ ಇತರರು ಸೇರಿದಂತೆ 15,33,831 ಮಂದಿ ಮತ ಚಲಾಯಿಸಲಿದ್ದಾರೆ.

ಜಿಲ್ಲೆಯಲ್ಲಿ ಅಂಚೆ ಮತದಾನಕ್ಕೆ 12,674 ಮಂದಿಗೆ ಒಪ್ಪಿಗೆ ನೀಡಿದ್ದು, ಈ ಪೈಕಿ 10,075 ಜನರು ಅಂಚೆ ಮತದಾನ ಮಾಡಿದ್ದು, 2502 ಮಂದಿ 80 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರು, 759 ವಿಕಲ ಚೇತನರು, 188 ಅಗತ್ಯ ಸೇವಾ ವಲಯ, 6626 ಪೋಲಿಂಗ್ ಅಧಿಕಾರಿಗಳು ಸೇರಿದಂತೆ ಒಟ್ಟು 10,075 ಅಂಚೆ ಮತದಾನ ಮಾಡಿದ್ದಾರೆ.

ಚಾಮರಾಜನಗರ: ಜಿಲ್ಲೆಯ ನಾಲ್ಕು ವಿಧಾನಸಭಾ ಕ್ಷೇತ್ರಗಳಿಗೆ ಬುಧವಾರ ಮತದಾನ ನಡೆಯಲಿದ್ದು, ಕಣದಲ್ಲಿರುವ 61 ಅಭ್ಯರ್ಥಿಗಳ ರಾಜಕೀಯ ಭವಿಷ್ಯವನ್ನು 8.61 ಲಕ್ಷ ಮತದಾರರು ಬರೆಯಲಿದ್ದಾರೆ. ಚಾಮರಾಜನಗರ ಜಿಲ್ಲೆಯಲ್ಲಿ 4,26,547 ಪುರುಷ, 4,34,873 ಮಹಿಳೆ ಹಾಗೂ 69 ಇತರರು ಸೇರಿದಂತೆ ಒಟ್ಟು 8,61,489 ಮತದಾರರಿದ್ದಾರೆ. ಈ ಪೈಕಿ ಹನೂರಿನಲ್ಲಿ ಅತಿ ಹೆಚ್ಚು 2,21,557 ಮತದಾರರಿದ್ದಾರೆ. ಉಳಿದಂತೆ ಕೊಳ್ಳೇಗಾಲದಲ್ಲಿ 2,16,602, ಗುಂಡ್ಲುಪೇಟೆಯಲ್ಲಿ 2,13,836 ಹಾಗೂ ಚಾಮರಾಜನಗರ ವಿಧಾನಸಭಾ ಕ್ಷೇತ್ರದಲ್ಲಿ 2,09,494 ಮಂದಿ ಮತದಾರರಿದ್ದು, ಜಿಲ್ಲೆಯಲ್ಲಿ ಒಟ್ಟು 982 ಮತಗಟ್ಟೆಗಳಲ್ಲಿ ಮತದಾನ ನಡೆಯಲಿದೆ.

ಕೊಡಗು: ಮಡಿಕೇರಿ ಕ್ಷೇತ್ರದಲ್ಲಿ ಒಟ್ಟು 2,32,148 ಮತ ದಾರರಿದ್ದು, ವಿರಾಜಪೇಟೆ ಕ್ಷೇತ್ರದಲ್ಲಿ 2,24,165 ಮತದಾರರಿದ್ದಾರೆ. ಮಡಿಕೇರಿ ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಿಸಿ ದಂತೆ ಒಟ್ಟು 15 ಮಂದಿ ಕಣದಲ್ಲಿದ್ದರೆ, ವಿರಾಜ ಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ಒಟ್ಟು 9 ಮಂದಿ ಸ್ಪರ್ಧೆಯಲ್ಲಿದ್ದಾರೆ. ಮಡಿಕೇರಿ ಕ್ಷೇತ್ರದಲ್ಲಿ 269 ಮತಗಟ್ಟೆಗಳು, ವಿರಾಜಪೇಟೆಯಲ್ಲಿ 273 ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ.

ಹಾಸನ: ಶ್ರವಣಬೆಳಗೊಳ, ಅರಸೀಕೆರೆ, ಬೇಲೂರು, ಹಾಸನ, ಹೊಳೆನರಸೀಪುರ, ಅರಕಲಗೂಡು ಹಾಗೂ ಸಕಲೇಶಪುರ ಸೇರಿ 7 ವಿಧಾನಸಭಾ ಕ್ಷೇತ್ರಗಳಲ್ಲಿ ಒಟ್ಟು 1997 ಮತಗಟ್ಟೆಗಳನ್ನು ತೆರೆಯಲಾಗಿದ್ದು, 10 ಸಾವಿರಕ್ಕೂ ಹೆಚ್ಚು ಸಿಬ್ಬಂದಿಯನ್ನು ನಿಯೋಜಿ ಸಲಾಗಿದೆ. 27,135 ಯುವ ಮತದಾರರು ಸೇರಿ ಒಟ್ಟು 14,85,212 ಮತದಾರರಿದ್ದಾರೆ. ಮತದಾನ ಪ್ರಮಾಣ ಸುಧಾರಣೆ ದೃಷ್ಟಿಯಿಂದ ವಿಶೇಷ ಮತಗಟ್ಟೆಗಳನ್ನು ಸ್ಥಾಪಿಸಲಾಗಿದ್ದು, ಜಿಲ್ಲೆಯಾದ್ಯಂತ ಬಿಗಿ ಬಂದೋಬಸ್ತ್ ಮಾಡಲಾಗಿದೆ.

375 ಕೋಟಿ ರೂ. ನಗದು, ಭಾರಿ ವಸ್ತು ವಶ

ಮಾಹಿತಿ ನೀಡಿದೆ. ಕರ್ನಾಟಕದಲ್ಲಿ ಮಾದರಿ ನೀತಿ ಸಂಹಿತೆ ಜಾರಿಯಾದ ನಂತರ 288 ಕೋಟಿ ರೂ. ಮೌಲ್ಯದ ಆಸ್ತಿಯನ್ನು ಜಪ್ತಿ ಮಾಡಿದೆ. ಬಹಿರಂಗ ಪ್ರಚಾರ ಅಂತ್ಯಗೊಂಡ ನಂತರ ಚುನಾವಣಾ ಆಯೋಗ ಈ ಮಾಹಿತಿ ಬಹಿರಂಗಪಡಿಸಿದೆ. 2018 ರ ವಿಧಾನಸಭಾ ಚುನಾವಣೆಗೆ ಹೋಲಿಸಿದರೆ ಗಮನಾರ್ಹ ರೀತಿಯಲ್ಲಿ 4.5 ಪಟ್ಟು ಹೆಚ್ಚಾಗಿದೆ. ಈ ಬಾರಿಯ ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಅಕ್ರಮ ವಸ್ತುಗಳ ಸಾಗಾಟ ಕುರಿತು ಪರಿಶೀಲಿಸಲಾಗಿದ್ದು, 147.46 ಕೋಟಿ ರೂ. ನಗದು ಮತ್ತು 83.66 ಕೋಟಿ ರೂಪಾಯಿ ಮೌಲ್ಯದ ಮದ್ಯವನ್ನು ವಶಪಡಿಸಿ ಕೊಳ್ಳಲಾಗಿದೆ. 23.6 ಕೋಟಿ ಮೌಲ್ಯದ ಔಷಧಗಳು, 96.6 ಕೋಟಿ ಮೌಲ್ಯದ ಲೋಹಗಳು ಮತ್ತು 24.21 ಕೋಟಿ ಮೌಲ್ಯದ ಉಡುಗೊರೆಗಳು ಸೇರಿವೆ. 2023ರಲ್ಲಿ ಒಟ್ಟು 375 ಕೋಟಿ ರೂ.ಗೂ ಅಧಿಕ ಮೊತ್ತದ ನಗದು ಹಾಗೂ ವಸ್ತುಗಳನ್ನು ವಶ ಪಡಿಸಿಕೊಳ್ಳಲಾಗಿದೆ. ಇದು 2018ರ ವಿಧಾನಸಭೆ ಚುನಾವಣೆಯಲ್ಲಿ 83.93 ಕೋಟಿ ರೂ ವಶಪಡಿಸಿಕೊಳ್ಳಲಾಗಿತ್ತು. ಅಂದರೆ 4.5 ಪಟ್ಟು ಹೆಚ್ಚಳ.

ಮತದಾನಕ್ಕೆ ಅಡ್ಡಿ ಸಂಭವ

ಹಾಗೂ ಕೊಡಗು, ಮಂಡ್ಯ, ಚಾಮರಾಜನಗರ ಜಿಲ್ಲೆಗಳಲ್ಲಿ ಮೇ 10ರಿಂದ ಮೇ 14ರವರೆಗೆ ಮೋಡ ಕವಿದ ವಾತಾವರಣ ಇರಲಿದ್ದು, ಜೊತೆಗೆ ತುಂತುರುವಿನಿಂದ ಕೂಡಿದ ಸಾಧಾರಣ ಮಳೆ ಬರುವ ಸಂಭವವಿದೆ. ಮೈಸೂರು ಜಿಲ್ಲೆಗೆ ಸಂಬಂಧಿ ಸಿದಂತೆ ಗರಿಷ್ಠ ಉಷ್ಣಾಂಶ 34ರಿಂದ 36 ಡಿಗ್ರಿ ಸೆಲ್ಸಿಯಸ್ ಮತ್ತು ಕನಿಷ್ಠ ಉಷ್ಣಾಂಶ 21ರಿಂದ 23 ಡಿಗ್ರಿ ಸೆಲ್ಸಿಯಸ್‌ವರೆಗೆ ದಾಖಲಾಗುವ ಸಾಧ್ಯತೆ ಇದೆ. ಬೆಳಗಿನ ಗಾಳಿಯ ತೇವಾಂಶ ಶೇ.93ರಿಂದ 95ರವರೆಗೆ ಮತ್ತು ಮಧ್ಯಾಹ್ನದ ತೇವಾಂಶ ಶೇ.60ರಿಂದ 62ರವರೆಗೆ ಮತ್ತು ಗಾಳಿಯು ಗಂಟೆಗೆ 1ರಿಂದ 4 ಕಿ.ಮೀ. ವೇಗದಲ್ಲಿ ಬೀಸುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಈ ಸಂಬಂಧ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ನಾಗನಹಳ್ಳಿ ಸಾವಯವ ಕೃಷಿ ಸಂಶೋಧನಾ ಕೇಂದ್ರದ ಪ್ರಾಧ್ಯಾಪಕ ಪ್ರೊ.ಗೋವಿಂದರಾಜು, ಮೋಕಾ ಚಂಡಮಾರುತ ಬೇರೆಡೆಗೆ ತಿರುವು ಪಡೆದಿದೆ. ಹೀಗಾಗಿ ನಿರಂತರ ಮಳೆಯಾಗುವ ಸಾಧ್ಯತೆ ಇಲ್ಲ. ಸದರಿ ಚಂಡಮಾರುತದ ಪರಿಣಾಮ ಮೈಸೂರು ಸೇರಿದಂತೆ ರಾಜ್ಯಕ್ಕೆ ಇಲ್ಲ. ಅಲ್ಲಲ್ಲಿ ಸಾಧಾರಣ ಮಳೆ ಯಾವುದಾದರೂ ಸಂದರ್ಭದಲ್ಲಿ ಆಗುಬಹುದು ಎಂದು ಹೇಳಿದರು. ಗಾಳಿ ರಾಜ್ಯದ ಹೊರತಾದ ದಿಕ್ಕಿನಲ್ಲಿ ಬೀಸಿದ ಹಿನ್ನೆಲೆಯಲ್ಲಿ ಮೋಕಾ ಚಂಡಮಾರುತ ತಿರುವು ಪಡೆದಿದೆ. ಒಡಿಶಾ ಮತ್ತು ಆಂಧ್ರ ಪ್ರದೇಶದ ವಿಶಾಖಪಟ್ಟಣ ಭಾಗಕ್ಕೆ ಈ ಚಂಡಮಾರುತದ ಪರಿಣಾಮ ಇರಲಿದ್ದು, ನಮ್ಮ ರಾಜ್ಯಕ್ಕಿಲ್ಲ. ಮೋಡ ಕಟ್ಟುವ ಆಧಾರದಲ್ಲಿ ಬೆಳಗ್ಗೆಯ ಸಂದರ್ಭ ಇಲ್ಲವೇ ಸಂಜೆ ಸಮಯದಲ್ಲಿ ಸಾಧಾರಣ ಮಳೆಯಾಗುಬಹುದು. ಗಾಳಿ–ಮಳೆ ಎರಡೂ ನಿರಂತರವಾಗಿ ಒಂದಷ್ಟು ದಿನಗಳವರೆಗೆ ಹಗಲು–ರಾತ್ರಿ ಇರುವುದು ಚಂಡಮಾರುತದ ಲಕ್ಷಣ ಎಂದು ತಿಳಿಸಿದರು.

ಚಾಮುಂಡೇಶ್ವರಿ ದರ್ಶನ ಪಡೆದ ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್

● ಮಾಜಿ ಸಚಿವ ಕೆ.ಜೆ.ಜಾರ್ಜ್, ಇನ್ನಿತರೆ ನಾಯಕರು, ಕಾರ್ಯಕರ್ತರು ಸಾಥ್ ● ಚುನಾವಣೆಗೂ ಮುನ್ನ ದೈವದ ಮೊರೆ ಹೋದ ಕಾಂಗ್ರೆಸ್ ನಾಯಕರು ● ಛಿದ್ರಗೊಂಡ ಈಡುಗಾಯಿ; ಶುಭ ಸಂಕೇತವೆಂದ ಕಾರ್ಯಕರ್ತರು





ಮೈಸೂರು,ಮೇ 9(ಎಂಟಿವೈ)– ಮತ ದಾನದ ಮುನ್ನ ದಿನವಾದ ಮಂಗಳ ವಾರ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವ ಕುಮಾರ್, ಮಾಜಿ ಸಚಿವ ಕೆ.ಜೆ.ಜಾರ್ಜ್ ಸೇರಿದಂತೆ ಇನ್ನಿತರರು ಚಾಮುಂಡಿಬೆಟ್ಟಕ್ಕೆ ಆಗಮಿಸಿ ನಾಡದೇವಿ ಶ್ರೀ ಚಾಮುಂಡೇ ಶ್ವರಿಗೆ ವಿಶೇಷ ಪೂಜೆ ಸಲ್ಲಿಸಿ, ಚುನಾ ವಣೆಯಲ್ಲಿ ಗೆಲುವಿಗಾಗಿ ಪ್ರಾರ್ಥಿಸಿದರು.

ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ವಾಸ್ತವ್ಯ ಹೂಡಿದ್ದ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಲು ಬೆಂಗಳೂರಿಂದ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹಾಗೂ ಮಾಜಿ ಸಚಿವ ಕೆ.ಜೆ.ಜಾರ್ಜ್ ಹಾಗೂ ಇನ್ನಿತರರು ಆಗಮಿಸಿದರು. ಬಳಿಕ ಕೆಲ ಸಮಯ ಸಿದ್ದ ರಾಮಯ್ಯ ಅವರೊಂದಿಗೆ ಚರ್ಚಿಸಿದರು. ನಂತರ ಚಾಮುಂಡಿಬೆಟ್ಟಕ್ಕೆ ತೆರಳಿದರು.

ದೇವಿಗೆ ವಿಶೇಷ ಪೂಜೆ: ಚಾಮುಂಡಿ ಬೆಟ್ಟಕ್ಕೆ ಆಗಮಿಸಿದ ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್, ಕೆ.ಜೆ.ಜಾರ್ಜ್ ಅವರನ್ನು ದೇವಾಲಯ ಪ್ರಧಾನ ಆಗಮಿಕ ಡಾ.ಎನ್.ಶಶಿಶೇಖರ್ ದೀಕ್ಷಿತ್ ಬರಮಾಡಿಕೊಂಡರು. ನಂತರ ಅರ್ಚನೆ ಮಾಡಿ, ವಿಶೇಷ ಪೂಜೆ ಮಾಡಿ, ಮೂವರಿಗೂ ಹಾರ ಹಾಕಿ ಶುಭ ಕೋರಿದರು. ಬಳಿಕ ಉತ್ಸವ ಮೂರ್ತಿ ಇಟ್ಟಿರುವ ರುದ್ರಾಕ್ಷಿ ಮಂಟಪದ ಬಳಿ ಕಾಂಗ್ರೆಸ್ ಗ್ಯಾರಂಟಿ ಕಾರ್ಡ್ ಇಟ್ಟು ಪೂಜೆ ಮಾಡಿಸಿದರು. ಈ ಚುನಾವಣೆಯಲ್ಲಿ ರಾಜ್ಯದಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳ ಮೇಲೆ ದೈವಿ ಕೃಪೆ ಇರಲೆಂದು ಪ್ರಾರ್ಥಿಸಿದರು.

ಒಡೆದ ಈಡುಗಾಯಿ: ದೇವಿ ದರ್ಶನ ಪಡೆದ ಬಳಿಕ ದೇವಾಲಯದ ಹೊರಗೆ ಬಂದ ಕಾಂಗ್ರೆಸ್ ನಾಯಕರು ದೇವಾ ಲಯದ ಮುಂದೆ ಈಡುಗಾಯಿ ಹೊಡೆದರು. ಮೊದಲಿಗೆ ಮಾಜಿ ಸಿಎಂ ಸಿದ್ದರಾಮಯ್ಯ ಒಡೆದ ಈಡುಗಾಯಿ ಎರಡು ಹೋಳಾಯಿತು. ಬಳಿಕ ಮತ್ತೊಂದು ಕಾಯಿ ಹೊಡೆದರು. ಆ ಕಾಯಿಯೂ ಪೀಸ್ ಪೀಸ್ ಆಯಿತು. ಆ ನಂತರ ಡಿ.ಕೆ. ಶಿವಕುಮಾರ್ ಒಂದಾದ ಮೇಲೊಂದ ರಂತೆ 3–4 ತೆಂಗಿನಕಾಯಿ ಒಡೆದರು. ಎಲ್ಲವೂ ಛಿದ್ರಗೊಂಡವು. ಇದನ್ನು ಗಮನಿಸಿದ ಪಕ್ಷದ ಕಾರ್ಯಕರ್ತರು ಈಡುಗಾಯಿ ಈ ರೀತಿ ಹೋಳಾಗಿದ್ದು ಶುಭ ಸೂಚಕ ಎಂದು ಸಂಭ್ರಮಿಸಿದರು.

ಅಧಿಕಾರಕ್ಕೆ ಬಂದೇ ಬರುತ್ತೇವೆ: ದೇವಿ ದರ್ಶನ ಪಡೆದ ಬಳಿಕ ಪತ್ರಕರ್ತರೊಂದಿಗೆ ಮಾತನಾಡಿದ ವಿಪಕ್ಷ ನಾಯಕ ಸಿದ್ದರಾಮಯ್ಯ, ಈ ಬಾರಿ ರಾಜ್ಯದಲ್ಲಿ ಕಾಂಗ್ರೆಸ್ ಪರ ಪೂರಕವಾದ ಅಲೆ ಇದೆ. ಜನ ಬಿಜೆಪಿ ಸರ್ಕಾರದ ಭ್ರಷ್ಟಾಚಾರ ದಿಂದ ಬೇಸತ್ತಿದ್ದಾರೆ. ಜನಪರವಾದ ಸರ್ಕಾರದ ನಿರೀಕ್ಷೆಯಲ್ಲಿದ್ದಾರೆ. ಈ ಹಿನ್ನೆಲೆಯಲ್ಲಿ ನಾವು ನೆನ್ನೆ ಸಂಜೆ 6 ಗಂಟೆವರೆಗೂ ಪ್ರಚಾರ ಮಾಡಿದ್ದೇವೆ. ಇಂದು ನಾನು ಮತ್ತು ಡಿ.ಕೆ. ಶಿವಕುಮಾರ್ ತಾಯಿ ಚಾಮುಂಡೇಶ್ವರಿ ದರ್ಶನ ಪಡೆದು ಆಶೀರ್ವಾದ ಪಡೆಯಲು ಬಂದಿದ್ದೇವೆ ಎಂದರು.

ಕಾಂಗ್ರೆಸ್‌ಗೆ ಜನ ಆಶೀರ್ವಾದ ಮಾಡುವ ಆಶಯ ಇದೆ. ಜನ ಬದಲಾವಣೆ ತೀರ್ಪು ನೀಡುತ್ತಾರೆ. ನಾವಿಬ್ಬರೂ ಒಟ್ಟಿಗೆ ಪ್ರಾರ್ಥನೆ ಮಾಡಿದ್ದೇವೆ. 150 ಸ್ಥಾನ ಬರಲಿ ಎಂದು ಪ್ರಾರ್ಥಿಸಿದ್ದೇವೆ. ದೊಡ್ಡ ಅಂತರದಲ್ಲಿ ಗೆಲ್ಲುವ ಆಶಯ ಇದೆ. ಈಗಾಗಲೇ ಮತದಾರರಿಗೆ ಗ್ಯಾರಂಟಿ ಕಾರ್ಡ್ ನೀಡಿದ್ದೇವೆ. ನಮ್ಮ ಮೊದಲ ಸಚಿವ ಸಂಪುಟ ಸಭೆಯಲ್ಲಿ ನಾವು ಕೊಟ್ಟ ಗ್ಯಾರಂಟಿಗಳನ್ನು ಜಾರಿಗೊಳಿಸುತ್ತೇವೆ. ನಮಗೆ ಎಲ್ಲಾ ಗ್ಯಾರಂಟಿಗಳನ್ನು ಈಡೇರಿಸುವ ಶಕ್ತಿ ಕೊಡಲೆಂದು ಪ್ರಾರ್ಥನೆ ಮಾಡಿದ್ದೇವೆ ಎಂದರು.

ಜನರ ದುಃಖ ನಿವಾರಿಸುತ್ತೇವೆ: ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮಾತನಾಡಿ, ಇಡೀ ರಾಜ್ಯದಲ್ಲಿ ಜನರ ಸಂಕಷ್ಟ, ದುಃಖವೆಲ್ಲವನ್ನು ದೂರ ಮಾಡುವಂತೆ ನಾಡದೇವಿಗೆ ಪ್ರಾರ್ಥನೆ ಸಲ್ಲಿಸಿದ್ದೇವೆ. ರಾಜ್ಯದ ಬಿಜೆಪಿ ಸರ್ಕಾರದ ಬಗ್ಗೆ ಜನರಿಗೆ ಇರುವ ದುಃಖವನ್ನು ದೇವಿ ದೂರ ಮಾಡು ತ್ತಾಳೆ ಎಂಬ ನಂಬಿಕೆ ಇದೆ. ಮನಸ್ಸಿದ್ದಲ್ಲಿ ಮಾರ್ಗ, ಭಕ್ತಿ ಇದ್ದಲ್ಲಿ ಭಗವಂತ ಇದ್ದಾನೆ. ಭಕ್ತಿ ಪೂರ್ವಕವಾಗಿ ಪ್ರಾರ್ಥನೆ ಮಾಡಿದ್ದೇವೆ ಮೇ 14ರ ನಂತರ ಶುಭದಿನ ಬಂದೇ ಬರುತ್ತದೆ ಎಂದು ಅವರು ಹೇಳಿದರು.

ಈ ಸಂದರ್ಭದಲ್ಲಿ ವಿಧಾನಪರಿಷತ್ ಸದಸ್ಯ ದಿನೇಶ್ ಗೂಳಿಗೌಡ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್, ನಗರಾಧ್ಯಕ್ಷ ಆರ್.ಮೂರ್ತಿ ಸೇರಿದಂತೆ ಹಲವು ಭಾಗವಹಿಸಿದ್ದರು.

ಕೆಲಸ ಇಲ್ಲದ ಬಿಜೆಪಿಯವರಿಂದ ಸಿದ್ದರಾಮಯ್ಯ ಹೆಸರಲ್ಲಿ ನನ್ನ ವಿರುದ್ಧ ನಕಲಿ ಪತ್ರ ಸೃಷ್ಟಿ: ಡಿ.ಕೆ.ಶಿವಕುಮಾರ್



ಬೆಂಗಳೂರು: ಬಿಜೆಪಿ ನಾಯಕರಿಗೆ ಮಾಡಲು ಕೆಲಸ ಇಲ್ಲ. ಚುನಾವಣೆಯಲ್ಲಿ ಸೋಲುವ ಭೀತಿಯಿಂದ ಸಿದ್ದರಾಮಯ್ಯ ಅವರ ಹೆಸರಲ್ಲಿ ನನ್ನ ವಿರುದ್ಧ ನಕಲಿ ಪತ್ರ ಸೃಷ್ಟಿಸಿದ್ದಾರೆಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ ಶಿವಕುಮಾರ್ ಮಂಗಳವಾರ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಿದ್ದರಾಮಯ್ಯ ಅವರು ನನ್ನ ವಿರುದ್ಧ ಈ ರೀತಿಯ ಯಾವ ಕಾರಣಕ್ಕೆ ಪತ್ರ ಬರೆಯುತ್ತಾರೆ. ಅವರು ಎಲ್ಲಾ ಕ್ಷೇತ್ರಗಳಲ್ಲಿ ಪ್ರಚಾರ ಮಾಡಿ ಮೊನ್ನೆಯಷ್ಟೇ ನಾವಿಬ್ಬರೂ ಸೇರಿ ಅಭಿಪ್ರಾಯ ಹಂಚಿಕೊಂಡಿದ್ದೇವೆ ಈಗಲೂ ಅದನ್ನೇ ನಾವಿಬ್ಬರೂ ಮಾಡುತ್ತಿದ್ದೇವೆ ಅವರಿಗೆ ಜನರ ಬಳಿ ಪ್ರಚಾರಕ್ಕೆ ಸಮಯ ಸಿಗುತ್ತಿಲ್ಲ. ಇನ್ನು, ಈ ರೀತಿ ದೂರು ನೀಡಲು ಎಲ್ಲಿ ಸಾಧ್ಯ ಬಿಜೆಪಿಯವರಿಗೆ ಮಾಡಲು ಕೆಲಸ ಇಲ್ಲ. ಹೀಗಾಗಿ ಅವರ ಹೆಸರಿನಲ್ಲಿ ನಕಲಿ ಪತ್ರ ಸೃಷ್ಟಿಸಿ ಹಂಚುತ್ತಿದ್ದಾರೆಂದು ಹೇಳಿದರು.

ಬಿಜೆಪಿಯಲ್ಲಿರುವ ಆಂತರಿಕ ಹುಳುಕು ಮುಚ್ಚಿಕೊಳ್ಳಲು ಈ ರೀತಿ ಪ್ರಯತ್ನ ಮಾಡಲಾಗುತ್ತಿದೆ. ಪ್ರಧಾನಿ ಮೋದಿ ಅವರು ಬಂದು ಬೀದಿ ಬೀದಿ ಅಲೆದಾಡಿದರು. ರೋಡ್ ಶೋ ಮಾಡಿದರು. ಅವರ ಜತೆ ಒಬ್ಬ ರಾಜ್ಯ ನಾಯಕನೂ ಇರಲಿಲ್ಲ. ಕನಿಷ್ಠ ಪಕ್ಷ ಆಯಾ ಕ್ಷೇತ್ರದ ಅಭ್ಯರ್ಥಿಯನ್ನಾದರೂ ಜೊತೆಯಲ್ಲಿ ಇಟ್ಟುಕೊಂಡು ರೋಡ್ ಶೋ ಮಾಡಬಾರದಿತ್ತೆ. ಬೇರೆ ಯಾವುದೇ ನಾಯಕರು ಬೆಳೆಯಬಾರದೇ ನೂತನ ಸಂಸತ್ ಭವನಕ್ಕೂ ಒಬ್ಬರೇ ಹೋಗುತ್ತಾರೆ ರಾಮ ಮಂದಿರ ಪೂಜೆಗೂ ಒಬ್ಬರೇ ಕೂರುತ್ತಾರೆ. ಮತ ಕೇಳುವಾಗಲೂ ಒಬ್ಬರೇ ಮಾಡುತ್ತಾರೆ. ನಾಯಕ ನಾದವ ನಾಯಕರನ್ನು ಸೃಷ್ಟಿ ಮಾಡಬೇಕು. ಈ ಸಮಯದಲ್ಲಿ ಅವರ ನಾಯಕರ ಶಕ್ತಿಯನ್ನು ಅವರೇ ಕುಗ್ಗಿಸುವ ಪ್ರಯತ್ನ ಮಾಡಿದ್ದಾರೆ. ಇದು ಅಚ್ಚರಿ ತಂದಿದೆ ಎಂದು ತಿಳಿಸಿದರು.

ಸೋಲುವ ಭೀತಿಯಿಂದ ಇಷ್ಟು ಅಬ್ಬರದ ಪ್ರಚಾರ ಮಾಡಿದ್ದಾರೆ ಇವರು ಎಷ್ಟೇ ಅಬ್ಬರದ ಪ್ರಚಾರ ಮಾಡಿದರೂ ರಾಜ್ಯದ ಜನ ಕೇಳುವುದಿಲ್ಲ. ಜನರಿಗೆ ಕಾಂಗ್ರೆಸ್ ಪಕ್ಷದ ಗ್ಯಾರಂಟಿ ಯೋಜನೆಗಳು ಹಾಗೂ ದಕ್ಷ ಆಡಳಿತ, ರಾಜ್ಯದ ಅಭಿವೃದ್ಧಿ ಬೇಕಾಗಿದೆ ಎಂದರು.

ನನ್ನ–ಡಿಕೆಶಿ ಸಂಬಂಧ ಸೌಹಾರ್ದಯುತವಾಗಿದೆ, ಸುಳ್ಳು ಪ್ರಚಾರಕ್ಕೆ ಕಾರ್ಯಕರ್ತರು ಬಲಿಯಾಗಬಾರದು:ಸಿದ್ದರಾಮಯ್ಯ



ಬೆಂಗಳೂರು: ಕೆಪಿಸಿಸಿ ಅಧ್ಯಕ್ಷ ಡಿಕೆ.ಶಿವಕುಮಾರ್ ವಿರುದ್ಧ ಅಸಮಾಧಾನ ಹೊರಹಾಕಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರಿಗೆ ವಿಪಕ್ಷ ನಾಯಕ ಸಿದ್ದರಾಮಯ್ಯ ಅವರು ಬರೆದಿದ್ದಾರೆನ್ನಲಾದ ಪತ್ರವೊಂದು ಸಾಮಾ ಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದ್ದು, ಈ ಬಗ್ಗೆ ಸಿದ್ದರಾಮಯ್ಯ ಸ್ಪಷ್ಟನೆ ನೀಡಿದ್ದಾರೆ.

ಸಾಮಾಜಿಕ ಜಾಲತಾಣ ಟ್ವಿಟರ್‌ನಲ್ಲಿ ಟ್ವೀಟ್ ಮಾಡಿರುವ ಸಿದ್ದರಾಮಯ್ಯ ಅವರು, ಬಿಜೆಪಿ ವಿರುದ್ಧ ತೀವ್ರವಾಗಿ ವಾಗ್ದಾಳಿ ನಡೆಸಿದ್ದು, ನಕಲಿ ಪತ್ರದ ವಿರುದ್ಧ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದ್ದಾರೆ.

ಸೋಲಿನ ಭೀತಿಯಿಂದ ಹತಾಶೆಗೀಡಾಗಿರುವ ಬಿಜೆಪಿ ನನ್ನ ಹೆಸರಿನ ಖೊಟ್ಟಿ ಪತ್ರವನ್ನು ರಚಿಸಿ ಅಪಪ್ರಚಾರ ಮಾಡುತ್ತಿದೆ. ಇಂತಹ ಯಾವ ಪತ್ರವನ್ನೂ ನಾನು ಬರೆದಿಲ್ಲ. ಪಕ್ಷದ ಕಾರ್ಯಕರ್ತರು ಮತ್ತು ಅಭಿಮಾನಿಗಳು ಈ ಸುಳ್ಳು ಪ್ರಚಾರಕ್ಕೆ ಬಲಿಯಾಗಬಾರದು ಎಂದು ಹೇಳಿದ್ದಾರೆ. ನನ್ನ ಮತ್ತು ಡಿಕೆ.ಶಿವಕುಮಾರ್ ಸಂಬಂಧ ಸೌಹಾರ್ದಯುತವಾಗಿದೆ, ಇದಕ್ಕೆ ಹುಳಿ ಹಿಂಡುವ ಪ್ರಯತ್ನ ಯಶಸ್ಸು ಕಾಣಲಾರದು. ಶೀಘ್ರದಲ್ಲಿಯೇ ಪೊಲೀಸರಿಗೆ ದೂರು ನೀಡಿ ಈ ಕಿಡಿಗೇಡಿತನದ ಪತ್ರ ಸೃಷ್ಟಿಸಿ ಹಂಚುತ್ತಿರುವವರ ವಿರುದ್ಧ ಕ್ರಮಕೈಗೊಳ್ಳಲು ಒತ್ತಾಯಿಸುತ್ತೇನೆಂದು ತಿಳಿಸಿದ್ದಾರೆ.

ತನ್ನ ಅಧಿಕೃತ ಟ್ವಿಟರ್ ಖಾತೆಯಲ್ಲಿ ಟ್ವೀಟ್ ಮಾಡಿರುವ ಕಾಂಗ್ರೆಸ್, ಸೋಲಿನ ಹತಾಶೆಯಲ್ಲಿ ಬಿಜೆಪಿ ತನ್ನ ಫೇಕ್ ಫ್ಯಾಕ್ಟರಿಗೆ ಹೆಚ್ಚಿನ ಕೆಲಸ ನೀಡಿದೆಬಿಜೆಪಿಯ ನಕಲಿ ಮೋರ್ಚಾವು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರ ಹೆಸರಲ್ಲಿ ನಕಲಿ ಪತ್ರ ಸೃಷ್ಟಿಸಿ ಹರಿಬಿಟ್ಟಿದ್ದಾರೆ. ಸರ್ಕಾರಿ ಲೆಟರ್ ಹೆಡ್, ಹಾಗೂ ಸಿದ್ದರಾಮಯ್ಯನವರ ಸಹಿ ನಕಲು ಮಾಡಿದ್ದು ಗಂಭೀರ ಅಪರಾಧ ಚುನಾವಣಾ ಆಯೋಗ ಹಾಗೂ ಪೊಲೀಸರು ಸಾಮಾಜಿಕ ಜಾಲ ತಾಣಗಳಲ್ಲಿ ಹಂಚಿದವರೆಲ್ಲರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು ಎಂದು ಒತ್ತಾಯಿಸಿದೆ.

ಮತದಾನದ ಬಗ್ಗೆ ಅರಿವು ಮೂಡಿಸುತ್ತಿರುವ ಕಲಾವಿದ

ಮತದಾನ ಮಾರಾಟಕ್ಕಲ್ಲ, ಮತದಾನ ಮಾಡಿ ಪ್ರಜಾಪ್ರಭುತ್ವ ಉಳಿಸಿ



ಮೈಸೂರು,ಮೇ 9(ಜಿಎ)–'ಮತ ಮಾರಾಟಕ್ಕಲ್ಲ' 'ಮತದಾನ ಮಾಡಿ ಪ್ರಜಾಪ್ರಭುತ್ವ ಉಳಿಸಿ' ಎಂದು ಗೋಡೆಗಳ ಮೇಲೆ ಕುಂಚ ಕಲಾವಿದ ಬರೆಯುವ ಮೂಲಕ ಮತದಾನದ ಬಗ್ಗೆ ಜಾಗೃತಿ ಮೂಡಿಸಿದರು.

ಮತದಾನದ ಬಗ್ಗೆ ಈಗಾಗಲೇ ಚುನಾ ವಣಾ ಆಯೋಗ ವಿಭಿನ್ನ ರೀತಿಯಲ್ಲಿ ಜಾಗೃತಿ ಮೂಡಿಸುತ್ತಿದ್ದು, ಅದರಂತೆ ಮೈಸೂರು, ಚಾಮರಾಜನಗರ ಜಿಲ್ಲಾ ಕುಂಚ ಕಲಾವಿದರ ಸಂಘದ ಅಧ್ಯಕ್ಷ ಮಹದೇವ್ ಅವರು ನಗರದ ವಿವಿಧೆಡೆ ಗೋಡೆಗಳ ಮೇಲೆ ಚಿತ್ರ ಬಿಡಿಸಿ, ಮತದಾರರಲ್ಲಿ ಅರಿವು ಹೆಚ್ಚಿಸುತ್ತಿದ್ದಾರೆ.

ಕಳೆದ ನಾಲ್ಕು ದಿನಗಳಿಂದ ನಗರದ ಕೇಂದ್ರ ಕಾರಾಗೃಹದ ಮುಂಭಾಗದ ಗೋಡೆ, ಫೌಂಟನ್ ಸರ್ಕಲ್ ಬಳಿಯ ಗೋಡೆ, ಸಂತ ಫಿಲೋಮಿನ ಚರ್ಚ್ ಹಾಗೂ ಸರ್ಕಾರಿ ಅತಿಥಿ ಗೃಹದ ಬಳಿಯಿರುವ ಗೋಡೆಗಳ ಮೇಲೆ ಕರ್ನಾಟಕದ ಬಾವುಟದ ಬಣ್ಣ ಗಳಾದ ಹಳದಿ ಮತ್ತು ಕೆಂಪು ಬಣ್ಣಗಳನ್ನು ಬಳೆದು ಅದರ ಮೇಲೆ 'ಮತ ಮಾರಾಟ ಕ್ಕಲ್ಲ' 'ಮತದಾನ ಮಾಡಿ ಪ್ರಜಾಪ್ರಭುತ್ವ ಉಳಿಸಿ' 'ಕರ್ನಾಟಕದ ಮತ ಹಬ್ಬ' 'ಆರೋಗ್ಯಕರ ಪ್ರಜಾಪ್ರಭುತ್ವಕ್ಕಾಗಿ ಮತ ಮಾರಿಕೊಳ್ಳಬೇಡಿ' ಎಂದು ಬರೆಯುವ ಮೂಲಕ ಜಾಗೃತಿ ಮೂಡಿಸುತ್ತಿದ್ದಾರೆ.

ಈ ವೇಳೆ ಮಹದೇವ್ ಮಾತನಾಡಿ, ಮತದಾನ ಹೆಚ್ಚಿಸಲು ಹಾಗೂ ಮೈಸೂರಿನಲ್ಲಿ ಕುಂಚ ಕಲಾವಿದರು ಇದ್ದಾರೆ ಎಂದು ಸಾಬೀತು ಪಡಿಸಲು ಈ ರೀತಿ ವಿಭಿನ್ನವಾಗಿ ಸ್ವಂತ ಹಣದಿಂದ ಅಭಿಯಾನ ಮಾಡು ತ್ತಿದ್ದೇನೆ. ಈ ಹಿಂದೆ ಚುನಾವಣೆ ಬಂದ ತಕ್ಷಣ ಅಭ್ಯರ್ಥಿಗಳು ಹಾಗೂ ಸರ್ಕಾರದ ಅಧಿಕಾರಿಗಳು ನಮ್ಮ ಬಳಿ ಬಂದು ಬ್ಯಾನರ್ ಬರೆಸುತ್ತಿದ್ದರು. ಆದರೆ, ಈಗ ನಮಗೆ ಅವಕಾಶಗಳು ಕಡಿಮೆಯಾಗಿವೆ. ಇದನ್ನು ಜಿಲ್ಲಾಡಳಿತ ಗಮನಿಸಿ ನಮಗೆ ಅವಕಾಶ ಕಲ್ಪಿಸಬೇಕು ಎಂದು ಮನವಿ ಮಾಡಿದರು.

ಎಲ್. ಅದಿತಿಗೆ ಎಸ್‌ಎಸ್‌ಎಲ್‌ಸಿಯಲ್ಲಿ ಶೇ.92ರಷ್ಟು ಅಂಕ



ಮೈಸೂರು, ಮೇ 9– ಮೈಸೂರಿನ ವಿಜಯನಗರದ 1ನೇ ಹಂತದಲ್ಲಿರುವ ಕಾವೇರಿ ಚಾರಿಟೆಬಲ್ ಟ್ರಸ್ಟ್‌ನ ಸದ್ವಿದ್ಯಾ ಪ್ರೌಢಶಾಲೆಯ ವಿದ್ಯಾರ್ಥಿನಿ ಎಲ್. ಅದಿತಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 575(ಶೇ.92) ಅಂಕ ಪಡೆದು ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಈಕೆ ಕನ್ನಡದಲ್ಲಿ 125, ಇಂಗ್ಲೀಷ್‌ನಲ್ಲಿ 92, ಹಿಂದಿ 99, ಗಣಿತ 83, ವಿಜ್ಞಾನ 86 ಮತ್ತು ಸಮಾಜ ವಿಜ್ಞಾನದಲ್ಲಿ 90 ಅಂಕ ಪಡೆದಿದ್ದಾಳೆ. ಈಕೆ ಹಿನಕಲ್‌ನ ಸ್ನೇಹಲತಾ ಮತ್ತು ಎಂ.ಸಿ. ಲೋಕೇಶ್‌ರವರ ಪುತ್ರಿಯಾಗಿದ್ದಾರೆ.

ಅರ್ಹರೆಲ್ಲರೂ ಕಡ್ಡಾಯವಾಗಿ ಮತದಾನ ಮಾಡಿ




ಮೈಸೂರು,ಮೇ 9(ಜಿಎ)–ಪ್ರತಿಯೊಬ್ಬ ಅರ್ಹ ಮತದಾರರು ಕಡ್ಡಾಯವಾಗಿ ಮತದಾನ ಮಾಡ ಬೇಕು ಎಂದು ವಕೀಲ ಬಿ.ಶಿವಣ್ಣ ಮನವಿ ಮಾಡಿದ್ದಾರೆ.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಂವಿಧಾನವು ಸಾರ್ವತ್ರಿಕ ವಾಗಿ ಪ್ರಜೆಗಳ ನಡುವೆ ಯಾವುದೇ ತಾರತಮ್ಯ ಮಾಡದೇ ಮತದಾನದ ಹಕ್ಕನ್ನು ನೀಡಿದೆ. ಉತ್ತಮ ಸರ್ಕಾರವನ್ನು ಚುನಾಯಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದ್ದು, ಏನೇ ಕೆಲಸಗಳಿದ್ದರೂ ಪ್ರತಿಯೊಬ್ಬರೂ ನಿರ್ಲಕ್ಷ್ಯ ತೋರದೆ, ಬಿಡುವು ಮಾಡಿಕೊಂಡು ಆಮಿಷ, ಒತ್ತಡಕ್ಕೊಳಗಾಗದೆ ಮತ ಚಲಾಯಿಸಿ ಎಂದು ಮನವಿ ಮಾಡಿದರು. ಗೋಷ್ಠಿಯಲ್ಲಿ ಮಂಜುನಾಥ್, ಸ್ಟೀಫನ್ ಜೋಸೆಫ್, ಮಂಜುನಾಥ್ ವೈರಾಯ್ಕರ್ ಇದ್ದರು.

ಮೈಸೂರು ಜಿಲ್ಲೆಯಲ್ಲಿ 10 ವಿಶೇಷಚೇತನ ಸ್ನೇಹಿ ಮತಗಟ್ಟೆ









ಮೈಸೂರು, ಮೇ 9(ಎಸ್‌ಬಿಡಿ)– ಮೈಸೂರು ಜಿಲ್ಲೆಯಲ್ಲಿ 10 ವಿಶೇಷಚೇತನ ಸ್ನೇಹಿ ಮತಗಟ್ಟೆಗಳನ್ನು ಸಜ್ಜುಗೊಳಿಸಲಾಗಿದೆ.

ವಿಶೇಷಚೇತನರು ಆತ್ಮವಿಶ್ವಾಸದಿಂದ ಮತಗಟ್ಟೆಗೆ ಆಗಮಿಸಿ ತಮ್ಮ ಹಕ್ಕು ಚಲಾಯಿಸಬೇಕೆಂಬ ಉದ್ದೇಶದಿಂದ ವರುಣ ಹೊರತುಪಡಿಸಿ 10 ಕ್ಷೇತ್ರಗಳಲ್ಲಿ ತಲಾ ಒಂದೊಂದು ವಿಶೇಷ ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ.

ಗಾಲಿಕುರ್ಚಿ(ವ್ಹೀಲ್‌ಚೇರ್), ಮತ ಚಲಾಯಿಸಬೇಕೆಂಬ ಕೈಸನ್ನೆ, ಊರು ಗೋಲು, ವಾಕರ್ ಹಿಡಿದು ಮತಗಟ್ಟೆಗೆ ಹೋಗುವ ವ್ಯಕ್ತಿಗಳ ಚಿತ್ರಗಳನ್ನು ಮತ ಗಟ್ಟೆ ಗೋಡೆಗಳಲ್ಲಿ ಅತ್ಯಾಕರ್ಷಕವಾಗಿ ಬಿಡಿಸಲಾಗಿದೆ. ಜೊತೆಗೆ 'ನನ್ನ ಮತ ನನ್ನ ಧ್ವನಿ', 'ನಾನು ವಿಶೇಷಚೇತನ ರಾದರೂ ಮತ ಚಲಾಯಿಸುತ್ತೇನೆ', 'ಮತ ದಾನ ಮಾಡಿ ಪ್ರಜಾಪ್ರಭುತ್ವ ಗಟ್ಟಿ ಗೊಳಿಸಿ', 'ನನ್ನ ಮತ ನನ್ನ ಹಕ್ಕು' ಹೀಗೆ ಮತದಾನದ ಮಹತ್ವ ಸಾರುವಂತಹ ಸಂದೇಶಗಳನ್ನು ಬರೆಯಲಾಗಿದೆ.

ಮತದಾನದಿಂದ ವಿಶೇಷಚೇತನರು ವಂಚಿತರಾಗಬಾರದೆಂಬ ಸದುದ್ದೇಶದಿಂದ ಸ್ಥಾಪಿಸಲಾಗಿರುವ ಈ ವಿಶೇಷ ಮತಗಟ್ಟೆ ಗಳಲ್ಲಿ ವಿಶೇಷಚೇತನ ನೌಕರರೇ ಸ್ವಯಂ ಪ್ರೇರಿತವಾಗಿ ಕಾರ್ಯ ನಿರ್ವಹಿಸಲು ತೆರಳಿದ್ದಾರೆ. ಈ ಮೂಲಕ ವಿಶೇಷಚೇತನ ರನ್ನು ಮತದಾನಕ್ಕೆ ಆಹ್ವಾನಿಸಿರುವುದು ಶ್ಲಾಘನಾರ್ಹ ಎಂದು ಜಿಲ್ಲಾಡಳಿತ ಬಣ್ಣಿಸಿದೆ.

ವಿಶೇಷ ಮತಗಟ್ಟೆಗಳ ವಿವರ: ಮೈಸೂರು ತಾಲೂಕು ಚಾಮುಂಡೇಶ್ವರಿ ಕ್ಷೇತ್ರದ ಶೆಟ್ಟಿನಾಯಕನಹಳ್ಳಿ ಸರ್ಕಾರಿ ಪ್ರೌಢಶಾಲೆ, ನರಸಿಂಹರಾಜ ಕ್ಷೇತ್ರ ರಾಜೇಂದ್ರ ನಗರದ ಇನ್ಸಿಟ್ಯೂಟ್ ಆಫ್ ಎಜುಕೇಷನ್ ಪ್ರೌಢಶಾಲೆ, ಚಾಮರಾಜ ಕ್ಷೇತ್ರ ಮೇಟ ಗಳ್ಳಿಯ ಜೆಎಸ್‌ಎಸ್ ಪ್ರೌಢಶಾಲೆ, ಕೃಷ್ಣರಾಜ ಕ್ಷೇತ್ರದ ದೇವಯ್ಯನಹುಂಡಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಹುಣಸೂರು ಕ್ಷೇತ್ರದ ಧರ್ಮಾಪುರ ಸರ್ಕಾರಿ ಪ್ರೌಢಶಾಲೆ, ತಿ.ನರಸೀಪುರ ವ್ಯಾಪ್ತಿಯ ಸರ್ಕಾರಿ ಪದವಿ ಪೂರ್ವ ಕಾಲೇಜು(ಪ್ರೌಢಶಾಲಾ ವಿಭಾಗ), ಪಿರಿಯಾಪಟ್ಟಣ ಬೈಲುಕುಪ್ಪೆಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ನಂಜನಗೂಡಿನ ಸರ್ಕಾರಿ ಪದವಿ ಪೂರ್ವ ಕಾಲೇಜು, ಕೆ.ಆರ್.ನಗರದ ಹೆಬ್ಬಾಳು ಗ್ರಾಪಂ ಕಚೇರಿ ಹಾಗೂ ಹೆಚ್.ಡಿ.ಕೋಟೆ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ವಿಶೇಷ ಚೇತನ ಸ್ನೇಹಿ ಮತಗಟ್ಟೆ ತೆರೆಯಲಾಗಿದೆ.

ಈ ಮತಗಟ್ಟೆಗಳಲ್ಲಿ ವಿಶೇಷಚೇತನ ರಿಗೆ ಅಗತ್ಯವಾದ ಎಲ್ಲಾ ಸೌಲಭ್ಯಗಳನ್ನೂ ಕಲ್ಪಿಸಲಾಗಿದೆ. ಇವರೊಂದಿಗೆ ಆಯಾಯ ಮತಗಟ್ಟೆ ವ್ಯಾಪ್ತಿಯ ಎಲ್ಲಾ ಮತ ದಾರರೂ ಮತ ಚಲಾಯಿಸಬಹುದಾಗಿದೆ.



ವರುಣ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ವಿ.ಸೋಮಣ್ಣ ಮನೆ ಮನೆ ಮತಯಾಚನೆ ಮಾಡಿದರು.



ನರಸಿಂಹರಾಜ ಕ್ಷೇತ್ರದ ಆಮ್ ಆದ್ಮಿ ಪಕ್ಷದ ಅಭ್ಯರ್ಥಿ ಧರ್ಮಶ್ರೀ ಮನೆ ಮನೆಯಲ್ಲಿ ಮತಯಾಚನೆ.



ಚಾಮರಾಜ ಬಿಜೆಪಿ ಅಭ್ಯರ್ಥಿ ಎಲ್.ನಾಗೇಂದ್ರ ಪರ ಕಿರಣ್‌ಗೌಡ ಮತ್ತಿತರರು ಮತಯಾಚಿಸಿದರು.

ಹುಣಸೂರಲ್ಲಿ ಶಾಂತಿಯುತ ಮತದಾನಕ್ಕೆ ಸಕಲ ಸಿದ್ಧತೆ

ಚುನಾವಣಾಧಿಕಾರಿ ರುಚಿ ಜಿಂದಾಲ್ ಮಾಹಿತಿ



ಹುಣಸೂರು, ಮೇ 9– ಬುಧವಾರ (ಮೇ 10) ನಡೆಯುವ ವಿಧಾನಸಭಾ ಚುನಾವಣೆ ಮತದಾನವನ್ನು ನಗರದಲ್ಲಿ ಶಾಂತಿಯುತವಾಗಿ ನಡೆಸಲು ಸಕಲ ಸಿದ್ಧತೆ ಕೈಗೊಳ್ಳಲಾಗಿದೆ ಎಂದು ಹುಣಸೂರು ವಿಧಾನಸಭಾ ಕ್ಷೇತ್ರದ ಚುನಾವಣಾಧಿಕಾರಿಯೂ ಆದ ಉಪವಿಭಾಗಾಧಿಕಾರಿ ರುಚಿ ಜಿಂದಾಲ್ ತಿಳಿಸಿದರು.

ತಾಲೂಕಿನಾದ್ಯಂತ ಒಟ್ಟು 273 ಮತಗಟ್ಟೆಗಳನ್ನು ನಿರ್ಮಿಸಲಾಗಿದ್ದು, ಈ ಪೈಕಿ 55 ಮತಗಟ್ಟೆಗಳನ್ನು ಸೂಕ್ಷ್ಮ ಮತಗಟ್ಟೆಗಳಾಗಿ ಗುರುತಿಸಲಾಗಿದೆ. ಮತಗಟ್ಟೆ ಸಂಖ್ಯೆ 35, 80, 110, 117 ಹಾಗೂ 149 ಸೇರಿದಂತೆ ಒಟ್ಟು 5 ಮತಗಟ್ಟೆಗಳನ್ನು ಸಖೀ ಮತಗಟ್ಟೆಗಳೆಂದು, ಮತಗಟ್ಟೆ ಸಂಖ್ಯೆ 210, 220 ಹಾಗೂ 351 ಸೇರಿದಂತೆ 3 ಮತಗಟ್ಟೆಗಳನ್ನು ಗಿರಿಜನರಿಗಾಗಿ ಆಶ್ರಮ ಶಾಲೆಗಳಲ್ಲಿ ಭಾರತೀಯ ಗಿರಿಜನ ಅಭಿವೃದ್ಧಿ ಇಲಾಖೆ ವ್ಯವಸ್ಥೆಗೊಳಿಸಿದೆ. ಅಲ್ಲದೇ ಮತಗಟ್ಟೆ ಸಂಖ್ಯೆ 224 ಅನ್ನು ಅಂಗವಿಕಲರಿಗಾಗಿ, ಮತಗಟ್ಟೆ ಸಂಖ್ಯೆ 64 ಅನ್ನು ಜಾಗೃತ ಮತದಾರರಿಗಾಗಿ ಹಾಗೂ ಮತಗಟ್ಟೆ ಸಂಖ್ಯೆ 111 ಅನ್ನು ಯುವ ಮತದಾರರಿಗಾಗಿ ವಿಶೇಷವಾಗಿ ನಿರ್ಮಿಸಲಾಗಿದೆ ಎಂದರು.

ಕ್ಷೇತ್ರದ 273 ಮತಗಟ್ಟೆಗಳಿಗೆ ಅಧಿಕಾರಿಗಳನ್ನು ನಿಯೋಜಿಸಿ 55 ಸಾರಿಗೆ ಬಸ್‌ಗಳು ಹಾಗೂ ಮೂರು ಮಿನಿ ಬಸ್‌ಗಳನ್ನು ಚುನಾವಣಾ ಕಾರ್ಯಕ್ಕೆ ವ್ಯವಸ್ಥೆಗೊಳಿಸಲಾಗಿದೆ. ಪ್ರತಿ ಮತಗಟ್ಟೆಗೆ ಒಬ್ಬರು ಮುಖ್ಯ ಅಧಿಕಾರಿ, ಮೂವರು ಮತಗಟ್ಟೆ ಅಧಿಕಾರಿ, ಓರ್ವ ಬಿಎಲ್‌ಓ, ಓರ್ವ ಡಿ ಗ್ರೂಪ್ ಸಿಬ್ಬಂದಿ, ಓರ್ವ ಪೊಲೀಸ್ ಸಿಬ್ಬಂದಿಯನ್ನು ಕರ್ತವ್ಯಕ್ಕೆ ನಿಯೋಜಿಸಲಾಗಿದೆ.

ಎಲ್ಲಾ ಮತಗಟ್ಟೆಗಳಲ್ಲೂ ಕುಡಿಯುವ ನೀರು, ವಿದ್ಯುತ್, ಅಂಗವಿಕಲರಿಗೆ ವೀಲ್‌ಚೇರ್ ಸೇರಿದಂತೆ ಎಲ್ಲಾ ರೀತಿಯ ಅಗತ್ಯ ಮೂಲ ಸೌಕರ್ಯಗಳನ್ನು ಒದಗಿಸಲಾಗಿದೆ. ಅಲ್ಲದೇ ಗ್ರಾಮೀಣ ಭಾಗದಲ್ಲಿ 92 ರಿಂದ 95% ಹಾಗೂ ನಗರ ಪ್ರದೇಶದಲ್ಲಿ 82 ರಿಂದ 85ರಷ್ಟು ಮತದಾನ ನಡೆಯುವ ನಿರೀಕ್ಷೆ ಇದೆ ಎಂದರು.

ಚುನಾವಣೆಯಲ್ಲಿ ಇಬ್ಬರು ಡಿವೈಎಸ್ಪಿ, ನಾಲ್ವರು ಇನ್ಸ್‌ಪೆಕ್ಟರ್‌ಗಳು, 8 ಮಂದಿ ಸಬ್ ಇನ್ಸ್‌ಪೆಕ್ಟರ್‌ಗಳು, 20 ಮಂದಿ ಎಎಸ್‌ಐ, 197 ಮುಖ್ಯಪೇದೆಗಳು, 143 ಮಂದಿ ಗೃಹ ರಕ್ಷಕದಳ, ಕೇರಳದ 96 ಮಂದಿ ಪೊಲೀಸರು ಸೇರಿದಂತೆ ಒಟ್ಟು 373 ಮಂದಿ ಕಾರ್ಯ ನಿರ್ವಹಿಸಲಿದ್ದಾರೆ. ಅಲ್ಲದೆ ಒಂದು ಕೆಎಸ್‌ಆರ್‌ಪಿ ತುಕಡಿ, ಕೇಂದ್ರಿಯ ಕೈಗಾರಿಕಾ ಭದ್ರತೆಯ ಎರಡು ತುಕಡಿ, ಇಂಡೊ ಟಿಬೆಟಿಯನ್ ಗಡಿ ಭದ್ರತಾ ಪಡೆಯ 2 ತುಕಡಿಗಳು ಕರ್ತವ್ಯ ನಿರ್ವಹಿಸಲಿವೆ ಎಂದು ಡಿವೈಎಸ್ಪಿ ಕೆ.ಎಂ.ಮಹೇಶ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಸಹಾಯಕ ಚುನಾವಣಾಧಿಕಾರಿ ಡಾ.ಅಶೋಕ್, ಎಂಸಿಸಿ ನೋಡಲ್ ಅಧಿಕಾರಿ ಮನು, ಡಿವೈಎಸ್ಪಿ ಮಹೇಶ್ ಇದ್ದರು.

ನಂ.ಗೂಡಲ್ಲಿ ಮತದಾನಕ್ಕೆ ಸಿದ್ಧತೆ ಪೂರ್ಣ

● ಒಟ್ಟು 249 ಮತಗಟ್ಟೆ ಸ್ಥಾಪನೆ ● ಚುನಾವಣಾಧಿಕಾರಿ ಕೃಷ್ಣಮೂರ್ತಿ ಮಾಹಿತಿ



ನಂಜನಗೂಡು, ಮೇ 9– ನಾಳೆ (ಮೇ 10) ನಡೆಯುವ ವಿಧಾನಸಭಾ ಚುನಾವಣಾ ಮತದಾನಕ್ಕೆ ಕ್ಷೇತ್ರದಲ್ಲಿ ಸಿದ್ಧತೆ ಪೂರ್ಣಗೊಂಡಿದ್ದು, ಮತಗಟ್ಟೆ ಸಿಬ್ಬಂದಿಗಳಿಗೆ ಮಂಗಳವಾರ ನಗರದ ಸರ್ಕಾರಿ ಬಾಲಕರ ಪದವಿಪೂರ್ವ ಕಾಲೇಜಿನಲ್ಲಿ ಮತದಾನಕ್ಕೆ ಅಗತ್ಯವಾದ ಸಾಧನ ಸಲಕರಣೆಗಳನ್ನು ವಿತರಿಸಲಾಯಿತು.

12 ಮಂದಿ ಕಣಕ್ಕೆ: ಕ್ಷೇತ್ರದಲ್ಲಿ ಹಾಲಿ ಶಾಸಕ ಬಿ.ಹರ್ಷವರ್ಧನ್ ಸೇರಿದಂತೆ 12 ಮಂದಿ ಸ್ಪರ್ಧಾಳುಗಳು ಕಣದಲ್ಲಿದ್ದಾರೆ. ಒಟ್ಟು 249 ಮತಗಟ್ಟೆಗಳನ್ನು ಸ್ಥಾಪಿಸಿದ್ದು, ಈ ಪೈಕಿ 51 ಸೂಕ್ಷ್ಮ ಮತಗಟ್ಟೆಗಳನ್ನು ಗುರ್ತಿಸಲಾಗಿದೆ. ಇನ್ನು ಚುನಾವಣಾ ಆಯೋಗದ ನಿರ್ದೇಶನದ ಮೇರೆಗೆ 126 ಮತಗಟ್ಟೆಗಳಲ್ಲಿ ಲೈವ್‌ವೆಬ್ ಕಾಸ್ಟಿಂಗ್ ಸೌಕರ್ಯ ಕಲ್ಪಿಸಲಾಗಿದೆ. ತಾಲೂಕಿನ ಶಿರಮಳ್ಳಿ, ಕುರಹಟ್ಟಿ, ನೇರಳೆ, ಕಸುವಿನಹಳ್ಳಿ ಹಾಗೂ ಹಲ್ಲರೆ ಗ್ರಾಮಗಳಲ್ಲಿ ಪಿಂಕ್ ಮತಗಟ್ಟೆ ತೆರೆದಿದ್ದು, ಇಲ್ಲಿ ಮಹಿಳಾ ಸಿಬ್ಬಂದಿಗಳೇ ಕಾರ್ಯ ನಿರ್ವಹಿಸಲಿದ್ದಾರೆ. ಪ್ರತಿಯೊಂದು ಮತಗಟ್ಟೆಗೂ ನಾಲ್ವರು ಅಧಿಕಾರಿಗಳನ್ನು ನಿಯೋಜಿಸುವ ಜೊತೆಗೆ ಓರ್ವ ಪೊಲೀಸ್ ಸಿಬ್ಬಂದಿ ನಿಯೋಜಿಸಲಾಗಿದೆ ಎಂದು ಚುನಾವಣಾಧಿಕಾರಿ ಕೃಷ್ಣಮೂರ್ತಿ ತಿಳಿಸಿದರು.

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಸಚಿವ ವಿ.ಸೋಮಣ್ಣ ಸೇರಿದಂತೆ 15 ಮಂದಿ ಸ್ಪರ್ಧಾಳುಗಳಿಗೆ ವೇದಿಕೆಯಾಗಿರುವ ರಾಜ್ಯದ ಹೈವೋಲ್ಟೇಜ್ ಕ್ಷೇತ್ರವೆಂದೇ ಬಿಂಬಿತವಾಗಿರುವ ವರುಣ ಕ್ಷೇತ್ರದಲ್ಲಿ 261 ಬೂತ್‌ಗಳನ್ನು ತೆರೆಯಲಾಗಿದ್ದು, ಈ ಪೈಕಿ 54 ಮತಗಟ್ಟೆಗಳನ್ನು ಸೂಕ್ಷ್ಮ ಮತಗಟ್ಟೆಗಳು ಎಂದು ಗುರ್ತಿಸಲಾಗಿದೆ. ಕ್ಷೇತ್ರವ್ಯಾಪ್ತಿಯ ತಾಂಡವಪುರ, ಹೊಸಕೋಟೆ ಹಾಗೂ ಸುತ್ತೂರು ಗ್ರಾಮಗಳಲ್ಲಿ 3 ಸಖಿ ಮತಗಟ್ಟೆಗಳನ್ನು ತೆರೆಯಲಾಗಿದೆ.

ಹೆಚ್.ಡಿ.ಕೋಟೆ: ಮತಗಟ್ಟೆಗೆ ತೆರಳಿದ ಅಧಿಕಾರಿಗಳು



ಹೆಚ್.ಡಿ.ಕೋಟೆ, ಮೇ 9– ನಾಳೆ ನಡೆಯುವ ವಿಧಾನಸಭಾ ಚುನಾವಣಾ ಕಾರ್ಯಕ್ಕೆ ಚುನಾವಣಾಧಿಕಾರಿಗಳು ಮತ್ತು ಸಿಬ್ಬಂದಿ ಮತಯಂತ್ರದೊಂದಿಗೆ ತೆರಳಿದರು.

ಕ್ಷೇತ್ರದಲ್ಲಿ 282 ಮತಗಟ್ಟೆಗಳನ್ನು ಸ್ಥಾಪಿಸಲಾಗಿದ್ದು, ಈ ಪೈಕಿ 56 ಮತಗಟ್ಟೆಗಳನ್ನು ಸೂಕ್ಷ್ಮ ಮತಗಟ್ಟೆಗಳೆಂದು ಗುರ್ತಿಸಲಾಗಿದೆ. ಅಲ್ಲದೇ 141 ಮತಗಟ್ಟೆಗಳಿಗೆ ವೆಬ್ ಕಾಸ್ಟಿಂಗ್ ಅಳವಡಿಸಲಾಗಿದೆ. ಚುನಾವಣಾ ಕಾರ್ಯಕ್ಕೆ ಒಟ್ಟು 1,252 ಅಧಿಕಾರಿಗಳು, ಸಿಬ್ಬಂದಿಗಳು, ಪೊಲೀಸರು ಮತ್ತು ಸೇನಾ ಸಿಬ್ಬಂದಿಗಳನ್ನು ನೇಮಕ ಮಾಡಲಾಗಿದ್ದು, ಅತಿ ಸೂಕ್ಷ್ಮ ಮತಗಟ್ಟೆಗಳಿಗೆ ಹೆಚ್ಚಿನ ಸೇನಾ ಸಿಬ್ಬಂದಿಗಳ ನೇಮಕ ಮಾಡಲಾಗಿದೆ. ವಯೋವೃದ್ಧರು, ಅಸಹಾಯಕರಿಗೆ ಆದ್ಯತೆ ಮೂಲಕ ಮತ ಚಲಾಯಿಸಲು ಅವಕಾಶ ನೀಡಲಾಗುವುದು. ಅಂಗವಿಕಲರು, ವಿಕಲಚೇತನರು ಮತ್ತು ವಯೋವೃದ್ಧರಿಗೆ ಗಾಲಿ ಕುರ್ಚಿ ಸಹಾಯದ ಮೂಲಕ ಮತದಾನ ಮಾಡಲು ಅವಕಾಶ ಕಲ್ಪಿಸಲಾಗುವುದು ಎಂದು ಚುನಾವಣಾಧಿಕಾರಿ ಕುಮುದ ಶರತ್ ತಿಳಿಸಿದರು.



ನಂಜನಗೂಡು ತಾಲೂಕಿನ ಕೂಡ್ಲಾಪುರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ದರ್ಶನ್ ಪರ ಬ್ಲಾಕ್ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಬಸವರಾಜು ಮನೆಮನೆಗೆ ತೆರಳಿ ಮತಯಾಚಿಸಿದರು.

ಅಂಜಲಿಗೆ 577 ಅಂಕ



ಹಂಪಾಪುರ, ಮೇ 9–ಹೆಚ್.ಡಿ.ಕೋಟೆ ತಾಲೂಕಿನ ಹೊಮ್ಮರಗಳ್ಳಿ ಸರ್ಕಾರಿ ಪ್ರೌಢಶಾಲೆ ವಿದ್ಯಾರ್ಥಿನಿ ಎಂ.ಅಂಜಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 577 ಅಂಕ ಪಡೆದು ಶಾಲೆಗೆ ಕೀರ್ತಿ ತಂದಿದ್ದಾಳೆ. ಈಕೆ ತಾಲೂಕಿನ ಕೂಲ್ಯ ಗ್ರಾಮದ ಶಾಂತಮ್ಮ, ಮಹದೇವ ದಂಪತಿ ಪುತ್ರಿ. ಈಕೆ ಸಾಧನೆಗೆ ಶಾಲಾ ಮುಖ್ಯಶಿಕ್ಷಕಿ ಯಶೋಧ, ಶಿಕ್ಷಕ ವೃಂದ ಅಭಿನಂದಿಸಿದ್ದಾರೆ.

ಚುನಾವಣೆಗೆ ತಾಲೂಕು ಆಡಳಿತ ಸಕಲ ಸಿದ್ಧತೆ



ತಿ.ನರಸೀಪುರ, ಮೇ 9– ವಿಧಾನಸಭಾ ಚುನಾವಣೆಗೆ ತಾಲೂಕು ಆಡಳಿತ ಸಕಲ ಸಿದ್ಧತೆ ಕೈಗೊಂಡಿದ್ದು, ಈಗಾಗಲೇ ಮತಗಟ್ಟೆಗಳಿಗೆ ನಿಯೋಜನೆಗೊಂಡ ಅಧಿಕಾರಿಗಳು ಮತಯಂತ್ರದೊಂದಿಗೆ ಮತಗಟ್ಟೆಗಳಿಗೆ ತೆರಳಿದ್ದಾರೆ. ಕ್ಷೇತ್ರದಲ್ಲಿ 227 ಮತಗಟ್ಟೆಗಳನ್ನು ತೆರೆಯಲಾಗಿದ್ದು, ಈ ಪೈಕಿ 34 ಸೂಕ್ಷ್ಮ ಮತಗಟ್ಟೆ, 7 ಸಖೀ ಮತಗಟ್ಟೆ, 1 ವಿಕಲಚೇತನರಿಗೆ, 1 ಯುವಕರಿಗೆ ಮತ್ತು ಥೀಮ್ ಬೇಸ್ಡ್ ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ. 1048 ಮಂದಿ ಸಿಬ್ಬಂದಿ ನಿಯೋಜಿಸಲಾಗಿದೆ. ಅಲ್ಲದೇ ಯಾವುದೇ ಅಹಿತಕರ ಘಟನೆ ನಡೆಯದಂತೆ ಪೊಲೀಸ್ ಸಿಬ್ಬಂದಿ ನಿಯೋಜಿಸಿ ಬಿಗಿ ಭದ್ರತೆ ಕೈಗೊಳ್ಳಲಾಗಿದೆ.

ಕ್ಷೇತ್ರದಲ್ಲಿರುವ 1,01,410 ಪುರುಷರು, 1,03,389 ಮಹಿಳೆಯರು, 15 ಮಂದಿ ಇತರರು ಸೇರಿದಂತೆ ಒಟ್ಟು 2,04,824 ಮತದಾರರು ಬೆಳಗ್ಗೆ 7 ರಿಂದ ಸಂಜೆ 6 ರವರೆಗೆ ಮತದಾನ ಮಾಡಲಿದ್ದು, ಅಭ್ಯರ್ಥಿಗಳ ಹಣೆಬರಹ ಬರೆಯಲಿದ್ದಾರೆ.


ಚಾಮುಂಡೇಶ್ವರಿ ಕ್ಷೇತ್ರ
ವಿಧಾನಸಭಾ ಚುನಾವಣೆ–2023
ಆತ್ಮೀಯ ಮತದಾರ ಬಂಧುಗಳೇ,
ದಿನಾಂಕ : 10-05-2023ನೇ ಬುಧವಾರದಂದು ನಡೆಯಲಿರುವ
ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ
ಕ್ರಮ ಸಂಖ್ಯೆ
5
ಎಸ್. ಸಿದ್ದೇಗೌಡ
ಆದ ನನಗೆ ತಮ್ಮ ಅತ್ಯಮೂಲ್ಯವಾದ ಮತವನ್ನು 'ಹಸ್ತ' ದ ಗುರುತಿಗೆ
ನೀಡಬೇಕೆಂದು ತಮ್ಮಲ್ಲಿ ಕೋರುತ್ತೇನೆ.
ತಮ್ಮ ಸೇವಾಕಾಂಕ್ಷಿ : ಶ್ರೀ ಮಾವಿನಹಳ್ಳಿ ಎಸ್. ಸಿದ್ದೇಗೌಡ
ನಂ.1 ಪ್ರತೀ ಮನೆಗೆ 200 ಯೂನಿಟ್ ಉಚಿತ ವಿದ್ಯುತ್
ಕಾಂಗ್ರೆಸ್ ಗ್ಯಾರಂಟಿ ಗೃಹಲಕ್ಷ್ಮಿ ₹2,000
ಕಾಂಗ್ರೆಸ್ ಗ್ಯಾರಂಟಿ - 3 ಅನ್ನಭಾಗ್ಯ ಅಕ್ಕಿ ಉಚಿತ
ಯುವನಿಧಿ ಪ್ರತಿ ತಿಂಗಳು ನಿರುದ್ಯೋಗ ಭತ್ಯೆ ₹3000 ₹1500
ಮತದಾನದ ವೇಳೆ : ಬೆಳಿಗ್ಗೆ 7 ರಿಂದ ಸಂಜೆ 6 ರವರೆಗೆ
ಪ್ರಕಟಣೆ : ಮೈಸೂರು ನಗರ ಜಿಲ್ಲಾ ಕಾಂಗ್ರೆಸ್ ಸಮಿತಿ
ಕಾಂಗ್ರೆಸ್ ಗ್ಯಾರಂಟಿ....ಉತ್ತಮ ನಾಳೆಗಳಿಗಾಗಿ....ಬೆಲೆಯೇರಿಕೆ ಮುಕ್ತ ಬದುಕಿಗಾಗಿ....ನೆಮ್ಮದಿಯ ಜೀವನಕ್ಕಾಗಿ....ಕರ್ನಾಟಕದ ಸಮಗ್ರ ಅಭಿವೃದ್ಧಿಗಾಗಿ ಕಾಂಗ್ರೆಸ್ ಬೆಂಬಲಿಸಿ


ಭಾರತೀಯ ಜನತಾ ಪಾರ್ಟಿ ಕರ್ನಾಟಕ
217 ಚಾಮರಾಜ ವಿಧಾನಸಭಾ ಕ್ಷೇತ್ರ ಚುನಾವಣೆ - 2023
ಮಾನ್ಯರೇ,
ದಿನಾಂಕ 10-05-2023ನೇ ಬುಧವಾರದಂದು ನಡೆಯಲಿರುವ
ವಿಧಾನಸಭಾ ಚುನಾವಣೆಯಲ್ಲಿ ಚಾಮರಾಜ ವಿಧಾನಸಭಾ ಕ್ಷೇತ್ರದ
'ಭಾರತೀಯ ಜನತಾ ಪಾರ್ಟಿ (ಬಿಜೆಪಿ)' ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ
ಕ್ರಮ. ಸಂಖ್ಯೆ.
2
ಎಲ್. ನಾಗೇಂದ್ರ
ಬಟನ್ ಒತ್ತಿರಿ
ಆದ ನನಗೆ ತಮ್ಮ ಅಮೂಲ್ಯವಾದ ಮತವನ್ನು 'ಕಮಲ'ದ ಗುರುತಿಗೆ ನೀಡಿ ಜಯಶೀಲರನ್ನಾಗಿ
ಮಾಡಿ ತಮ್ಮ ಸೇವೆ ಮಾಡಲು ಅವಕಾಶ ಮಾಡಿಕೊಡಬೇಕಾಗಿ ವಿನಂತಿಸಿಕೊಳ್ಳುತ್ತೇನೆ.
ಇಂತಿ ತಮ್ಮ ವಿಶ್ವಾಸಿ,
ಶ್ರೀ ಎಲ್. ನಾಗೇಂದ್ರ
1950
ಮತದಾರರ ಪಟ್ಟಿಯಲ್ಲಿ ನಿಮ್ಮ ಹೆಸರು ಹುಡುಕಲು
ಚುನಾವಣಾ ಆಯೋಗದ ಆ್ಯಪನ್ನು ಉಪಯೋಗಿಸಿ
ಮತದಾನದ ಸಮಯ : ಬೆಳಿಗ್ಗೆ 7 ರಿಂದ ಸಂಜೆ 6 ರವರೆಗೆ
ಪ್ರಕಟಣೆ : ಅಧ್ಯಕ್ಷರು ಹಾಗೂ ಪ್ರಧಾನ ಕಾರ್ಯದರ್ಶಿಗಳು, ಚಾಮರಾಜ ವಿಧಾನಸಭಾ ಕ್ಷೇತ್ರ
ಗಗನ್ ಆರ್. ಗ್ರಾಫಿಕ್ಸ್ ಮೈಸೂರು ಮೊ : 9964742255

ಪ್ರತಿಗಳು: 10,000